ಕರ್ನಾಟ ಪುಸ್ತಕಮಾಲೆ–೨

ಸರಣಿ ಸಂಪಾದಕ: ಆರ್ವಿಯಸ್ ಸುಂದರಂ

# ಚೂಡಾರತ್ನಶತಕ

ವ್ಯಾಖ್ಯಾನ

ಅಕ್ಕಮಹಾದೇವಿ

ಕರ್ನಾಟ

ಅಭಿಜಾತ ಕನ್ನಡ ಕೇಂದ್ರ

**Cudaratnashataka – Vyakhyana**

A commentary by Akkamahadevi on Cudaratnashataka

© 2026 Tattva Heritage Foundation

*First Edition: July 2026*

ISBN: 978-81-985025-6-8

Series Editor
R. V. S. Sundaram

Karṇāṭa Classical Series 2

Karṇāṭa: Executive Board
R.V.S Sundaram, Gil Ben-Herut, and Manish Maheshwari

Published by
Tattva Heritage Foundation
Kolkata, India

All rights reserved. No part of this publication may be reproduced, stored, or transmitted in any form without the prior written permission of the publisher.

The views and interpretations expressed in this book are those of the author. The publisher does not take responsibility for any errors or omissions.

For permissions, enquiries, rights-related matter, please contact:

Manish Maheshwari
namaste@tattvaheritage.org

Typeset by Amruth Chaithanya, Lakshmi K., Mysuru.

Cover design by Sathi Patel, Puducherry.

Printed at Keerthan Graphics, Mysuru

Ph. 9916226213

**ಅಧಿಕೃತ ಮಾರಾಟಗಾರರು**

**ಅಭಿರುಚಿ ಪ್ರಕಾಶನ**

# 386, 14ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–09

ಚರವಾಣಿ: 99805 60013

# ಮುನ್ನುಡಿ

ಕನ್ನಡ ಭಾಷಾಸಾಹಿತ್ಯಗಳ ಪ್ರಾಚೀನತೆ, ವೈಶಿಷ್ಟ್ಯ, ವೈವಿಧ್ಯ ಮತ್ತು ಶ್ರೀಮಂತಿಕೆಗಳ ಬಗೆಗಿನ ಅರಿವು ಅತ್ಯಗತ್ಯ. ಪ್ರಪಂಚದ ಯಾವ ಭಾಷೆಯ ಸಾಹಿತ್ಯಕ್ಕೆ ಹೋಲಿಸಿದರೂ ಕನ್ನಡದ್ದು ಕಡಮೆ ಸಾಧನೆಯೇನಲ್ಲ. ಆಧುನಿಕ ಸಂದರ್ಭದ ಅಗತ್ಯಗಳಿಗನುಗುಣವಾಗಿ ಕನ್ನಡ ಭಾಷೆಯನ್ನು ರೂಪಿಸಿಕೊಂಡು ಅದನ್ನು ಪ್ರಪಂಚಭಾಷೆಯನ್ನಾಗಿ ಮಾಡುವುದು ನಮ್ಮ ಗುರಿಯಾಗಬೇಕು. ಅದರ ಜತೆಗೆ ಕನ್ನಡದ ಭವ್ಯಪರಂಪರೆಯನ್ನು ಕೂಡ ಅರ್ಥಮಾಡಿಕೊಳ್ಳುವುದು ಅಗತ್ಯ. ಇದಕ್ಕೆ ಸಮಗ್ರದೃಷ್ಟಿ ಬೇಕು.

ಅಭಿಜಾತ ಕನ್ನಡ ಪರಂಪರೆಯ ದೃಷ್ಟಿಯಿಂದ ನೋಡಿದಾಗ ಕನ್ನಡದ ಕೊಡುಗೆ ಅಪೂರ್ವವಾದುದು. ಒಂಬತ್ತನೆಯ ಶತಮಾನದಷ್ಟು ಹಿಂದೆಯೇ 'ಕವಿರಾಜಮಾರ್ಗ'ದಂತಹ ಕಾವ್ಯಮೀಮಾಂಸೆ ರಚಿತವಾಗಿರುವುದು ಮಹತ್ತ್ವದ ಸಂಗತಿ. ಈ ಕೃತಿಯ ಹಿರಿಮೆಯನ್ನು ಗಮನಿಸಲೇಬೇಕಾಗಿದೆ. ಕನ್ನಡನಾಡು, ನುಡಿ, ಜನ, ಭಾಷೆ, ವಿವಿಧ ಭಾಷಾರೂಪಗಳು, ನಾಡಿನ ಹರವು, ಅಲ್ಲಿಯ ಜನರ ಚತುರತೆ ಮೊದಲಾದ ಹಲವು ವಿಷಯಗಳಿಗೆ ಕವಿರಾಜಮಾರ್ಗ ಒಂದು ದಾಖಲೆಯಾಗಿದೆ. ಹಾಗಾಗಿ ಇದೊಂದು ಮಾಹಿತಿಕೇಂದ್ರವೆನ್ನಬಹುದು. ಇದರ ಇನ್ನೊಂದು ವಿಶೇಷ ಎಂದರೆ ಭಾರತೀಯ ಕಾವ್ಯ ಸಂಪ್ರದಾಯವನ್ನೂ ಪರಿಚಯಿಸಿ ಅದರೊಂದಿಗೆ ಕನ್ನಡ ಭಾಷಾಭಿವ್ಯಕ್ತಿಯ ಸ್ವಂತಿಕೆಯನ್ನು ಮಿಲನಗೊಳಿಸಿರುವುದು. ಆದುದರಿಂದ ಈ ಕೃತಿ ಭಾರತೀಯ ಕಾವ್ಯಮೀಮಾಂಸೆಗೂ ಪ್ರಮುಖ ಕೊಡುಗೆ ಎನ್ನಬಹುದು.

ನೂರಾರು ವರ್ಷಗಳ ಹಿಂದೆಯೇ ಇಂದಿಗೂ ಪ್ರಸ್ತುತವೆನಿಸುವ ಕಾವ್ಯ ಮೀಮಾಂಸೆ, ಛಂದಸ್ಸು, ವ್ಯಾಕರಣ ಮೊದಲಾದವನ್ನು ಪರಿಚಯಿಸುತ್ತದೆ ಕವಿರಾಜ ಮಾರ್ಗ. ಛಂದೋಂಬುಧಿ, ಶಬ್ದಮಣಿದರ್ಪಣದಂತಹ ಶಾಸ್ತ್ರಗ್ರಂಥಗಳನ್ನು ನೀಡಿರು ವುದು ಕನ್ನಡದ ಹಿರಿಮೆ. ಕನ್ನಡಕ್ಕೆ ಶಾಸ್ತ್ರಗ್ರಂಥಗಳ ಸುದೀರ್ಘ ಪರಂಪರೆಯೇ ಇದೆ. ಛಂದಸ್ಸು, ವ್ಯಾಕರಣಗಳಲ್ಲದೆ ಅಶ್ವಶಾಸ್ತ್ರ, ಗಜಶಾಸ್ತ್ರ, ಸೂಪಶಾಸ್ತ್ರ, ಮದನತಿಲಕ, ಲಾಸ್ಯರಂಜನಂ ಮೊದಲಾದ ವಿಶಿಷ್ಟಶಾಸ್ತ್ರಗಳಿಂದ ಕನ್ನಡ ಭಾಷೆ ಸಂಪದ್ಭರಿತವಾಗಿದೆ.

ಶಾಸ್ತ್ರಗ್ರಂಥಗಳು ಮಾತ್ರವಲ್ಲದೆ ವಡ್ಡಾರಾಧನೆ, ಚಾವುಂಡರಾಯ ಪುರಾಣ ದಂತಹ ಗದ್ಯಗ್ರಂಥಗಳು, ವಿಕ್ರಮಾರ್ಜುನ ವಿಜಯ, ಆದಿಪುರಾಣದಂತಹ ಚಂಪೂ ಕೃತಿಗಳು, ವಚನ ಸಾಹಿತ್ಯ, ಹರಿದಾಸ ಸಾಹಿತ್ಯ, ಬಸವಪುರಾಣ, ಕುಮಾರ ವ್ಯಾಸ ಭಾರತದಂತಹ ಷಟ್ಪದಿ ಕಾವ್ಯಗಳು, ಸಾಂಗತ್ಯ, ತ್ರಿಪದಿ ಛಂದಸ್ಸು ಗಳಲ್ಲಿ ರಚಿತವಾದ ಕೃತಿಗಳು ಕನ್ನಡಸಾಹಿತ್ಯವನ್ನು ಸಮೃದ್ಧಗೊಳಿಸಿವೆ.

ಹಳಗನ್ನಡ ಕೃತಿಗಳನ್ನು ಅರ್ಥಮಾಡಿಕೊಳ್ಳಲು, ಸರಿಯಾಗಿ ಗ್ರಹಿಸಲು ಪರಿಶ್ರಮ ಅಗತ್ಯವೆಂಬುದು ನಿಜ. ಆದರೆ ಕನ್ನಡ ಭಾಷೆಯ ವಿಶಿಷ್ಟಸಾಹಿತ್ಯವನ್ನು ಕಡೆಗಣಿಸುವುದು ಸರಿಯಲ್ಲ. ಈ ಸಾಹಿತ್ಯದ ಬಗೆಗೆ ಅಭಿರುಚಿಯನ್ನು ಬೆಳೆಸಲು ಹಾಗೂ ಅಧ್ಯಯನ ಮಾಡಲು ಮಾರ್ಗಗಳನ್ನು ಹುಡುಕಬೇಕು. ಹಲವು ಹಳಗನ್ನಡ ಕಾವ್ಯಗಳಿಗೆ ಗದ್ಯಾನುವಾದಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಅತ್ಯುತ್ತಮ ಸೇವೆ ಮಾಡಿದೆ. ಕವಿರಾಜಮಾರ್ಗ, ಪಂಪಭಾರತ, ಗದಾಯುದ್ಧ, ಯಶೋಧರ ಚರಿತೆ ಮೊದಲಾದ ಕೃತಿಗಳಿಗೆ ಬಂದಿರುವ ವ್ಯಾಖ್ಯಾನಗಳು ಆ ಕೃತಿಗಳನ್ನು ಅರ್ಥಮಾಡಿಕೊಂಡು ಅಭಿರುಚಿ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸಹಾಯಕವಾಗಿವೆ.

‘ಕರ್ಣಾಟ’ ಎಂಬ ಹೆಸರಿನಲ್ಲಿ ಅಭಿಜಾತ ಕನ್ನಡ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅಭಿಜಾತ ಕನ್ನಡ ಕೃತಿಕಾರರ ಅದ್ಭುತ ಸಾಧನೆಯನ್ನು ಲೋಕಕ್ಕೆ ತಿಳಿಸುವ ಪ್ರಯತ್ನ ಮಾಡಲಾಯಿತು. ಅಭಿಜಾತ ಕನ್ನಡ ಭಾಷೆ, ಸಾಹಿತ್ಯ, ಶಾಸನಗಳು ಮತ್ತು ಪರಂಪರೆಯ ಅಧ್ಯಯನ ‘ಕರ್ಣಾಟ’ದ ಗುರಿಯಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಗಳಲ್ಲಿ ಜಾಲತಾಣದ ಮೂಲಕ ಅಭಿಜಾತ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ. ಹಳಗನ್ನಡ ಪಠ್ಯಗಳನ್ನು ಹಾಗೂ ಶಾಸನಗಳನ್ನು ಜಾಲ ತಾಣಕ್ಕೆ ಅಳವಡಿಸುವುದರ ಜತೆಗೆ ಪಠ್ಯದ ವಿಷಯಗಳನ್ನು ಹುಡುಕುವ ಅವಕಾಶ ವನ್ನೂ ಕಲ್ಪಿಸಲಾಗಿದೆ.

‘ಕರ್ಣಾಟ’ದ ವಿವಿಧ ಯೋಜನೆಗಳಲ್ಲಿ ಅಭಿಜಾತ ಸಾಹಿತ್ಯದಲ್ಲಿ ಆಸಕ್ತರು, ಸಂಶೋಧಕರು, ಅನುವಾದಕರು, ಸಂಪಾದಕರು, ವ್ಯಾಖ್ಯಾನಕಾರರು ಪಾಲ್ಗೊಳ್ಳು ತ್ತಿದ್ದಾರೆ. ‘ಕರ್ಣಾಟ’ ಅನೇಕ ಉಪಯುಕ್ತ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಪ್ರಮುಖವಾದವು:

೧. ಪಂಪಭಾರತದ ಇಂಗ್ಲಿಷ್ ಭಾಷಾಂತರ
೨. ಗಿರಿಜಾಕಲ್ಯಾಣದ ಇಂಗ್ಲಿಷ್ ಭಾಷಾಂತರ
೩. ಲಾಸ್ಯರಂಜನಂ ಗ್ರಂಥದ ಇಂಗ್ಲಿಷ್ ಭಾಷಾಂತರ
೪. ಅಭಿಜಾತ ಕನ್ನಡ ಪಠ್ಯಗಳ ಡೇಟಾಬೇಸ್ (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)
೫. ಕನ್ನಡ ಶಾಸನ ಪದಕೋಶ (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)
೬. ಕನ್ನಡ ಪಂಡಿತ ಪರಂಪರೆ (ಕನ್ನಡ ವಿದ್ವತ್ ಪ್ರಪಂಚಕ್ಕೆ ಕೊಡುಗೆ ನೀಡಿದ ೬೦ ಜನ ವಿದ್ವಾಂಸರ ಸಾಧನೆ).

ಈ ಯೋಜನೆಗಳ ಜತೆಗೆ ಹಳಗನ್ನಡ ಕೃತಿಗಳಿಗೆ ವ್ಯಾಖ್ಯಾನ ಮತ್ತು ಗದ್ಯಾನುವಾದವನ್ನು ಸಿದ್ಧಪಡಿಸುವ ಕೆಲಸವೂ ಮುಂದುವರಿದಿದೆ. ಈ ನಿಟ್ಟಿನಲ್ಲಿ ಕನಕದಾಸರ 'ನಳಚರಿತ್ರೆ' ಹಾಗೂ 'ರಾಮಧ್ಯಾನಚರಿತೆ'ಗಳ ವ್ಯಾಖ್ಯಾನಗಳು ಸಿದ್ಧ ವಾಗಿವೆ. ಈ ಸರಣಿಯಲ್ಲಿ ಸಿದ್ಧವಾಗಿರುವ ಮತ್ತೊಂದು ಕೃತಿ 'ಚೂಡಾರತ್ನ ಶತಕ'. ಇದನ್ನು ಸಿದ್ಧಪಡಿಸಿದವರು ಡಾ. ಅಕ್ಕಮಹಾದೇವಿ. ಇವರು ಈಗಾಗಲೇ 'ಸೋಮೇ ಶ್ವರಶತಕ'ಕ್ಕೆ ವ್ಯಾಖ್ಯಾನವನ್ನು ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸ ಸಾಹಿತ್ಯ ವಿಭಾಗದಲ್ಲಿ, ವಿಶ್ವಕೋಶ ವಿಭಾಗದಲ್ಲಿ, ಕನ್ನಡ ಸಾಹಿತ್ಯ ಚರಿತ್ರೆ ವಿಭಾಗದಲ್ಲಿ ಕೆಲಸ ಮಾಡಿದ್ದಲ್ಲದೆ, ಬೋಧನೆ, ಸಂಶೋಧನೆ ಮತ್ತು ಪಿಎಚ್.ಡಿ. ಪದವಿಗಾಗಿ ಸಂಶೋಧನೆ ಮಾಡುವ ವಿದ್ಯಾರ್ಥಿ ಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. 'ಪುರಂದರದಾಸರ ಮತ್ತು ಅನ್ನಮಾಚಾರ್ಯರ ಕೀರ್ತನೆಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಹರಿದಾಸ ಸಾಹಿತ್ಯ ಮತ್ತು ತೌಲನಿಕ ಸಾಹಿತ್ಯವನ್ನು ಕುರಿತಂತೆ ಇವರು ಅನೇಕ ಪುಸ್ತಕಗಳನ್ನು ಹೊರತಂದಿದ್ದಾರೆ.

ಅತ್ಯಂತ ಜನಪ್ರಿಯವಾದ 'ಚೂಡಾರತ್ನಶತಕ'ದ ಅನ್ವಯಿಕಾರ್ಥ, ಗದ್ಯಾ ನುವಾದ ಹಾಗೂ ವಿಶೇಷ ವಿಚಾರಗಳನ್ನು ಸಿದ್ಧಪಡಿಸಿ ಕೊಟ್ಟಿದ್ದಕ್ಕೆ ಡಾ. ಅಕ್ಕಮಹಾ ದೇವಿ ಅವರಿಗೆ ಧನ್ಯವಾದಗಳು.

ಆರ್‌ವಿಯಸ್. ಸುಂದರಂ

# ಪ್ರಸ್ತಾವನೆ

ಭಾರತೀಯ ಶಾಸ್ತ್ರಕಾರರು ನೀತಿ, ಧರ್ಮ, ನ್ಯಾಯ ಮುಂತಾದವನ್ನು ಶಾಸ್ತ್ರಗಳಾಗಿ ಪರಿಗಣಿಸಿ ಅತ್ಯಂತ ಸೂಕ್ಷ್ಮವಾಗಿ ವಿಭಾಗಿಸಿ ಕೃತಿಗಳನ್ನು ರಚಿಸಿದ್ದಾರೆ. ಕಾಮಂದಕದಂಥ ನೀತಿಶಾಸ್ತ್ರಗಳು ಭಾರತೀಯ ಸಮಾಜನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಾಮಾನ್ಯ ಜನರಿಗೂ ಸುಬೋಧವಾಗುವಂತೆ ಕೆಲವರು ನೀತಿಯನ್ನು ಸುಭಾಷಿತರೂಪದಲ್ಲಿ ಒದಗಿಸಿದ್ದಾರೆ. ಶುಕ್ರನೀತಿಸಾರದಂಥವು ಕೂಡ ಸುಭಾಷಿತ ರೂಪದಲ್ಲಿ ಸರ್ವರಿಗೂ ಸುಪರಿಚಿತವಾಗಿವೆ. ಭರ್ತೃಹರಿಯಂಥ ಕವಿಗಳು ಶತಕ ರೂಪದಲ್ಲಿ ನೀತಿಯನ್ನು ಓದುಗರಿಗೆ ಕೊಡುಗೆಯಾಗಿ ನೀಡಿದ್ದಾರೆ. ಭರ್ತೃಹರಿಯ ಶತಕತ್ರಯ ಸಂಸ್ಕೃತ ಸಾಹಿತ್ಯದಲ್ಲಿ ಅತ್ಯುತ್ತಮ ಸ್ಥಾನವನ್ನು ಪಡೆದಿದೆ. ಶತಕ ಸಾಹಿತ್ಯದಲ್ಲಿ ನೀತಿಶತಕಗಳಿಗೆ ಮಹತ್ತ್ವದ ಸ್ಥಾನವಿದೆ.

ಶತಕ ಭಾರತೀಯ ಸಾಹಿತ್ಯಪ್ರಕಾರಗಳಲ್ಲಿ ಒಂದು. ಶತಕ ಎಂದರೆ ನೂರು ಪದ್ಯಗಳ ಒಂದು ರಚನೆ ಎಂದರ್ಥ. ಸಂಸ್ಕೃತ, ಪ್ರಾಕೃತ, ತೆಲುಗು ಮೊದಲಾದ ಭಾಷೆಗಳಲ್ಲಿ ವಿಕಾಸಹೊಂದಿರುವ ಶತಕ ಕನ್ನಡದಲ್ಲೂ ಒಂದು ಮುಖ್ಯ ಪ್ರಕಾರವಾಗಿ ರೂಪುಗೊಂಡಿದೆ. ಕ್ರಿಸ್ತಶಕ ಮೊದಲನೆಯ ಶತಮಾನದಷ್ಟು ಹಿಂದೆಯೇ ಹಾಲರಾಜ 'ಗಾಥಾಸಪ್ತಶತಿ' ಎಂಬ ಪ್ರಾಕೃತ ಮುಕ್ತಕಗಳ ಸಂಕಲನ ಮಾಡಿದ್ದಾನೆ. ಆದರೆ ಇದರ ಲೇಖಕರು ವಿಭಿನ್ನ ಪ್ರದೇಶಗಳಿಗೆ ಸೇರಿದವರು. ಸಾಮಾನ್ಯವಾಗಿ ಶತಕ ಎಂಬುದು ಸಂಕಲನವಲ್ಲ. ಅದು ಒಬ್ಬನೇ ಕವಿ ರಚಿಸಿದ ಮುಕ್ತಕ ಸಮಾಹಾರವಾಗಿರುತ್ತದೆ. ಶತಕದ ಪದ್ಯಗಳು ಮುಕ್ತಕಗಳಾಗಿರುತ್ತವೆ. ಒಂದು ಪದ್ಯದಲ್ಲಿ ಯಾವುದಾದರೊಂದು ಭಾವದ ಅಭಿವ್ಯಕ್ತಿಯನ್ನು ಕಾಣಬಹುದು. ನೀತಿ, ಭಕ್ತಿ, ವೈರಾಗ್ಯ ಮುಂತಾದವುಗಳಿಗೆ ಸಂಬಂಧಿಸಿದಂತೆ ಒಂದೊಂದು ಪದ್ಯದಲ್ಲೂ ಸ್ವಯಂಪೂರ್ಣ ನಿರೂಪಣೆಯನ್ನು ಕಾಣಬಹುದು. ಭಾವನಿಷ್ಠವಾಗಿರುವುದೂ ಶತಕಪದ್ಯಗಳ ಒಂದು ಲಕ್ಷಣ.

ನೀತಿಗ್ರಂಥಗಳು ಸರ್ವಜನಹಿತವಾದ ನೀತಿಗಳಿಂದ ಕೂಡಿದ್ದು ಜನ ಸಮುದಾಯದ ವರ್ತನೆಯನ್ನು ಒಳ್ಳೆಯದರೆಡೆಗೆ ಕೊಂಡೊಯ್ಯುವ ಗುರಿ ಹೊಂದಿ ರುತ್ತವೆ. ಒಂದು ಕಾಲಕ್ಕೆ, ಒಂದು ವರ್ಗಕ್ಕೆ ಮೌಲ್ಯವಾಗಿ ಕಂಡಂಥ ವಿಚಾರ ಎಲ್ಲ ಕಾಲಕ್ಕೂ ಎಲ್ಲ ವರ್ಗಕ್ಕೂ ಮೌಲ್ಯವಾಗಿರುವುದಿಲ್ಲ. ಇಂಥ ವೈಪರೀತ್ಯಗಳು ಇದ್ದೇ ಇರುತ್ತವೆ. ಇಷ್ಟೆಲ್ಲ ಮಿತಿಗಳ ನಡುವೆಯೂ ದಾರ್ಶನಿಕವಾಗಿ ವ್ಯಕ್ತಿ ಸಾರ್ವಕಾಲಿಕ ಸತ್ಯಗಳನ್ನು ಕಂಡುಕೊಂಡು ಅಭಿವ್ಯಕ್ತಿಸುತ್ತಾನೆ. ಕಾಲ, ಜನರ ಅಭಿರುಚಿ ಇವು ಸಾಂದರ್ಭಿಕ ಸತ್ಯವನ್ನು, ನೀತಿಯನ್ನು ನಿರ್ಣಯಿಸಿದರೂ ಸಾರ್ವಕಾಲಿಕ ಮಾನವೀಯ ಮೌಲ್ಯಗಳು ಕಾಲ ದೇಶಾತೀತವಾಗಿರುತ್ತವೆ. ಪ್ರತಿಭಾವಂತನಾದ ಕವಿ ಅಂಥವನ್ನು ಗ್ರಹಿಸಿ ಅನಾವರಣ ಗೊಳಿಸುತ್ತಾನೆ.

ಕಾವ್ಯ ರಚನೆಯ ಸಂದರ್ಭದಲ್ಲಿ ವಸ್ತು ಮತ್ತು ಅಭಿವ್ಯಕ್ತಿ ಅತ್ಯಂತ ಮುಖ್ಯವಾದವು. ನೀತಿಕಾವ್ಯಗಳು ಸಮಾಜಮುಖೀ ಚಿಂತನೆಗಳನ್ನೊಳಗೊಂಡಿದ್ದು ಮಾನವನ ಹಿತಚಿಂತನೆಯನ್ನೇ ಗುರಿಯಾಗುಳ್ಳಂಥವು. ಇಂಥವು ವಸ್ತುವಿನ ದೃಷ್ಟಿಯಿಂದಲೂ ಮಹತ್ತ್ವ ಪಡೆದಿವೆ. ಹಾಗೆಯೇ ಅಭಿವ್ಯಕ್ತಿ ಮಾಧ್ಯಮದಲ್ಲೂ ನೇರವಾದ ವಸ್ತುವಿಷಯವಿದ್ದು ಜನರಿಗೆ ಸುಲಭವಾಗಿ ಗ್ರಹಿಕೆಗೆ ನಿಲುಕುವಂತಿರುವುದು ಇಂಥ ಕಾವ್ಯಗಳ ವಿಶೇಷಗುಣವಾಗಿವೆ. ನೀತಿಶತಕಗಳು ಕವಿಯ ಪ್ರತಿಭೆಯಿಂದಾಗಿ ಕಾವ್ಯಾತ್ಮಕತೆಯನ್ನು ಪಡೆದುಕೊಳ್ಳುತ್ತವೆ. ಹೇರಳವಾದ ಉಪಮೆಗಳ ಮೂಲಕ ಸರಳವಾಗಿ ನಿರೂಪಣೆಗೊಂಡಿರುವ ಶತಕಗಳು ಆಧುನಿಕ ಸಂದರ್ಭದ ಚುಟುಕು ಗಳಂತಿವೆ. ಒಂದೊಂದು ಪದ್ಯವೂ ಒಂದೊಂದು ಭಾವವನ್ನು ತಿಳಿಸಲು ಸಮರ್ಥ ವಾದ ಛಂದೋರೂಪವನ್ನು ಹೊಂದಿರುತ್ತದೆ. ಇಡೀ ಕೃತಿ ಉತ್ತಮ ಸಂವಹನ ವುಳ್ಳಂಥದೇ ನೀತಿಶತಕದ ಔಚಿತ್ಯ ಪೂರ್ಣ ಶೈಲಿಯಾಗಿರುತ್ತದೆ. ನೀತಿಶತಕ ಹೇಗೇ ಇದ್ದರೂ ಶತಕಕಾರ ತನ್ನ ಪ್ರತಿಭೆ, ಪಾಂಡಿತ್ಯ ಹಾಗೂ ದರ್ಶನದೃಷ್ಟಿಯಿಂದ ಶ್ರೇಷ್ಠಕವಿಗಳ ಸಾಲಿನಲ್ಲಿ ನಿಲ್ಲುತ್ತಾನೆಂದು ನಿಸ್ಸಂದೇಹ ವಾಗಿ ಹೇಳಬಹುದು. ಒಟ್ಟಾರೆ ಶತಕದ ಪ್ರಮುಖ ಉದ್ದೇಶವೆಂದರೆ, ಚಿಕ್ಕಚಿಕ್ಕ ಪದ್ಯಗಳಲ್ಲಿ ಅಂದವಾದ ರಚನೆಯ ಮೂಲಕ ಜ್ಞಾನ, ಭಕ್ತಿ, ವೈರಾಗ್ಯ, ಶೃಂಗಾರಗಳಂತಹ ವಿಷಯಗಳನ್ನು ಸ್ವೋಪಜ್ಞ ವಾಗಿ ನಿರೂಪಿಸುವುದಾಗಿದೆ.

ಶತಕಗಳನ್ನು ಪರಿಶೀಲಿಸುವ ಮೂಲಕ ಕೆಲವು ಲಕ್ಷಣಗಳನ್ನು ಪಟ್ಟಿ ಮಾಡಬಹುದು:

1 **ಸಂಖ್ಯಾನಿಯಮ:** ಶತಕ ಎಂದರೆ ನೂರು ಎಂದರ್ಥ. ಶತಕಕಾರರು ನೂರಕ್ಕಿಂತ ಕಡಿಮೆ ಪದ್ಯಗಳನ್ನು ಬರೆಯುವುದೇ ಇಲ್ಲ. ನೂರರ ಮೇಲೆ ಐದೊ, ಎಂಟೊ, ಹತ್ತೊ, ಹದಿನಾರೊ, ಇಪ್ಪತ್ತೈದೊ ಪದ್ಯಗಳನ್ನು ರಚಿಸುವುದುಂಟು. ಇದು ಆಯಾ ಕವಿಯ ರಚನಾವೈಶಿಷ್ಟ್ಯಕ್ಕೆ ಸಂಬಂಧಿಸಿದ್ದು.

2 **ಅಂಕಿತನಾಮ:** ಶತಕಕಾರರು ತಮ್ಮ ಇಷ್ಟದೈವವನ್ನೊ ಅಥವಾ ಮತ್ತಾವುದೊ ಹೆಸರನ್ನೊ ಪ್ರತಿಯೊಂದು ಪದ್ಯದಲ್ಲಿಯೂ ಅಳವಡಿಸಿ ಪದ್ಯಗಳನ್ನು ರಚಿಸುತ್ತಾರೆ. ಕವಿ ತನ್ನ ಹೆಸರನ್ನೇ ಅಂಕಿತನಾಮವಾಗಿಟ್ಟು ಆತ್ಮಸಂಬೋಧನೆ ಮಾಡಿಕೊಳ್ಳುವುದೂ ಇದೆ. ಕೆಲವರು ಬೇರೆ ಬೇರೆ ಅಂಕಿತಗಳನ್ನು ಬಳಸಿರುವ ಉದಾಹರಣೆಗಳು ಇಲ್ಲದಿಲ್ಲ.

3 ಛಂದೋನಿಯಮ: ಶತಕಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಛಂದೋ ನಿಯಮವನ್ನು ಪಾಲಿಸುವುದುಂಟು. ಇಡೀ ಕೃತಿ ಒಂದೇ ಛಂದಸ್ಸಿನಲ್ಲಿ ಅಥವಾ ಎರಡು ಛಂದಸ್ಸುಗಳಲ್ಲಿ ರೂಪುಗೊಂಡಿರಬೇಕು.

> ಉದಾ: ಕಂದಪದ್ಯವಿದ್ದರೆ ಇಡೀ ಶತಕ ಕಂದಪದ್ಯವನ್ನೇ ಒಳಗೊಂಡಿರುತ್ತದೆ. ಉತ್ಪಲಮಾಲೆ ಬಂದಾಗ ಚಂಪಕಮಾಲೆಯನ್ನು ಬಳಸುವರು. ಸ್ರಗ್ಧರೆ ಮಹಾಸ್ರಗ್ಧರೆಗಳು ಒಟ್ಟಾಗಿ ಬರುವುದು ಸಾಮಾನ್ಯ ಸಂಗತಿ.

4 ರಸ : ಶತಕದಲ್ಲಿ ರಸ ಕೂಡ ಮುಖ್ಯವಾಗಿರುತ್ತದೆ. ಭಕ್ತಿ, ಶೃಂಗಾರ, ವೈರಾಗ್ಯ, ನೀತಿ, ಹಾಸ್ಯ– ಹೀಗೆ ಬೇರೆ ಬೇರೆ ಭಾವಗಳು ಒಂದೇ ಶತಕದಲ್ಲಿ ಬರುವಂತಿಲ್ಲ. ಭಕ್ತಿಭಾವವನ್ನು ನಿರೂಪಿಸುವುದಾದರೆ ಶತಕದುದ್ದಕ್ಕೂ ಅದೇ ಭಾವ ಬರುವಂತೆ ಪದ್ಯಗಳನ್ನು ರಚಿಸಬೇಕು. ಶೃಂಗಾರವಾದರೆ ಶೃಂಗಾರ ಭಾವವೇ ನೀತಿಯಾದರೆ ನೀತಿಯೇ ವೈರಾಗ್ಯವಾದರೆ ವೈರಾಗ್ಯವೇ ಬರಬೇಕೆಂಬುದು ನಿಯಮ.

ಈ ಲಕ್ಷಣಗಳಿರುವ ಶತಕಗಳು ಕನ್ನಡದಲ್ಲೂ ಹಲವಾರಿವೆ. ಅಂಥವುಗಳಲ್ಲಿ 'ಚೂಡಾರತ್ನ ಶತಕ' ಒಂದು ಜನಪ್ರಿಯ ಕೃತಿ.

ಪ್ರಸ್ತುತ ಚೂಡಾರತ್ನ ಶತಕದಲ್ಲಿ 'ಚೂಡಾರತ್ನ' ಎಂಬುದು ಅಂಕಿತನಾಮ ಅಥವಾ ಮುದ್ರಿಕೆಯಾಗಿ ಮೂಡಿಬಂದಿದೆ. ಇದು ಕವಿಯ ನಿಜನಾಮಧೇಯವೂ

ಆಗಿರಬಹುದು ಅಥವಾ ಕಾವ್ಯನಾಮವಾಗಿರಬಹುದು. ಏಕೆಂದರೆ ಕವಿಯ ಕಾಲ, ದೇಶಗಳಾಗಲಿ ಆತನ ಇತರ ಯಾವ ವಿಷಯವಾಗಲಿ ತಿಳಿಯದು. ಕವಿಚರಿತೆಕಾರರು ಇದರ ಮೂರು ಪದ್ಯಗಳನ್ನಷ್ಟೇ ನೀಡಿದ್ದಾರೆ. ಮತ್ತಾವ ವಿವರಗಳನ್ನೂ ನೀಡಿಲ್ಲ. ಚೂಡಾರತ್ನ ಎಂದರೆ ಮುಂದಲೆಗೆ ಧರಿಸುವ ಆಭರಣ; ಮಕುಟಮಣಿ ಎಂದು ಕೂಡಾ ಅರ್ಥವಿದೆ. ಮಕುಟಮಣಿ ಅಥವಾ ಚೂಡಾರತ್ನ ಎಂದರೆ ಶ್ರೇಷ್ಠವ್ಯಕ್ತಿ ಎಂತಲೂ ಅರ್ಥವಿಸಬಹುದು.

ಚೂಡಾರತ್ನ ಶತಕದಲ್ಲಿ ಪ್ರಪಂಚ ಪರಿಶೀಲನೆಯಿಂದ ದೊರೆತ ಲೋಕಾನುಭವದ ಜತೆಗೆ ಸ್ವಾನುಭವದಿಂದ ಪಡೆದ ಅರಿವನ್ನು ನೀತಿಗಳ ಮೂಲಕ ವಿಶದಪಡಿಸಲಾಗಿದೆ. ಈ ಕೃತಿಯಲ್ಲಿ ಬಹುತೇಕ ಸಾಮಾಜಿಕ ನೀತಿಯನ್ನೂ ಸ್ನೇಹಧರ್ಮ, ಸಜ್ಜನನೀತಿ, ಕೌಟುಂಬಿಕ ನೀತಿ ಇತ್ಯಾದಿಗಳ ಜೊತೆಗೆ ಸ್ವಲ್ಪಮಟ್ಟಿಗೆ ರಾಜನೀತಿಯನ್ನೂ ಶ್ರುತಪಡಿಸಲಾಗಿದೆ.

ನೀತಿಯ ಬಗೆಗೆ ಕವಿಯ ಅಭಿಪ್ರಾಯ ಹೀಗಿದೆ–

ನೀತಿಗಳು ಸಕಲಶಾಸ್ತ್ರ
ಖ್ಯಾತಿಗಳಱಿವುಳ್ಳ ರಸಿಕ ಬುಧಜನಮನ ಸಂ
ಪ್ರೀತಿಗಳು ದುಃಖತಿಮಿರ
ಜ್ಯೋತಿಗಳೆಂದೆನಿಸುತಿಹವು ಚೂಡಾರತ್ನಾ

ನೀತಿಗಳು ಖ್ಯಾತಿಯ ಸಕಲಶಾಸ್ತ್ರಗಳ ಅರಿವುಳ್ಳ ರಸಿಕ ವಿದ್ವಾಂಸರಿಗೆ ಪ್ರೀತಿಪಾತ್ರವಾದಂಥವು, ದುಃಖವೆಂಬ ಅಂಧಕಾರಕ್ಕೆ ಜ್ಯೋತಿಗಳೆಂದೆನಿಸುತ್ತವೆ.

ಇದನ್ನೇ ಡಿ.ವಿ.ಜಿ. ಯವರು "ವೇದಗಳು ಶಾಸ್ತ್ರಗಳು ಲೋಕನೀತಿಗಳೆಲ್ಲ ದಾರಿತೋರಲು ನಿಶೆಯೊಳುರಿವ ಪಂಜುಗಳು" ಎಂದಿದ್ದಾರೆ. ನೀತಿಶಾಸ್ತ್ರಜ್ಞರು 'ದುಃಖವೆಂಬ ಅಂಧಕಾರಕ್ಕೆ ಜ್ಯೋತಿಗಳು' ಎಂದರೆ ಡಿ.ವಿ.ಜಿಯವರು 'ಕತ್ತಲೆಯಲ್ಲಿ ಬದುಕಿಗೆ ದಾರಿ ತೋರುವ ಪಂಜುಗಳು' ಎಂದಿರುವುದು ಅರ್ಥಗರ್ಭಿತವಾಗಿದೆ.

ಎಲ್ಲಿ ಸುಶೀಲಂ ಸದ್ಗುಣಂ
ಎಲ್ಲಿ ದಯಂ ಧರ್ಮವೆಸೆವ ಸತ್ಯಂ ನೆಲೆಗೊಂ
ಡಲ್ಲಿಯೆ ಆಯುಂ ಸಿರಿಯುಂ
ಸಲ್ಲೀಲೆಯೊಳಿರ್ಪುದಲ್ತೆ ಚೂಡಾರತ್ನಾ

ಎಲ್ಲಿ ಒಳ್ಳೆಯ ಗುಣ, ದಯಾಧರ್ಮಗಳು ಶೋಭಿಸುವುವೋ ಅಲ್ಲಿ ಸತ್ಯ ನೆಲೆಗೊಂಡು, ಆಯುಸ್ಸು, ಸಂಪತ್ತು ಅನಾಯಾಸವಾಗಿ ಒದಗಿ ಬಂದು ಸಮಾಜ ಸುಭಿಕ್ಷವಾಗಿರುತ್ತದೆಯಲ್ಲವೇ?

ಸತ್ಯ, ಪ್ರಾಮಾಣಿಕತೆ, ಶ್ರಮಜೀವನ ಇದ್ದ ಕಡೆ ಮಾನವನ ಬದುಕು ಹಸನಾಗಿ ಸುಖಸಂಪತ್ತು, ಆಯುರಾರೋಗ್ಯ ವೃದ್ಧಿಸುವುವು.

ಮಜ್ಜಿಗೆಯಿಲ್ಲದ ಊಟಂ
ಸಜ್ಜನ ಸತ್ಪಾತ್ರವರಿತು ಕೊಡದಿಹ ದಾನಂ
ದುರ್ಜನರೊಡನೆ ಸಮೇಳಂ
ಹೆಜ್ಜೆಗೆ ಹರಳೊತ್ತಿದಂತೆ ಚೂಡಾರತ್ನಾ

ಭಾರತೀಯ ಭೋಜನ ಪದ್ಧತಿಯಲ್ಲಿ ಮಜ್ಜಿಗೆಗೆ ಉನ್ನತ ಸ್ಥಾನವಿದೆ. ಊಟವಾದ ಮೇಲೆ ಮಜ್ಜಿಗೆ ಕುಡಿಯುವುದು ಆರೋಗ್ಯಕ್ಕೆ ಉತ್ತಮ. ಹಾಗಾಗಿ ಅದು ಇಲ್ಲದೆ ಊಟ ಪರಿಪೂರ್ಣವೆನಿಸುವುದಿಲ್ಲ. ಸಜ್ಜನ ಸತ್ಪಾತ್ರರಾದವರಿಗೆ ದಾನ ನೀಡಿದರೆ ಅದು ಸದ್ವಿನಿಯೋಗವಾಗುತ್ತದೆ. ಅದು ದುರುಪಯೋಗವಾದರೆ ದಾನಿಗೆ ತುಂಬಾ ನೋವಾಗುತ್ತದೆ. ದುರ್ಜನರ ಸಹವಾಸ ಒಡನಾಟಗಳು ಸಹಿಸಲಾಗದ ನೋವುಂಟು ಮಾಡುವುವು. ಅದು ಅಂಗಾಲಿಗೆ ಹರಳು ಒತ್ತಿದಾಗ ಆಗುವ ನೋವಿನಂತೆ ಎಂದು ಉಪಮಿಸಲಾಗಿದೆ.

ನಾಯಿ ಮೊದಲಾಗಿ ತನ್ನವ
ಗೋಯೆನ್ನದು ತನ್ನರನ್ಯರೆಂಬುದ ಬಲ್ಲುದು
ನೋಯಂ ನುಡಿವ ಮನುಷ್ಯಂ
ನಾಯಿಂದಂ ಕಷ್ಟಮಲ್ತೆ ಚೂಡಾರತ್ನಾ

ಸಾಕುಪ್ರಾಣಿಗಳಿಗೆ ಪ್ರೀತಿ ತೋರಿಸಿದರೆ ಕೊನೆಯ ತನಕ ಅವು ತುಂಬ ವಿಶ್ವಾಸದಿಂದ ನಡೆದುಕೊಳ್ಳುತ್ತವೆ. ಆದರೆ ಮಾನವನ ಎಲುಬಿಲ್ಲದ ನಾಲಗೆ ಏನನ್ನಾದರೂ ನುಡಿಯುತ್ತದೆ. ತಾನು ನುಡಿದುದಕ್ಕೆ ಕಿಂಚಿತ್ತೂ ಬೇಸರಿಸುವುದಿಲ್ಲ. ಮೂಕಪ್ರಾಣಿಗಳಿಗಾದರೂ ಮನುಷ್ಯನ ಭಾವನೆಗಳು ಅರ್ಥವಾಗುತ್ತವೆ. ಆದರೆ ಮಾನವ ಇತರರಿಗೆ ನೋವಾಗುವುದೇನೋ ಎಂದು ಯೋಚಿಸದೆ ತನ್ನಿಚ್ಛೆ ಬಂದಂತೆ ನುಡಿಯುವನು. ಮಾನವ ನಾಯಿಗಿಂತಲೂ ಕಡೆ ಎನ್ನಲಾಗಿದೆ.

ಕಾಲೋಚಿತವರಿದಿತ್ತೊಡೆ
ಮೂಲೋಕವದಿತ್ತ ಸರಿಸಮಾನಮದಕ್ಕುಂ
ಮೇಲೆಡೆಯಾಡಿಸಿ ಕೊಟ್ಟಡೆ
ಕೂಲಿಗೆ ಸರಿಯಾಗದಿಹುದೆ ಚೂಡಾರತ್ನಾ

ಯಾರಿಗೆ ಆದರೂ ಸಮಯೋಚಿತವಾಗಿ ಸಹಾಯಹಸ್ತ ಚಾಚಿದಾಗ ಉಂಟಾಗುವ ಆನಂದಕ್ಕೆ ಪಾರವೇ ಇರುವುದಿಲ್ಲ. ಹಾಗೆ ಸಹಾಯ ಮಾಡಿದಾಗಲೇ ಅದು ಅಮೂಲ್ಯವಾಗಿರುತ್ತದೆ. ಹಾಗಲ್ಲದೆ ಮೀನಮೇಷ ಎಣಿಸುತ್ತ, ಕೊಡುವ ಮನಸ್ಸಿಲ್ಲದೆ ಯಾವಾಗಲೋ ಕೊಟ್ಟರೆ ಅದು ಕೂಲಿ ಕೊಟ್ಟಂತೆ ಇರುತ್ತದೆ. ಮಾನವನಿಗೆ ಸಮಯೋಚಿತಪ್ರಜ್ಞೆ ಎಂಬುದು ಅವಶ್ಯವಾಗಿ ಇರಬೇಕು. ಆಗಲೇ ಬದುಕು ಸಾರ್ಥಕವಾಗುತ್ತದೆ.

ಆಡದೆ ಮಾಡುವನುತ್ತಮ
ನಾಡಿದರೊಳು ಕಿರಿದ ಮಾಡುವಂ ಮಧ್ಯಮನಂ
ತಾಡಿದುದಂ ನಿಷ್ಫಲವಂ
ಮಾಡುವನತಿಕಷ್ಟನಿಳೆಗೆ ಚೂಡಾರತ್ನಾ

ಸಮಾಜಕ್ಕೆ ಏನನ್ನಾದರೂ ಮಾಡುವವರು ತಮ್ಮಷ್ಟಕ್ಕೆ ತಾವು ಮಾಡುವವರು ಉತ್ತಮರು, ಮಾಡುವುದಾಗಿ ಹೇಳಿ ಅದರಲ್ಲಿ ಸ್ವಲ್ಪ ಮಾಡುವವರು ಮಧ್ಯಮರು, ತಾವು ಆಡಿದ ಮಾತು ಪ್ರಯೋಜನಕ್ಕೆ ಬಾರದಂತೆ ನಡೆದುಕೊಳ್ಳುವವರು ಇಳೆಯಲ್ಲಿದ್ದರೆ ತುಂಬ ಕಷ್ಟ. ಕಾಲದೇಶಾತೀತವಾದಂತಹ ಈ ಮೌಲ್ಯಗಳು ಸಾರ್ವ ಕಾಲಿಕವಾದವು. ಅನೇಕರು ಆಡದೆ ಮಾಡುವರು. ಆಡಿ ಅಲ್ಪ ಮಾಡುವವರು ಕೆಲವರು. ಆಡಿಯೂ ಮಾಡದವರು ಸಮಾಜದಲ್ಲಿ ಇರುವುದು ಮಿಥ್ಯವೇನಲ್ಲ.

ನೀತಿ ಹೇಳುವ ಸಂದರ್ಭದಲ್ಲಿ ಕವಿಗಳು ನುಡಿಗಟ್ಟುಗಳನ್ನು, ಉಪಮೆ ಗಳನ್ನು ಬಳಸುವುದುಂಟು. ಚೂಡಾರತ್ನ ಇದಕ್ಕೆ ಹೊರತಾಗಿಲ್ಲ. ಈ ಕೃತಿಯಲ್ಲೂ ಅನೇಕ ನಾಣ್ನುಡಿಗಳು ಕಂಡುಬಂದಿವೆ. ಉದಾ:

'ಹೊನ್ನಂಬಂ ನೀರೊಳಗೆಚ್ಚಂತೆ'
'ಮಾಗಿಯ ಕೋಗಿಲೆಯಂತೆ'
'ಸಂಧ್ಯೆಯ ನೆರವಿಯಂತೆ'

'ಸುಣ್ಣ ಕಲ್ಗಳ ಬಿಸಿಯ ನಿವಾರಿಪೆನೆಂದದರೊಳು ತಣ್ಣೀರಂ ಪೊಯ್ದಂತೆ'
'ನಾಯಬಾಲಂ ಸಸಿನಹುದೇ ಕಟ್ಟಿಬಿಡಲು'
'ಹೆಜ್ಜೆಗೆ ಹರಳೊತ್ತಿದಂತೆ'
'ಪರಿಮಳವನೀವ ಚಂದನಕೊರಡು ಮುರುಡಾದಡೇನು?'
'ವಿಷ ಬಿಡುವುದೆ ಹಾವಿಗೆಷ್ಟು ಹಾಲೂಡಿದೊಡಂ'
'ಸಿರಿಯುಳ್ಳರ ಮನೆಯ ಹೆಣ್ಣ ತಹುದತಿ ಕಷ್ಟಂ'

ಭಾರತೀಯ ಸಾಹಿತ್ಯದಲ್ಲಿ ಶತಕಗಳು ಅಸಂಖ್ಯಾತವಾಗಿದ್ದಂತೆ, ಅವುಗಳಲ್ಲಿ ನೀತಿ ಶತಕಗಳ ಸಂಖ್ಯೆಯೂ ಹೆಚ್ಚಾಗಿಯೇ ಇದೆ. ಸಂಸ್ಕೃತದ ಭರ್ತೃಹರಿ, ಕನ್ನಡದ ಚೂಡಾರತ್ನ ಮತ್ತು ತೆಲುಗಿನ ಸುಮತಿ– ಈ ಮೂವರ ಕಾಲ, ಪ್ರದೇಶ, ಭಾಷೆಗಳು ಭಿನ್ನವಾದರೂ ಭಾವ ಮಾತ್ರ ಒಂದೇ ಬಗೆಯದಾಗಿದೆ. ಇದಕ್ಕೆ ಭಾರತೀಯ ಸಂಸ್ಕೃತಿ, ಭಾರತೀಯರ ಮನಸ್ಥಿತಿಗಳೇ ಕಾರಣ ಎಂದರೆ ತಪ್ಪಾಗಲಾರದು. ಸಂಸ್ಕೃತದ ಭರ್ತೃಹರಿಯ ಕಾಲ ಕ್ರಿಸ್ತಶಕೆಯ ಆರಂಭವಾದರೆ, ತೆಲುಗಿನ ಸುಮತಿ ಹಾಗೂ ಕನ್ನಡದ ಚೂಡಾರತ್ನ ಸಮಕಾಲೀನರಿರಬಹುದು. ಭರ್ತೃಹರಿಯ ನೀತಿ ಶತಕದಲ್ಲಿಯ ವಿಚಾರಧಾರೆಗಳನ್ನೇ ೧೩ನೇ ಶತಮಾನದ ತೆಲುಗಿನ ಸುಮತಿ ಹಾಗೂ ಕನ್ನಡದ ಚೂಡಾರತ್ನ ಇಬ್ಬರೂ ಸ್ವೀಕರಿಸಿ, ದೇಶೀಯ ಭಾಷೆಗಳಲ್ಲಿ ಅದೇ ಚಿಂತನೆಗಳನ್ನು ಹರಿಯಬಿಟ್ಟಿದ್ದಾರೆ.

ಈ ಸಂದರ್ಭದಲ್ಲಿ ಭರ್ತೃಹರಿಯಿಂದ ಪ್ರೇರಣೆ ಪಡೆದು ರಚಿಸಿರುವ ಕೆಲವು ಪದ್ಯಗಳನ್ನು ತೌಲನಿಕವಾಗಿ ಪರಿಶೀಲಿಸಬಹುದು.

ಭರ್ತೃಹರಿ ವಿದ್ಯೆಯ ಬಗೆಗೆ ಹೀಗೆನ್ನುತ್ತಾನೆ:

ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನ ಗುಪ್ತಂ ಧನಂ
ವಿದ್ಯಾ ಭೋಗಕರೀ ಯಶಃ ಸುಖಕರೀ ವಿದ್ಯಾ ಗುರೂಣಾಂ ಗುರುಃ
ವಿದ್ಯಾಬಂಧುಜನೋ ವಿದೇಶಗಮನೇ ವಿದ್ಯಾ ಪರಾ ದೇವತಾ
ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ ವಿದ್ಯಾವಿಹೀನಃ ಪಶುಃ

ವಿದ್ಯೆ ಎಂಬುದು ಬಚ್ಚಿಟ್ಟಿರುವ ಹಣ. ಅದನ್ನು ಯಾರೂ ಕದಿಯಲಾರರು. ವಿದ್ಯೆಯಿಂದ ಭೋಗ, ಕೀರ್ತಿ, ಸೌಖ್ಯ ಉಂಟಾಗುವುದು. ವಿದ್ಯೆ ಎಂಬುದು ಗುರುವಿಗೂ ಗುರು. ಪರದೇಶಗಳಲ್ಲಿ ಸಂಚಾರ ಮಾಡುವವನು ವಿದ್ಯೆಯಿಂದ ಹಣ,

ಕೀರ್ತಿ, ಗೌರವ ಸಂಪಾದಿಸುವುದರಿಂದ ಕಷ್ಟಗಳು ನಿವಾರಣೆಯಾಗುವುದರಿಂದ ವಿದ್ಯೆ ಅವನಿಗೆ ನಂಟನಿದ್ದಂತೆ. ಇಹಪರ ಸೌಖ್ಯವುಂಟುಮಾಡುವ ವಿದ್ಯೆಯೇ ಪರದೈವ. ವಿದ್ಯೆ ಇಲ್ಲದವನು ಪಶುವಿಗೆ ಸಮ.

ಇದೇ ಅಭಿಪ್ರಾಯವೇ ಚೂಡಾರತ್ನನಿಗೂ ಇದೆ.

ಓದಿನೊಳಲ್ಲದೆ ಇಹಪರ
ಸಾಧನ ಸಂಪತ್ತು ಮಾಗದದು ಕಾರಣದಿಂ
ಓದುವುದು ಸಕಲ ಶ್ರುತಮಂ
ಭೇದಿಸಲಳವಪ್ಪುದಲ್ತೆ ಚೂಡಾರತ್ನಾ

ವಿದ್ಯೆ ಇಹಪರ ಸಾಧನೆಗೆ ಸಂಪತ್ತು; ಸಕಲ ವೇದವೇದಾಂಗಗಳನ್ನು ಭೇದಿಸಲು ಅಥವಾ ಪರಿಶೀಲಿಸಿ ವಿಶ್ಲೇಷಿಸಲು ಸಾಮರ್ಥ್ಯ ನೀಡುವುದು ಎನ್ನಲಾಗಿದೆ. ಸತ್ಯ, ಮೌಲ್ಯಗಳನ್ನು ಹೇಳಲು ನೀತಿಶಾಸ್ತ್ರಜ್ಞರು ಹಿಂಜರಿಯಲಿಲ್ಲ.

ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞಃ
ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ವರಂ ನ ರಂಜಯತಿ

ಏನನ್ನೂ ತಿಳಿಯದವನನ್ನು ಮೆಚ್ಚಿಸುವುದು ಸುಲಭ. ಹಾಗೆಯೇ ಹೆಚ್ಚು ತಿಳಿದವರನ್ನು ಮೆಚ್ಚಿಸುವುದು ಸುಲಭ. ಆದರೆ ಅರೆಬರೆ ಜ್ಞಾನಿಗಳನ್ನು (ಅಲ್ಪಜ್ಞಾನಿ) ಮೆಚ್ಚಿಸಲು ಬ್ರಹ್ಮನಿಂದಲೂ ಸಾಧ್ಯವಿಲ್ಲ. ಇದು ಸಾರ್ವಕಾಲಿಕವಾದ ಸತ್ಯ. ಇದನ್ನೇ ಭರ್ತೃಹರಿ ನಿರೂಪಿಸಿದ್ದಾನೆ.

ಚೂಡಾರತ್ನ ಇದನ್ನೇ ಅಲ್ಪ ಬದಲಾವಣೆಯೊಂದಿಗೆ ಹೇಳಿರುವ ಬಗೆ ಇಂತಿದೆ:

ಇಲ್ಲದ ವಿದ್ಯೆಯ ಗರ್ವಂ
ಬಲ್ಲಿದರೊಳು ಸೆಣಸಿ ಹಿಂಗಿ ಕಂದುವ ಭಂಗಂ
ಅಲ್ಲದ ಸತಿಯೊಡನಾಟಂ
ಕೊಲ್ಲದೆ ಮಾಣ್ದಪುದು ಕೇಳು ಚೂಡಾರತ್ನಾ

'ಅಲ್ಪ ವಿದ್ಯಾ ಮಹಾಗರ್ವೀ' ಎಂಬ ಹೇಳಿಕೆಗೆ ಅನುಗುಣವಾಗಿ ಬೇರೆ ಸಂದರ್ಭಗಳನ್ನೂ ಸೇರಿಸಿ ಹೇಳಲಾಗಿದೆ. ವಿದ್ಯೆಯಿಲ್ಲದೆ ಗರ್ವಪಟ್ಟು ವಿದ್ವಾಂಸರೊಡನೆ ಚರ್ಚಿಸಿ ಭಂಗಪಡುವುದನ್ನು ಹೇಳಲಾಗಿದೆ.

ಸಜ್ಜನನ ಬಗೆಗೆ ಭರ್ತೃಹರಿಯ ಅಭಿಪ್ರಾಯ:

ಭವಂತಿ ನಮ್ರಾಸ್ತರವಃ ಫಲೋದ್ಗಮೈ
ರ್ನವಾಂಬುಭಿರ್ಭೂರಿ ವಿಲಂಬಿನೋ ಘನಾಃ
ಅನುದ್ಧತಾಃ ಸತ್ಪುರುಷಾಃ ಸಮೃದ್ಧಿ ಭಿಃ
ಸ್ವಭಾವ ಏವೈಷ ಪರೋಪಕಾರಿಣಾಮ್

ಮರಗಳು ಹಣ್ಣುಗಳಿಂದ ತುಂಬಿ ನಿಂತಾಗ ಬಾಗುತ್ತವೆ. ಮೋಡಗಳು ಕೆಳಮುಖವಾಗಿ ನೀರು ಸುರಿಸುತ್ತವೆ. ಇದರಂತೆ ಸಜ್ಜನರು ತಲೆಯೆತ್ತಿ ಬೀಗದೆ ತಗ್ಗಿಬಗ್ಗಿ ನಡೆಯುತ್ತಾರೆ. ಇದು ಸಜ್ಜನರ ಸ್ವಭಾವ.

ಇದನ್ನೇ ಚೂಡಾರತ್ನ ಹೀಗೆಂದಿದ್ದಾನೆ:

ತಾಗಿ ತಲೆಯೊಡೆದ ಬಳಿಕಂ
ಬಾಗುವುದತಿ ಬುದ್ಧಿಯಲ್ಲವದು ಕಾರಣದಿಂ
ತಾಗದ ವೊಡೆಯದ ಮುನ್ನವ
ನಾಗತವರಿವವನೆ ಜಾಣ ಚೂಡಾರತ್ನಾ

ತಗ್ಗಿಬಗ್ಗಿ ಅಥವಾ ನಯವಿನಯದಿಂದ ನಡೆಯದೆ ಅಹಂಕಾರದಿಂದ ಬೀಗಬಾರದು. ಹಾಗೆ ಬೀಗಿ ಅನಾಹುತ ಆಗುವ ಮುನ್ನ ಬಾಗಿ ನಡೆಯುವವನೇ ಜಾಣ ಎನ್ನಲಾಗಿದೆ. ಇದು ಸಜ್ಜನನಾದವನ ನಡೆ ಹೇಗಿರಬೇಕೆಂಬುದನ್ನು ತಿಳಿಸುತ್ತದೆ.

ತಕ್ಷಕಸ್ಯ ವಿಷಂ ದಂಷ್ಟ್ರಾ। ಸರ್ವಾಂಗಂ ದುರ್ಜನೇ ವಿಷಃ

ಈ ಸಂಸ್ಕೃತ ಶ್ಲೋಕವನ್ನು ದುರ್ಜನನಾದವನ ಸ್ವಭಾವ ತಿಳಿಸುವ ಸಂದರ್ಭದಲ್ಲಿ ಸುಮತಿ ಮತ್ತು ಚೂಡಾರತ್ನ ಯಥಾವತ್ತಾಗಿ ಅನುಕರಿಸಿದ್ದಾರೆ. ಚೂಡಾರತ್ನ ಹೀಗೆ ಹೇಳಿದ್ದಾನೆ:

ಹಲ್ಲುವಿಷಂ ಫಣಿಪತಿಗಂ
ಎಲ್ಲ ವಿಷಂ ದುರ್ಜನಂಗದೆಂತೆನೆ ಪೇಳ್ವೆಂ
ಹಲ್ಲಿಂ ಹದುರಿಂ ಸೊಲ್ಲಿಂ
ಕೊಲ್ಲದೆ ಮಾಣ್ದಪನೆ ಸುಜನ ಚೂಡಾರತ್ನಾ

ಸುಮತಿಯದೂ ಇದಕ್ಕಿಂತ ಭಿನ್ನವೇನಲ್ಲ

ತಲೆಯೊಳು ವಿಷವಾ ಸರ್ಪಕೆ
ಸಲೆ ಚೇಳಿಗೆ ಬಾಲದಗ್ರದಲ್ಲಿಯೆ ವಿಷವೈ
ತಲೆಬಾಲವೆನ್ನದಿರುವುದು
ಖಲನಿಗೆ ಮೈಯೆಲ್ಲ ವಿಷವು ತಿಳಿಯೈ ಸುಮತೀ

ಹೀಗೆ ಏಕಾಭಿಪ್ರಾಯವೇ ಬಿತ್ತರಗೊಂಡಿರುವುದು ಅನೇಕ ಪದ್ಯಗಳಲ್ಲಿದೆ.

**ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ**
**ಯೋನ ದದಾತಿ ನ ಭುಂಕ್ತೇ ತಸ್ಯ ತೃತೀಯಾಗತಿರ್ಭವತಿ ॥ ೪ ॥**

ಸತ್ಪಾತ್ರರಿಗೆ ದಾನ ಮಾಡುವುದು, ತನ್ನ ಹಿತಕ್ಕಾಗಿ ಉಪಯೋಗಿಸುವುದು ಮತ್ತು ತಾನಾಗಿಯೇ ಹಾಳಾಗಿಹೋಗುವುದು– ಇವು ಮೂರು ರೀತಿಯಲ್ಲಿ ಹಣ ಹೋಗಲು ಮಾರ್ಗಗಳು ನೀಡದೆ ಅನುಭವಿಸದೆ ಇರುವವರಿಗೆ ಮೂರನೆಯದೇ ಮಾರ್ಗ.

ಉಳ್ಳಲ್ಲಿ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ
ಉಳ್ಳಲ್ಲಿ ದಾನ ಕೊಡದವನ ಒಡವೆಯು
ಕಳ್ಳಗೆ ನೃಪಗೆ ಸರ್ವಜ್ಞ– ಎಂದಿದ್ದಾನೆ ಸರ್ವಜ್ಞ

ಆಗುಂಬುದಾಗಲುಡುವುದು
ಆಗಳೆ ಕರೆದೀವುದುಚಿತಮಾಗಳಿಗಾಗಂ
ಬೇಗಬೇಗೆಂಬ ಜವನೊಳ
ಗಾಗನು ಮುನ್ನರಿವ ಜಾಣ ಚೂಡಾರತ್ನಾ

ತನ್ನ ಬಳಿ ಇದ್ದಾಗಲೇ ತಾನೂ ಅನುಭವಿಸಿ ಇತರರಿಗೂ ನೀಡುವುದು ಉಚಿತ ಎಂಬ ಭಾವ ಇಲ್ಲಿದೆ.

ಸಲಿಲದಿ ವನರುಹಮಿರಲದ
ನಲರಿಸುವಂ ದಿನಪ ತನ್ನ ನಿಜಕರಕಿರಣದಿ
ಜಲತಪ್ಪಿದರೊಣಗಿಸುವಂ
ನೆಲೆಗೆಟ್ಟರ್ಗಿಷ್ಟರುಂಟೆ ಚೂಡಾರತ್ನಾ

ಯಾರಿಗೆ ಯಾವುದು ಯುಕ್ತ ನೆಲೆಯೊ ಅಲ್ಲೇ ಅವರಿದ್ದರೆ ಲೇಸು. ಹಾಗಲ್ಲದೆ ಬೇರೆಡೆ ಹೋದಾಗ ಅಪಾಯ ತಪ್ಪಿದ್ದಲ್ಲ ಎನ್ನಲಾಗಿದೆ. ಅದನ್ನು ಕಮಲದ ಹೂವಿನ ಉಪಮೆಯ ಮೂಲಕ ವಿವರಿಸಲಾಗಿದೆ.

ಇದೇ ಭಾವವೇ ಕಿಂಚಿತ್ತೂ ವ್ಯತ್ಯಾಸವಾಗದಂತೆ ಸುಮತಿ ಶತಕದಲ್ಲೂ ಬಂದಿದೆ.

ತಾವರೆ ನೀರಂ ಬಿಟ್ಟರೆ
ತಾವರೆಸಖರಶ್ಮಿಯಿಂ ಸೊರಗುವ ತೆರದೊಳ್
ತಾವಿರುವ ತಾವ ಬಿಟ್ಟರೆ
ಜೀವಸ್ನೇಹಿತರು ಶತ್ರು ಜನವೈ ಸುಮತೀ

ತಮ್ಮ ನೆಲೆ ಕಳೆದುಕೊಂಡಾಗ ಜೀವದ ಗೆಳೆಯರು ಕೂಡಾ ಶತ್ರುಗಳಾಗುವರೆಂದಿದ್ದಾನೆ ಕವಿ.

ಮಾತಿನ ಬಗೆಗೆ ಚೂಡಾರತ್ನನ ಅಭಿಪ್ರಾಯ:

ಆವುದು ಸಮಯೋಚಿತವದು
ಭಾವಂ ಬೆರೆಸಿರ್ದ ಹೃದಯದನುವರಿದಳವರಿ
ದಾವವ ನುಡಿವವನವನಂ
ದೇವರೆನಲ್ತಿರದೆ ನೋಡು ಚೂಡಾರತ್ನಾ

ಭಾವವನ್ನು ಬೆರೆಸಿ ಸಮಯೋಚಿತವಾದ ಮಾತುಗಳನ್ನು ಆಡಬೇಕು. ಅದು ಹೃದಯದ ಅನುವನ್ನರಿತಿರಬೇಕು. ಅಂತಹ ಮಾತುಗಳನ್ನಾಡುವವನನ್ನು ದೇವರು ಎನ್ನಲಾಗಿದೆ. ಅಂತಹ ವಾಗ್ಮಿಯನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಲಾಗಿದೆ.

ಎಂದಿಗೆ ಯಾವುದು ಪ್ರಸ್ತುತ
ಅಂದಿಗೆ ಆ ಮಾತನಾಡಿ ಅನ್ಯರ ಮನಮಂ
ಕುಂದಿಸದೆ ತಾ ನೋಯದೆ
ನಿಂದೆಗೊಳದೆ ತಿರುಗುವವನು ಧನ್ಯನು ಸುಮತೀ

ಮಾತಿನ ಮಹತ್ತ್ವ ಕುರಿತಾದ ಪ್ರಸಿದ್ಧ ಪದ್ಯವಿದು. ಯಾವ ಸಂದರ್ಭಕ್ಕೆ ಯಾವ ಮಾತು ಉಚಿತವೊ ಆ ಮಾತನಾಡಿ ಇತರರ ಮನಸ್ಸನ್ನು ನೋಯಿಸದೆ

ತಾನೂ ನೊಂದುಕೊಳ್ಳದೆ ತಪ್ಪಿಸಿಕೊಂಡು ತಿರುಗುವವನೇ ಧನ್ಯನು ಎಂದಿದ್ದಾನೆ ಸುಮತಿ.

ಓರಂತಿದಿರಿನ ಹೃದಯದ
ಸಾರಾಸಾರತೆಯನಱಿದು ನುಡಿವಂಗಿಳೆಯೊಳು
ಕೂರದರಾರ್ ಮೆಚ್ಚದರಾರ್
ಆರಾಧಿಸದಿರ್ಪರಾರು ಚೂಡಾರತ್ನಾ

ಎದುರಾಳಿಗಳ ಸಾಮರ್ಥ್ಯ ಅಸಾಮರ್ಥ್ಯವನ್ನು ಚೆನ್ನಾಗಿ ತಿಳಿದು ನುಡಿಯುವವನನ್ನು ಭೂಮಿಯಲ್ಲಿ ಮೆಚ್ಚದೆ ಇರುವವರಾರು? ಆರಾಧಿಸದಿರುವವರಾರು? ಎಂದು ಮಾತಿನ ಮೌಲ್ಯವನ್ನು ಹೇಳಲಾಗಿದೆ.

ಇಷ್ಟದಿಂದ ಓದದ ಬಾಯಿಯು
ಇಷ್ಟದಿ ಅಮ್ಮನ ಅನ್ನವ ಕೇಳದ ಬಾಯಿ
ಇಷ್ಟದಿಂದ ತಮ್ಮಯೆನದ ಬಾಯ್
ಕಷ್ಟದಿ ಕುಂಬಾರನಗೆದ ಕುಳಿಯಂತೆ ಸುಮತೀ

ಸ್ವಯಿಚ್ಛೆಯಿಂದ ಓದದ, ಅಮ್ಮನನ್ನು ಕರೆದು ಅನ್ನವ ಕೇಳದ, ತಮ್ಮನನ್ನು ಕರೆಯದ ಬಾಯಿ ಕುಂಬಾರನು ಅಗೆದ ಕುಳಿಗೆ ಸಮ ಎಂದಿದ್ದಾನೆ ಸುಮತಿ.

ಇದನ್ನೇ ಚೂಡಾರತ್ನ ಹೀಗೆಂದಿದ್ದಾನೆ,

ಓದದ ಬಾಯ್ ಅಮೃತಾನ್ನವ
ಮೋದದ ಬಾಯ್ ಸಜ್ಜನರ್ಕಳ ಪ್ರಿಯದಿಂ
ಆದರಿಸದ ಬಾಯದು ತಾಂ
ಮೇದಿನಿಯೊಳು ಬಿಲದ ಬಾಯಿ ಚೂಡಾರತ್ನಾ

ಸುಮತಿ, ಚೂಡಾರತ್ನ ಇಬ್ಬರೂ ಬಾಯಿಯ ಬಗೆಗೆ ಏಕಾಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ.

ಕನಕದ ಸಿಂಹಾಸನದೊಳ್
ಶುನಕದ ಕರೆತಂದು ಕೂರಿಸಿ ಶುಭಲಗ್ನದೊಳು
ಘನದಿಂ ಪಟ್ಟವ ಕಟ್ಟಲು
ತನ್ನ ಹಿಂದಿನ ಗುಣವದೇಕೆ ತೊರೆವುದು ಸುಮತೀ

ಕೆಟ್ಟ ಬುದ್ಧಿಯುಳ್ಳವರನ್ನು ಕುರಿತು ಹೇಳುವ ಪದ್ಯವಿದು;

'ಹುಟ್ಟಿದ ಗುಣ ಸುಟ್ಟರೂ ಹೋಗದು' ಎಂಬ ಮಾತಿಗೆ ಅನುಗುಣವಾಗಿ ಮೂಡಿಬಂದಿದೆ.

ಇದನ್ನೇ ಚೂಡಾರತ್ನ ಹೀಗೆಂದಿದ್ದಾನೆ

ಕನಕದ ಸಿಂಹಾಸನದೊಳು
ಶುನಕನ ಕುಳ್ಳಿರಿಸಿ ಸೇಸೆದಳಿಯಲು ಮತ್ತಂ
ತನು ಕೆರಳಿ ಬಗುಳ್ವುದಲ್ಲದೆ
ಘನತೆಯದಕುಂಟೆ ವಿವೇಕ ಚೂಡಾರತ್ನಾ

ಇಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಭಾವ ಮಾತ್ರ ಒಂದೇ. ಮೊದಲ ಎರಡು ಸಾಲುಗಳು ಒಂದೇ ಬಗೆಯಲ್ಲಿವೆ. ಮೂರು ನಾಲ್ಕನೆಯ ಸಾಲುಗಳು ಸುಮತಿಗಿಂತ ಸ್ವಲ್ಪ ಭಿನ್ನವಾಗಿವೆ. 'ತನುಕೆರಳಿ ಬಗಳ್ವುದು ಘನತೆಯದಕುಂಟೆ' ಎಂಬುದಕ್ಕಿಂತ 'ಹಿಂದಿನ ಗುಣವನ್ನು ಅದೇಕೆ ತೊರೆವುದು' ಎಂಬ ಮಾತುಗಳು ಹೆಚ್ಚು ಶಕ್ತವಾಗಿದ್ದು ಭಾವತೀವ್ರತೆಯಿಂದ ಕೂಡಿವೆ.

ತಾಂಬೂಲದ ಪ್ರಾಮುಖ್ಯವೇನೆಂಬುದನ್ನು ಚೂಡಾರತ್ನ ಹೇಳಿರುವ ಬಗೆಯಿದು:

ತಂಬುಲವಿಲ್ಲದ ಮೊಗಮುಂ
ನಂಬುಗೆಯಿಲ್ಲದ ಹರದು ದೋಷಿಯ ತಪಮುಂ
ಇಂಬರಿಯದವಳೊಳಾಟಂ
ಕುಂಭಿನಿಗದು ಹಾಸ್ಯ ಸುಕವಿ ಚೂಡಾರತ್ನಾ

ತಾಂಬೂಲವಿಲ್ಲದ ಬಾಯಿ ಭೂಮಿಯಲ್ಲಿ ಹಾಸ್ಯಾಸ್ಪದ ಎಂದಿದ್ದಾನೆ.

ಸುಮತಿ ಶತಕಕಾರ ಇನ್ನೂ ಸೊಗಸಾಗಿ ಬಾಯಿಯ ಬಗೆಗೆ ಹೇಳಿದ್ದಾನೆ:

ಎಲೆಯಡಕೆ ತಿನದ ಬಾಯಿಯು
ತಿಳಿ ಜವ್ವನಿಯಧರಾಮೃತ ಸವಿಯದ ಬಾಯಿ
ಗಳಿಲನೆ ಹಾಡದ ಬಾಯಿಯು
ಕೊಳೆನೀರಿನ ಗುಂಡಿಯಂತೆ ತಿಳಿಯೈ ಸುಮತೀ

ಎಲೆಯಡಕೆ ತಿನ್ನದ ಬಾಯಿ, ಯುವತಿಯರ ಅಧರಾಮೃತವ ಸವಿಯದ ಬಾಯಿ, ಸುಶ್ರಾವ್ಯವಾಗಿ ಹಾಡದ ಬಾಯಿ ಕೊಳೆನೀರಿನ ಗುಂಡಿಯಂತೆ ಎಂದು ದುರ್ನಾತಕ್ಕೆ ಹೋಲಿಸಿದ್ದಾನೆ. ಇಲ್ಲಿಯ ವಿವರ ಹಾಗೂ ಉಪಮೆ ಸಮಂಜಸವಾಗಿದೆ.

ಸಿರಿ ತಾಂ ಬಂದರೆ ಬರುವುದು
ಸರಸದೊಳಾ ನಾರಿಕೇಳಕುದಕದ ಪರಿಯಿಂ
ಸಿರಿತಾಂ ಪೋದರೆ ಪೋಪುದು
ಕರಿನುಂಗಿದ ಬೆಳದ ಹಣ್ಣಿನಂದದಿ ಸುಮತೀ

ಸಿರಿ ಬಂದರೆ ಬರುವುದು ತನ್ನಷ್ಟಕ್ಕೇ ತಾನೇ. ಅದು ಹೇಗೆಂದರೆ ತೆಂಗಿನಕಾಯಿಯೊಳಗೆ ಅನಾಯಾಸವಾಗಿ ಮಧುರವಾದ ಜಲ ಬರುವಂತೆ. ಅದು ಹೋದರೆ ಹೋಗುವುದು ಆನೆ ನುಂಗಿದ ಬೇಲದ ಹಣ್ಣಿನಂತೆ– ಎಂದಿದ್ದಾನೆ ಸುಮತಿ.

ಸುಮತಿ ಹೇಳಿರುವಂತೆಯೇ ಚೂಡಾರತ್ನನೂ ತೆಂಗಿನ ಉಪಮೆಯನ್ನೇ ನೀಡಿ ಬೇರೊಂದು ಸಂದರ್ಭವನ್ನು ವಿವರಿಸಿದ್ದಾನೆ.

ವಿತ್ತಾನುಂ ಸತ್ಪುರುಷ
ರ್ಗಿತ್ತೊಡೆ ಫಲ ತಪ್ಪದಕ್ಕುದೆಂತೆನೆ ತೆಂಗಂ
ಬಿತ್ತಿಯೆ ನೀರೆರೆಯಮೃತವ
ಹೊತ್ತಿರದೇ ನೆತ್ತಿಯಲಿ ಚೂಡಾರತ್ನಾ

ಹಣವನ್ನು ಸತ್ಪುರುಷನಾದವನಿಗೆ ದಾನ ಮಾಡಿದರೆ ಫಲ ತಪ್ಪದು. 'ತೆಂಗಿನನೊಳಗೆ ನೀರೆರೆಯಮೃತ ಹೊತ್ತಂತೆ' ಪುಣ್ಯಪ್ರಾಪ್ತಿಯಾಗುತ್ತದೆಂದು ಹೇಳಲಾಗಿದೆ. ಸಂದರ್ಭ ಬೇರೆಯಾದರೂ ಉಪಮೆ ಮಾತ್ರ ಒಂದೇ ಆಗಿದೆ.

ಬೇರೆ ಬೇರೆ ಭಾಷೆಗಳಲ್ಲಿರುವ ನೀತಿಪದ್ಯಗಳನ್ನು ಗಮನಿಸಿದಾಗ ಕವಿಯಾದವನು ಮಾನವ ಸ್ವಭಾವವನ್ನು ಸೂಕ್ಷ್ಮವಾಗಿ ಗಮನಿಸಿ ಏನಾದರೂ ಲೋಪವಿದ್ದರೆ ಅದನ್ನು ತಿದ್ದಲು ಪ್ರಯತ್ನಿಸುತ್ತಾರೆಂಬುದು ಸ್ಪಷ್ಟವಾಗುತ್ತದೆ. ಇಂಥ ಆಲೋಚನೆಗಳಲ್ಲಿ ಹೋಲಿಕೆ ಇರುವುದು ಸಹಜ. ಚೂಡಾರತ್ನ ಶತಕದಲ್ಲಿರುವ ಸರಳವಾದ ಮತ್ತು ನೇರವಾದ ಅಭಿವ್ಯಕ್ತಿ ಅದನ್ನು ಜನಪ್ರಿಯಗೊಳಿಸಿದೆ.

ಈ ಶತಕವನ್ನು ಅರ್ಥ, ಭಾವ ಮತ್ತು ವಿಶೇಷ ನಿರೂಪಣೆಯ ಮೂಲಕ ಓದುಗರಿಗೆ ತಲಪಿಸುವ ಪ್ರಯತ್ನವಿದು. ಇದು 'ಕರ್ಣಾಟ' ಸಂಸ್ಥೆಯ ಮನೀಶ್

ಮಹೇಶ್ವರಿ ಹಾಗೂ ಆರ್ವಿಯಸ್ ಸುಂದರಂ ಅವರ ಪ್ರೋತ್ಸಾಹದಿಂದ ಸಾಧ್ಯವಾಯಿತು. ಅವರಿಗೆ ಧನ್ಯವಾದಗಳು.

**ಆಧಾರ ಗ್ರಂಥಗಳು**

1. ಎನ್.ಕೆ. ನರಸಿಂಹಮೂರ್ತಿ, ಭರ್ತೃಹರಿಯ ಶತಕತ್ರಯ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಪ್ರಥಮ ಮುದ್ರಣ, 1986.
2. ಡಿ.ಟಿ. ರಂಗಸ್ವಾಮಿ, ಚೂಡಾರತ್ನ ಶತಕ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ಪ್ರಥಮ ಮುದ್ರಣ, 1976.
3. ಬಿ.ಎಸ್. ಸಣ್ಣಯ್ಯ, ನೀತಿ ಸಾರೋದಯ, ಪ್ರಬುದ್ಧ ಕರ್ಣಾಟಕ, ಸಂಪುಟ ೬೬, ಸಂಚಿಕೆ ೪.
4. ಆಲೂರು ರಾಮಶಾಸ್ತ್ರಿ (ಅನು), ಸುಮತಿ ಶತಕ, ಸತ್ಯಶೋಧನಾಲಯ, ಚಳ್ಳಕೆರೆ, 1981.
5. ಎಂ. ದೇವರಕೊಂಡಪ್ಪ (ಅನು), ಅನುಭವ ಬೋಧಾಮೃತ (ಸುಮತಿ ಶತಕ), ಬಳ್ಳಪಲ್ಲಿ ಪ್ರಕಾಶಕರು, ಬೆಂಗಳೂರು, ಮೊದಲ ಮುದ್ರಣ, 1995.

# ಚೂಡಾರತ್ನಶತಕ

# ಚೂಡಾರತ್ನಶತಕ

೧

ಅಕ್ಕರದಜತೆಗೆ ಛಂದವು
ತರ್ಕಂವ್ಯಾಕರಣದಜೀವನಜೀತೋದದಬಾಯ್
ಲೆಕ್ಕಕ್ಕೋದುವನೋದುಂ
ಸೊಕ್ಕಿದನರಿಯಾಡುವಂತೆ ಚೂಡಾರತ್ನಾ

ಅಕ್ಕರದ=ಅಕ್ಷರದ; ಜತೆಗೆ=ಅಕ್ಷರವನ್ನು ಕಲಿಯುವುದರ ಜತೆಯಲ್ಲೇ; ಛಂದಸ್ಸು=ಛಂದಸ್ಸು; ತರ್ಕಂ=ತರ್ಕ, ವ್ಯಾಕರಣದ+ಅಜೀವನ್+ಅಜೀತು+ಓದದ= ವ್ಯಾಕರಣದ ಅಜೀವನ್ನು ತಿಳಿದು ಓದದ; ಬಾಯ್=ಬಾಯಿ; ಲೆಕ್ಕಕ್ಕೆ+ ಓದುವನ+ ಓದುಂ=ಲೆಕ್ಕಕ್ಕಾಗಿ ಓದುವವನ ಓದು; ಸೊಕ್ಕಿದ=ಸೊಕ್ಕಿದ;ನರಿಯು+ ಆಡುವಂತೆ= ನರಿಯು ಆಡುವಂತೆ.

ಅಕ್ಷರದ ಜತೆಯಲ್ಲೇ ಛಂದಸ್ಸು, ತರ್ಕ, ವ್ಯಾಕರಣದ ಜ್ಞಾನವಿಲ್ಲದೆ ಕೇವಲ ಓದಿಗಾಗಿ ಓದುವ ಓದು ಸೊಕ್ಕಿದ ನರಿ ಆಡುವಂತೆ ಎಂದಿದ್ದಾನೆ ಕವಿ.

ವಿದ್ಯೆ ಅಥವಾ ಓದು ಎಂಬುದು ಛಂದಸ್ಸು, ತರ್ಕ, ವ್ಯಾಕರಣಮೀಮಾಂಸೆ ಇತ್ಯಾದಿಗಳನ್ನೆಲ್ಲ ಒಳಗೊಂಡಿರುವಂಥದು. ಹಾಗಲ್ಲದೆ ಕೇವಲ ಓದಿಗಾಗಿ ಅಥವಾ ಪದವಿಗಾಗಿ ಓದುವವರನ್ನು ಸೊಕ್ಕಿದ ನರಿಗೆ ಹೋಲಿಸಲಾಗಿದೆ. 'ತನಗೆಟುಕದ ದ್ರಾಕ್ಷಿ ಹುಳಿ' ಎಂದು ಹೇಳುವ ನರಿಯ ಗರ್ವವನ್ನು ಕುರಿತಾದ ಕಥೆಯನ್ನು ಕವಿ ನೆನಪಿಸಿದ್ದಾನೆ. ಸೊಕ್ಕಿದ ನರಿ ಅತಿಯಾದ ಆತ್ಮವಿಶ್ವಾಸ ಹೊಂದಿ ಇತರರನ್ನು ಕೀಳಾಗಿ ಕಂಡು ತನ್ನ ಶ್ರೇಷ್ಠತೆಯನ್ನು ಪ್ರದರ್ಶನ ಮಾಡುತ್ತದೆ. ಯಾವ ಪ್ರಯತ್ನವನ್ನೂ ಪಡದೆ ಸುಮ್ಮನೆ ಓದುವುದರಿಂದ ಜ್ಞಾನಾರ್ಜನೆ ಮಾಡಿದಂತಾಗುವುದಿಲ್ಲ. ವಿದ್ಯೆಯ ಎಲ್ಲ ಶಾಖೆಗಳನ್ನೂ ಅಧ್ಯಯನ ಮಾಡಿದಾಗ ಮಾತ್ರ ಜ್ಞಾನ ಸಂಪಾದಿಸಲು ಸಾಧ್ಯವಾಗುವುದು ಎಂಬ ಎಚ್ಚರಿಕೆಯ ಮಾತನ್ನು ಕವಿ

ಹೇಳುತ್ತಾನೆ. ಪ್ರಸ್ತುತ ವಿದ್ಯಾಭ್ಯಾಸದ ಕ್ರಮದಲ್ಲಿ ಎಲ್ಲವನ್ನೂ ಕಲಿಯುವ ವ್ಯವಸ್ಥೆ ಇಲ್ಲ. ಜ್ಞಾನದ ಒಂದೇ ಒಂದು ಶಾಖೆಯನ್ನು ಮಾತ್ರ ಅರಿಯಬೇಕಾಗುತ್ತದೆ. ಪ್ರಪಂಚಜ್ಞಾನ, ವ್ಯಾವಹಾರಿಕ ಜ್ಞಾನವಿಲ್ಲದೆ ಕೂಪಮಂಡೂಕಗಳಂತಿರಬೇಕು ಅಷ್ಟೇ.

೨

ಅಕ್ಕರಿಗರ ಗೋಷ್ಠಿ ಸುಜನರ
ಬರ್ಕುಡಿ ಸಜ್ಜನರ ಕೆಳೆ ವಿದಗ್ಧೆಯರ ಸಂಗಂ
ತಕ್ಕರೊಡನಾಟವಾಗಲ್
ಮಿಕ್ಕ ಸುಖಂ ಬಳಿಕದೇಕೆ ಚೂಡಾರತ್ನಾ

ಅಕ್ಕರಿಗರ ಗೋಷ್ಠಿ=ಅಕ್ಷರಸ್ಥರ ಅಥವಾ ವಿದ್ಯಾವಂತರ ಸಹವಾಸ; ಸುಜನರ ಬರ್ಕುಡಿ=ಸುಜ್ಜನರೊಡನೆ ಚರ್ಚೆ; ಸಜ್ಜನರ ಕೆಳೆ=ಸಜ್ಜನರ ಗೆಳೆತನ; ವಿದಗ್ಧೆಯರ ಸಂಗಂ=ಪ್ರೌಢವನಿತೆಯ ಸಂಗ; ತಕ್ಕರ+ಒಡನಾಟವಾಗಲ್=ಸರಿಸಾಟಿಯಾದವರ ಒಡನಾಟವಾಗಲು; ಮಿಕ್ಕ ಸುಖಂ=ಉಳಿದ ಸುಖವೆಲ್ಲ; ಬಳಿಕ+ಅದೇಕೆ=ಬಳಿಕ ಅದೇಕೆ?

ವಿದ್ಯಾವಂತರ ಸಹವಾಸ, ಸುಜನರೊಡನೆ ಚರ್ಚೆ, ಸಜ್ಜನರ ಗೆಳೆತನ, ಪ್ರೌಢವನಿತೆಯರ ಸಂಗ; ತನಗೆ ಸರಿಸಾಟಿಯಾದವರ ಒಡನಾಟವಿರಲು ಉಳಿದ ಸುಖಗಳು ಅದೇಕೆ?

'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ', 'ಗಂಧದವನೊಡನೆ ಗುದ್ದಾಟ'-ಎಂಬ ನಾಣ್ಣುಡಿಗಳಿಗೆ ಅನುಗುಣವಾಗಿ ಮೂಡಿಬಂದಿರುವ ಪದ್ಯವಿದು. ವಿದ್ಯಾವಂತರ ಸಹವಾಸ, ಸುಜನರ ಗೋಷ್ಠಿ, ಸಜ್ಜನರ ಗೆಳೆತನ, ಪ್ರೌಢೆಯರ ಸಂಗ, ಸಮಾನ ಮನಸ್ಕರ ಒಡನಾಟವಿರಲು ಉಳಿದ ಸುಖಗಳ ಅಗತ್ಯವಾದರೂ ಏಕೆ? ಎನ್ನಲಾಗಿದೆ.

೩

ಅತಿವ್ಯಸನದಿಂ ದಶಶಿರ
ನತಿ ಚಾಗದಿನತನೂಜನತಿ ಲೋಭತೆಯಿಂ
ಧೃತರಾಷ್ಟ್ರಸೂನು ಕೆಟ್ಟರು
ಅತಿರೇಕದಿ ಕೆಡದರಾರು ಚೂಡಾರತ್ನಾ

ಅತಿವ್ಯಸನದಿಂ=ಅತಿವ್ಯಸನದಿಂದ; ದಶಶಿರನ್=ರಾವಣನು; ಅತಿಚಾಗದಿಂ= ಅತಿತ್ಯಾಗದಿಂದ; ಇನ ತನೂಜನ್=ಸೂರ್ಯನ ಮಗನಾದ ಕರ್ಣ; ಅತಿ ಲೋಭ ತೆಯಿಂ = ಅತಿಲೋಭದಿಂದ; ಧೃತರಾಷ್ಟ್ರಸೂನು ಕೆಟ್ಟರು= ಧೃತರಾಷ್ಟ್ರನ ಮಗನಾದ ದುರ್ಯೋಧನ ಕೆಟ್ಟ; ಅತಿರೇಕದಿ=ಅತಿರೇಕದಿಂದ; ಕೆಡದರ್+ಆರ್= ಕೆಡದಿರು ವವರಾರು?

ಅತಿವ್ಯಸನದಿಂದ ರಾವಣ, ಅತಿತ್ಯಾಗದಿಂದ ಕರ್ಣ, ಅತಿಲೋಭದಿಂದ ದುರ್ಯೋಧನ ಕೆಟ್ಟರು. ಅತಿರೇಕದಿಂದ ಕೆಡದಿರುವವರಾರು?

ಅಮೃತವೂ ಅತಿಯಾದರೆ ವಿಷವಾಗುವುದು. ಯಾವುದೇ ವಿಚಾರದಲ್ಲೂ ಮಿತಿಯೆಂಬುದು ಇದ್ದೇ ಇರಬೇಕು. ಅತಿಯಾದರೆ ಕೇಡುಂಟಾಗುತ್ತದೆ ಎಂಬುದಕ್ಕೆ ಅನೇಕ ಉದಾಹರಣೆಗಳು ಲಭ್ಯವಿವೆ. ಅಂತಹ ಉದಾಹರಣೆಗಳಲ್ಲಿ ರಾವಣ, ಕರ್ಣ, ದುರ್ಯೋಧನರನ್ನು ಕುರಿತು ಕವಿ ಹೇಳಿದ್ದಾನೆ.

೪

ಅರಗಿಳಿಯಿಲ್ಲದ ವನಮುಂ
ಗುರುವಿಲ್ಲದ ಮಠವು ಹಿರಿಯರಿಲ್ಲದ ಮನೆಯುಂ
ಗರುವಿಕೆಯಿಲ್ಲದ ಸತಿಯುಂ
ವರವಿಲ್ಲದ ದೇವರೇಕೆ ಚೂಡಾರತ್ನಾ

ಅರಗಿಳಿಯಿಲ್ಲದ ವನಮುಂ=ಅರಗಿಳಿಯಿಲ್ಲದ ಉದ್ಯಾನ; ಗುರುವಿಲ್ಲದ ಮಠವು; ಹಿರಿಯರಿಲ್ಲದ ಮನೆಯುಂ; ಗರುವಿಕೆಯಿಲ್ಲದ ಸತಿಯುಂ=ತೃಪ್ತಿಯಿಲ್ಲದ ಹೆಂಡತಿ; ವರವಿಲ್ಲದ ದೇವರೇಕೆ=ವರವನ್ನು ನೀಡದ ದೇವರು ಏಕೆ.

ಉದ್ಯಾನದಲ್ಲಿ ಗಿಳಿಗಳಿದ್ದರೆ ಅಂದ, ಮಠದಲ್ಲಿ ಗುರು ಇರಬೇಕು, ಹಿರಿಯರಿಲ್ಲದ ಮನೆ ವ್ಯರ್ಥ, ತೃಪ್ತಿಯಿಲ್ಲದ ಹೆಂಡತಿ ವ್ಯರ್ಥ. ಲೋಕದಲ್ಲಿ ಕೆಲವು ಉಪಯೋಗದ ವಸ್ತುಗಳಾದರೆ ಕೆಲವು ವ್ಯರ್ಥ ಎನಿಸುತ್ತವೆ. ಉದ್ಯಾನದಲ್ಲಿ, ಮಠದಲ್ಲಿ, ಮನೆಯಲ್ಲಿ ಯಾರುಯಾರಿರಬೇಕೆಂದು ತಿಳಿಸಿ, ತೃಪ್ತಿಯಿಲ್ಲದ ಹೆಂಡತಿ ಯಿಂದ, ವರವನ್ನು ನೀಡದ ದೇವರಿಂದ ಪ್ರಯೋಜನವಿಲ್ಲವೆಂದು ಸ್ಪಷ್ಟ ಪಡಿಸ ಲಾಗಿದೆ.

೫

ಅರಿಯದರ ಮುಂದೆ ಕಳೆಗಳು
ಮೆರೆವವೆ ನಿಷ್ಕಳೆಗಳಹವು ಅಲ್ಲದೆ ನಸು ಮಾ
ತರಿಯದ ಬಾಲಕಿಯೊಳ್ವಿಟ
ನರಿತವದೇನರಿವುದೆಂದ ಚೂಡಾರತ್ನಾ

ಅರಿಯದರ ಮುಂದೆ=ಏನನ್ನೂ ತಿಳಿಯದವರ ಮುಂದೆ; ಕಳೆಗಳು ಮೆರೆವವೆ=ಕಲೆಗಳು ಮೆರೆಯಲು ಸಾಧ್ಯವೇ? ನಿಷ್ಕಳೆಗಳಹವು=ನಿಷ್ಕಳೆಗಳಾಗುವುವು; ಅಲ್ಲದೆ; ನಸುಮಾತು+ಅರಿಯದ=ಸ್ವಲ್ಪವೂ ಮಾತನಾಡಲು ಅರಿಯದ;ಬಾಲಕಿಯೊಳು + ವಿಟನ್ + ಅರಿತನ್ + ಅದೇನು + ಅರಿವುದೆಂದ = ಬಾಲಕಿಯಲ್ಲಿ ವಿಟನಾದವನು ಅದೇನು ತಿಳಿದನೊ!

ಏನನ್ನೂ ತಿಳಿಯದವರ ಮುಂದೆ ಕಲೆಗಳು ಮೆರೆಯಲು ಸಾಧ್ಯವೇ? ಅವು ನಿಷ್ಕಳೆಗಳಾಗುವುವು; ಅಲ್ಲದೆ ಸ್ವಲ್ಪವೂ ಮಾತನಾಡಲರಿಯದ ಬಾಲಕಿಯಲ್ಲಿ ವಿಟನು ಅದೇನನ್ನು ತಿಳಿದನೊ!

ಏನನ್ನೂ ತಿಳಿಯದ ಅರಸಿಕರ ಮುಂದೆ ಕಲೆಗಳನ್ನು ಪ್ರದರ್ಶಿಸಿದರೆ ಅದು ವ್ಯರ್ಥ. ಆ ಕಲೆಗಳು ಮೆರೆಯುವುದಿಲ್ಲ, ಶೋಭಿಸುವುದೂ ಇಲ್ಲ. ಕಲಾಸಕ್ತ ರಸಿಕರಿದ್ದಾಗ ಮಾತ್ರ ಅವು ಮೆರೆಯಲು ಸಾಧ್ಯ. ಎಳೆಯ ಮಗುವನ್ನರಸಿ ಹೋಗುವ ವಿಟನನ್ನು ಏನೆನ್ನಬೇಕು. ಪ್ರಸ್ತುತ ದಿನಗಳಲ್ಲಿ ವಿಕೃತಕಾಮಿಗಳಾದವರು ಹೆಣ್ಣು ಮಕ್ಕಳ ವಯಸ್ಸನ್ನೂ ಲೆಕ್ಕಿಸದೆ ಅತ್ಯಾಚಾರವೆಸಗುತ್ತಿರುವುದು ವಿಷಾದದ ಸಂಗತಿಯಾಗಿದೆ. ಯಾವ ಒಂದು ಘಟನೆಯ ಸಾಧಕ ಬಾಧಕಗಳನ್ನು ಪರ್ಯಾಲೋಚಿಸದೆ ಸಮಾಜ ದ್ರೋಹಿಗಳು ಇಂತಹ ಹೀನಕೃತ್ಯಗಳನ್ನೆಸಗುತ್ತಿರುವುದು ನಾಚಿಕೆಗೇಡಿನ ವಿಚಾರ ವಾಗಿದೆ.

೬

ಅರಿವೆಡೆಯೊಳುರಿವನುರಿವಂ
ಅರಿಯದ ಠಾವಿಂಗೆ ಹೊಡೆದು ನೂಕುವರೆ ವಲಂ

ಕಿರುಗೂಸಾಗಿರೆ ಕೃಷ್ಣನ
ಕರುಗಾಯಿಸರೇ ಪಳ್ಳಿಯವರು ಚೂಡಾರತ್ನಾ

ಅರಿವ+ಎಡೆಯೊಳು+ಉರಿವನ್=ತಿಳಿದಿರುವ ಸ್ಥಳಗಳಲ್ಲಿ ಮೆರೆಯುವವನು; ಉರಿವನ್=ಮೆರೆಯುವುದನ್ನು; ಅರಿಯದ=ತಿಳಿಯದ; ತಾವಿಂಗೆ=ತಾವಿಗೆ ಅಥವಾ ಸ್ಥಳಕ್ಕೆ ಹೊಡೆದು ನೂಕುವರೆ; ವಲಂ=ದಿಟ(ಅಲ್ಲವೆ); ಕಿರುಗೂಸಾಗಿರೆ= ಪುಟ್ಟ ಮಗುವಾಗಿದ್ದರೂ; ಕೃಷ್ಣನ=ಕೃಷ್ಣನನ್ನು, ಕರುಗಾಯಿಸರೇ= ಕರುಗಳನ್ನು ಕಾಯಲು ಬಿಡಲಿಲ್ಲವೇ ; ಪಳ್ಳಿಯವರು=ಹಳ್ಳಿಗರು.

ತಿಳಿದಿರುವ ಅಥವಾ ಪರಿಚಿತ ಸ್ಥಳದಲ್ಲಿ ಮೆರೆಯುವವನು ಮೆರೆಯುತ್ತಾನೆ. ತಿಳಿಯದ ಅಪರಿಚಿತ ಸ್ಥಳಕ್ಕೆ ಹೋದರೆ ಹೊಡೆದು ನೂಕುವರಲ್ಲವೇ, ಪುಟ್ಟ ಮಗುವಾಗಿದ್ದರೂ ಕೃಷ್ಣನನ್ನು ಹಳ್ಳಿಗರು ಹಸುಕರು ಕಾಯಲು ಬಿಡಲಿಲ್ಲವೇ.

ಚೆನ್ನಾಗಿ ಪರಿಚಯವಿರುವ ಸ್ಥಳ ಅಥವಾ ಊರಿನಲ್ಲಿದ್ದರೆ ಅಭಿವೃದ್ಧಿ ಹೊಂದುವವರು ಹೇಗೋ ಮುಂದುವರಿಯುತ್ತಾರೆ. ಅಪರಿಚಿತ ಸ್ಥಳಕ್ಕೆ ಅನಾಮಿಕನಾಗಿ ಹೋದಾಗ ಇವನ್ಯಾರೋ ಏನೋ ಎಂದು ಅನುಮಾನಿಸಿ ಹೊಡೆದು ಅಟ್ಟುತ್ತಾರೆ. "ತಮ್ಮ ತಮ್ಮ ಸ್ಥಳಗಳಲ್ಲಿ ಜನ ಮೆರೆಯುತ್ತಾರೆ. ತಮ್ಮ ನೆಲ ಅಲ್ಲದಿದ್ದರೆ ಅವಮಾನ ಪಡುತ್ತಾರೆ. ಬಲಶಾಲಿಯಾದ ಗಜೇಂದ್ರನೂ ನೀರಿನಲ್ಲಿಳಿದಾಗ ಮೊಸಳೆಗೆ ಸಿಕ್ಕಿಲ್ಲವೆ" ಎನ್ನುತ್ತಾನೆ ತೆಲುಗು ಕವಿ ವೇಮನ.

೭

ಅಱಿಯದ ನೃಪನೋಲಗದೊಳ್
ಎಱಗುತ್ತಡಿಗಡಿಗೆ ಸತ್ತು ಹುಟ್ಟುವ ಬದುಕಂ
ತೊಱೆದು ಜೀವನಕೆ ಹುಳ್ಳಿಯ
ಹೊಱೆಯಂ ಹೊತ್ತಿಹುದು ಲೇಸು ಚೂಡಾರತ್ನಾ

ಅಱಿಯದ=ತಿಳಿಯದಿರುವ; ನೃಪನ+ಓಲಗದೊಳ್=ನೃಪನ ಓಲಗದಲ್ಲಿ; ಎಱಗುತ್ತ+ಅಡಿಗಡಿಗೆ=ಮತ್ತೆ ಮತ್ತೆ ನಮಸ್ಕರಿಸುತ್ತ; ಸತ್ತು ಹುಟ್ಟುವ; ಬದುಕಂ= ಬದುಕನ್ನು; ತೊಱೆದು=ಬಿಟ್ಟು; ಜೀವನಕ್ಕೆ=ಜೀವನಕ್ಕೆ; ಹುಳ್ಳಿಯ ಹೊರೆಯಂ=ಕಟ್ಟಿಗೆ

ಹೊರೆಯನ್ನು; ಹೊತ್ತು+ಇಹುದು ಲೇಸು=ಹೊತ್ತು ಜೀವನ ನಿರ್ವಹಿಸುವುದು ಒಳ್ಳೆಯದು.

ತಿಳಿಯದೆ ಇರುವ ರಾಜಸಭೆಯಲ್ಲಿ ಮತ್ತೆ ಮತ್ತೆ ನಮಸ್ಕರಿಸುತ್ತ ಸತ್ತುಹುಟ್ಟುವ ಬದುಕನ್ನು ತೊರೆದು, ಕಟ್ಟಿಗೆ ಹೊರೆ ಹೊತ್ತು ಮಾರಿ ಜೀವನ ನಿರ್ವಹಿಸುವುದು ಒಳ್ಳೆಯದಲ್ಲವೇ ಎನ್ನಲಾಗಿದೆ.

ರಾಜನ ಓಲಗದಲ್ಲಿ ಅತಿಯಾದ ಕಟ್ಟುಪಾಡುಗಳಿರುತ್ತವೆ. ಕುಳಿತರೂ ನಿಂತರೂ ಮತ್ತೇನನ್ನಾದರು ಮಾಡಿದರೂ ಏನೋ ಒಂದು ಬಗೆಯ ಕಸಿವಿಸಿ ಯಾಗುವುದು ಸಹಜ. ಅಂತಹ ಸೇವೆಯನ್ನು ತೊರೆದು ಸ್ವತಂತ್ರವಾಗಿ ಜೀವನ ನಿರ್ವಹಿಸುವುದು ಒಳ್ಳೆಯದು. ಯಾರಿಂದಲೊ ನಿಯಂತ್ರಿತವಾದ ಬದುಕಿಗಿಂತ ಸ್ವತಂತ್ರವಾಗಿ ಸ್ವ ಉದ್ಯೋಗ ಮಾಡಿ ಬಾಳು ನಡೆಸುವುದು ಎಲ್ಲ ರೀತಿಯಿಂದಲೂ ಶ್ರೇಷ್ಠ.

೮

ಅಸಮಯವಿದು ಸಮಯವಿದೆಂ
ಬೆಸಕವು ದಾನಿಗಳಿಗುಂಟೆ ಕರ್ಣಂ ರಣದೊಳು
ಬಸವಳಿವುತಿರ್ದೀಯನೆ
ಬಿಸರುಹನೇತ್ರಂಗಂದು ಚೂಡಾರತ್ನಾ

ಅಸಮಯವಿದು ಸಮಯವಿದು+ಎಂಬ+ಎಸಕವು=ಇದು ಸರಿಯಾದ ಸಮಯ, ಇದು ಅಸಮಯ ಎಂಬ ರೀತಿನೀತಿ; ದಾನಿಗಳಿಗೆ+ಉಂಟೆ=ದಾನಿಗಳಿಗೆ ಇದೆಯೇ? ಕರ್ಣಂ ರಣದೊಳು=ಕರ್ಣ ರಣರಂಗದಲ್ಲಿ; ಬಸವಳಿವುತ+ಇರ್ದು+ ಬಸವಳಿದಿದ್ದರೂ ಬಿಸರುಹನೇತ್ರಂಗೆ+ಅಂದು=ಕಮಲದಂತೆ ಕಣ್ಣುಳ್ಳವನಿಗೆ ಅಂದು; ಈಯನೆ=ಕೊಡಲಿಲ್ಲವೆ?

ದಾನಿಗಳಿಗೆ ಸಮಯ ಅಸಮಯ ಎಂದು ಇರುವುದೇ? ಕರ್ಣ ರಣರಂಗದಲ್ಲಿ ಬಸವಳಿದಿದ್ದಾಗಲೂ ಬಿಸರುಹನೇತ್ರನಿಗೆ ಅಂದುಕೊಡಲಿಲ್ಲವೇ?

ದಾನಿಗಳಿಗೆ ಸಮಯ, ಅಸಮಯ ಎಂದಿರುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಕರ್ಣನ ವಿಷಯವನ್ನು ಇಲ್ಲಿ ಉದಾಹರಿಸಲಾಗಿದೆ. ಕವಿ ಕಮಲಾಕ್ಷ ಎಂದರೆ ಸಾಮಾನ್ಯವಾಗಿ ವಿಷ್ಣುವಿಗೆ ಅಥವಾ ಕೃಷ್ಣನಿಗೆ ಅನ್ವಯವಾಗುತ್ತದೆ. ಅದರೆ ಕರ್ಣ ತನ್ನ ಕವಚಕುಂಡಲಗಳನ್ನು ಕೊಟ್ಟಿದ್ದು ಇಂದ್ರನಿಗೆ.

೯

ಅಳಲುಂ ನೋವುಂ ಕೇಡುಂ
ಘಳಿಲನೆ ತನಗಡಸಿದಲ್ಲಿ ಅರಿವಿನ ಮರೆವೊ
ಕ್ಕುಳಿದನೆ ಚದುರಂ ಮತ್ತಾ
ತಿಳಿವಿನ್ನಾವೆಡೆಗೆ ಸುಕವಿ ಚೂಡಾರತ್ನಾ

ಅಳಲುಂ=ದುಃಖವೂ; ನೋವುಂ=ನೋವೂ; ಕೇಡುಂ=ಕೇಡೂ; ಘಳಿಲನೆ= ಥಟ್ಟನೆ; ತನಗೆ+ಅಡಸಿದಲ್ಲಿ= ತನಗೆ ಬಂದೆರಗಿದರೆ; ಅರಿವಿನ ಮರೆವೊಕ್ಕು+ಉಳಿದನೆ ಚದುರಂ=ಜ್ಞಾನದ ಮೊರೆಹೊಕ್ಕು ಇರುವನೆ ಚತುರನಾದವನು; ಮತ್ತಾ=ಮತ್ತೆ ಆ, ತಿಳಿವು+ಇನ್ನಾವ+ಎಡೆಗೆ ಸುಕವಿ=ಜ್ಞಾನ ಇನ್ನಾವ ಕಡೆಗೆ ಸುಕವಿ.

ದುಃಖ, ನೋವು, ಕೇಡುಗಳು ಥಟ್ಟನೆ ತನಗೆ ಬಂದೆರಗಿದರೆ ಜ್ಞಾನದ ಮೊರೆಹೊಕ್ಕು ಇರುವನೆ ಚತುರನಾದವನು. ಮತ್ತೆ ಆ ಜ್ಞಾನ ಇನ್ನೆಲ್ಲಿ ಸಿಗುವುದೆಂದು ಅರಸಿ ಹೋಗುವನು.

'ಸಂಕಟ ಬಂದಾಗ ವೆಂಕಟರಮಣ' ಎನ್ನದೆ ಆ ಸಂಕಟದ ಪರಿಹಾರಕ್ಕಾಗಿ ಸ್ವತಃ ಪ್ರಯತ್ನಪಡುವ ವ್ಯಕ್ತಿಯ ವಿಚಾರ ಇಲ್ಲಿದೆ. ಯಾವುದೇ ಸಂದರ್ಭದಲ್ಲೂ ಧೃತಿಗೆಡದೆ ಮನುಷ್ಯ ತನ್ನ ಪ್ರಯತ್ನವನ್ನು ಮಾಡಲೇಬೇಕು. ಹಾಗಾದಾಗ ಮಾತ್ರ ಯಾವುದೇ ಸಮಸ್ಯೆಗೆ ಒಂದಲ್ಲ ಒಂದು ಬಗೆಯ ಪರಿಹಾರ ಸಿಕ್ಕೇ ಸಿಗುತ್ತದೆ. ಆದುದರಿಂದ ಕಷ್ಟ ಬಂತು ಎಂದು ಕೈಕಟ್ಟಿ ಕುಳ್ಳಿರದೆ ಅದರ ಪರಿಹಾರೋಪಾಯವನ್ನು ಅರಸುತ್ತಾ ಹೋಗುವುದು ಉತ್ತಮ ಎಂಬ ವಿಚಾರ ಇಲ್ಲಿದೆ.

೧೦

ಆಗುಂಬುದಾಗಲುಡುವುದು
ಆಗಳೆ ಕರೆದೀವುದುಚಿತಮಾಗಳಿಗಾಗಂ
ಬೇಗ ಬೇಗೆಂಬ ಜವನೊಳ
ಗಾಗನು ಮುನ್ನರಿವ ಜಾಣ ಚೂಡಾರತ್ನಾ

ಆಗ+ಉಂಬುದು+ಆಗಲ್+ಉಡುವುದು=ಉಣ್ಣಬೇಕೆಂದಾಗ ಉಣ್ಣುವುದು; ಉಡಬೇಕೆಂದಾಗ ಉಡುವುದು; ಆಗಳೆ=ಆಗಲೇ; ಕರೆದು+ಈವುದು+ಉಚಿತಂ+ಆ ಗಳಿಗೆ+ಆಗಂ= ಕರೆದು ತೊಡುವುದು ಉಚಿತ ಆ ಗಳಿಗೆ; ಆಗುಂ=ಆ ಗಳಿಗೆಯೇ ಆಗುತ್ತದೆ; ಬೇಗ+ಬೇಗ+ಎಂಬ= ಬೇಗ ಬೇಗ ಎನ್ನುವ; ಜವನು+ಒಳಗಾಗನು= ಯಮ ಒಳಗಾಗುವುದಿಲ್ಲ; ಮುನ್ನರಿ ಜಾಣಂ= ಮೊದಲೇ ತಿಳಿದವನು ಜಾಣ.

ಮನುಷ್ಯ ಬದುಕಿನ ಅಸ್ಥಿರತೆಯ ಬಗೆಗೆ ಕವಿ ಎಚ್ಚರಿಸುತ್ತಿದ್ದಾನೆ. ಉಣಬೇಕೆಂದಾಗ ಉಂಡು, ಉಡಬೇಕೆಂದಾಗ ಉಟ್ಟು ಸಂತೋಷಪಡು. ಈಗ ಆಗ ಎಂದು ಕಾಲಹರಣ ಮಾಡಬೇಡ. ಯಾವಾಗ ಏನನಿಸುತ್ತದೆಯೋ ಅದನ್ನು ಮಾಡಿ ಮುಗಿಸುವುದು ಉಚಿತ. ನಾವು ನಿಧಾನಿಸಿದರೆ ಯಮ ಕಾಯುವುದಿಲ್ಲ, ಬೇಗ ಬೇಗ ಎಂದು ಎಳೆದೊಯ್ಯುವನು. ಇದನ್ನರಿತು ನಡೆಯುವವನೇ ಜಾಣ. ಇರುವಾಗ ಬಯಸಿದ್ದನ್ನು ಪಡೆದು ತೃಪ್ತಿಪಟ್ಟು ಸಂತೋಷದಿಂದ ಇರುವುದು ಒಳಿತು.

ಹುಟ್ಟು ಆಕಸ್ಮಿಕ ಸಾವು ಖಚಿತ. ಹುಟ್ಟು ಸಾವುಗಳ ನಡುವಣ ಕಾಲದಲ್ಲಿ ನಾಲ್ಕಾರು ಜನರಿಗೆ ಒಳಿತನ್ನು ಮಾಡಿ, ತಾನೂ ಅನುಭವಿಸಿ ಸತ್ಪ್ರಜೆಯಾಗಿ ಬಾಳಬೇಕೆಂದು ಹೇಳಲಾಗಿದೆ.

೧೧

ಆಡದೆ ಮಾಡುವನುತ್ತಮ
ನಾಡಿದರೊಳು ಕಿರಿದ ಮಾಡುವಂ ಮಧ್ಯಮನಂ
ತಾಡಿದುದಂ ನಿಷ್ಫಲವಂ
ಮಾಡುವನತಿಕಷ್ಟನಿಳೆಗೆ ಚೂಡಾರತ್ನಾ

ಆಡದೆ=ಏನನ್ನೂ ಮಾತನಾಡದೆ; ಮಾಡುವವನು+ಉತ್ತಮನ್+ಆಡಿದ ರೊಳು ಕಿರಿದ ಮಾಡುವಂ ಮಧ್ಯಮನ್+ ಅಂತು+ಆಡಿದುದನ್=ಮಾಡುವವನು ಉತ್ತಮನು ಹೇಳಿದುದರಲ್ಲಿ ಸ್ವಲ್ಪವನ್ನು ಮಾಡುವವನು ಮಧ್ಯಮನು ಹಾಗೆ ಆಡಿದುದನ್ನು; ನಿಷ್ಫಲವಂ=ಫಲವಿಲ್ಲದಂತೆ; ಮಾಡುವನ್+ಅತಿ+ಕಷ್ಟನ್+ಇಳೆಗೆ= ಮಾಡುವವನು ಭೂಮಿಗೆ ಅತಿಕಷ್ಟನು.

ಸಮಾಜಕ್ಕೆ ಏನನ್ನಾದರೂ ಮಾಡುವವರು ತಮ್ಮಷ್ಟಕ್ಕೆ ತಾವು ಮಾಡುವವರು ಉತ್ತಮರು, ಮಾಡುವುದಾಗಿ ಹೇಳಿ ಅದರಲ್ಲಿ ಸ್ವಲ್ಪ ಮಾಡುವವರು ಮಧ್ಯಮರು, ತಾವು ಆಡಿದ ಮಾತು ಪ್ರಯೋಜನಕ್ಕೆ ಬಾರದಂತೆ ನಡೆದುಕೊಳ್ಳುವವರು ಇಳೆಯಲ್ಲಿದ್ದರೆ ತುಂಬ ಕಷ್ಟ.

ಕಾಲದೇಶಾತೀತವಾದಂತಹ ಈ ಮೌಲ್ಯಗಳು ಸಾರ್ವಕಾಲಿಕವಾದವು. ಅನೇಕರು ಆಡದೆ ಮಾಡುವರು. ಆಡಿ ಅಲ್ಪ ಮಾಡುವವರು ಕೆಲವರು. ಆಡಿಯೂ ಮಾಡದವರು ಸಮಾಜದಲ್ಲಿ ಇರುವುದು ಮಿಥ್ಯವೇನಲ್ಲ.

೧೨

ಆಡಿದ ಜಾಣ್ನುಡಿಯಂ ಕೊಂ
ಡಾಡಿ ಕರಂ ಮೆಚ್ಚಬಲ್ಲ ಸಜ್ಜನರೊಳು ಮಾ
ತಾಡುವುದಲ್ಲದೆ ಪುರುಷಂ
ಮೂಢರೊಳಾಡುವರೆ ಕೇಳು ಚೂಡಾರತ್ನಾ

ಆಡಿದ ಜಾಣ್ನುಡಿಯಂ=ಆಡಿದ ಜಾಣ್ನುಡಿಯನ್ನು; ಕೊಂಡಾಡಿ; ಕರಂ=ಚೆನ್ನಾಗಿ; ಮೆಚ್ಚಬಲ್ಲ; ಸಜ್ಜನರೊಳು; ಮಾತಾಡುವುದು+ಅಲ್ಲದೆ=ಮಾತಾಡು ವುದಲ್ಲದೆ; ಪುರುಷಂ=ಪುರುಷನು; ಮೂಢರೊಳು+ಆಡುವರೆ=ಮೂಢರ ಜೊತೆ ಆಡುವರೆ ಕೇಳು.

ಜಾಣ್ನುಡಿಯನ್ನು ಚೆನ್ನಾಗಿ ಮೆಚ್ಚಬಲ್ಲ, ಕೊಂಡಾಡಬಲ್ಲ ಸಜ್ಜನರೊಡನೆ ಮಾತನಾಡಬೇಕು. ಹಾಗಲ್ಲದೆ ಮೂಢರ ಜೊತೆ ಮಾತನಾಡಬಾರದು.

ಮಾತಿನ ಮಹತ್ತ್ವವನ್ನು ಈ ಶತಕದ ಕೆಲವು ಪದ್ಯಗಳಲ್ಲಿ ಹೇಳಲಾಗಿದೆ. ಚೆನ್ನಾಗಿ ಮೆಚ್ಚಬಲ್ಲ, ಕೊಂಡಾಡಬಲ್ಲವರ ಮುಂದೆ ಜಾಣ್ನುಡಿಗಳನ್ನು ಆಡಬೇಕು. ಮೂಢರಾದವರ ಜೊತೆ ಮಾತನಾಡಿದರೆ ಅದು ವ್ಯರ್ಥಾಲಾಪವಾಗುತ್ತದೆ.

೧೩

ಆದರಣೆಯಿಲ್ಲದೂಟಂ
ಸೋದರರಿಂದಾದ ಕಲಹ ಮುಗಿಲೊಡ್ಡಣಮುಂ
ಹಾದಿಗರೊಳಾದ ನೇಹಂ
ಹೋದುದು ತಮ್ಮಿಂದ ತಾವು ಚೂಡಾರತ್ನಾ

ಆದರಣೆ+ಇಲ್ಲದ+ಊಟ=ಉಪಚಾರವಿಲ್ಲದೆ ನೀಡಿದ ಊಟ; ಸೋದರರಿಂದ+ಆದ ಕಲಹ= ಸಹೋದರರ ನಡುವೆ ಉಂಟಾದ ಜಗಳ; ಮುಗಿಲ+ಒಡ್ಡಣಮುಂ=ಮೋಡದ ಸಮೂಹ; ಹಾದಿಗರೊಳ್+ಆದ ನೇಹಂ= ದಾರಿಗರೊಡನೆ ಆದ ಸ್ನೇಹ; ತನ್ನಿಂದ ತಾವು=ತನಗೆ ತಾನೇ; ಹೋದುದು=ಹೋಗುವುದು.

ಪ್ರೀತಿಯಿಲ್ಲದೆ, ಉಪಚರಿಸದೆ ನೀಡುವ ಊಟ, ಸೋದರರ ನಡುವೆ ನಡೆದ ಕಲಹ, ಮೋಡದ ಸಮೂಹ; ದಾರಿಹೋಕರೊಡನೆ ಉಂಟಾದ ಸ್ನೇಹ, ತನಗೆ ತಾನೇ ಹೋಗುವುದು.

ಪ್ರೀತಿಯಿಲ್ಲದೆ ನೀಡುವ ಊಟ ಯಾರಿಗೆ ತಾನೇ ನೆನಪಿನಲ್ಲಿ ಉಳಿಯುತ್ತದೆ. ಚೆನ್ನಾಗಿ ಆದರಿಸಿ, ಉಪಚಾರ ಮಾಡಿ ನೀಡಿದಂಥ ಊಟ ಮರೆಯಲು ಸಾಧ್ಯವೇ ಇಲ್ಲ. ಅಣ್ಣತಮ್ಮಂದಿರು ಜಗಳವಾಡಿದರೂ ಕಷ್ಟಸುಖಗಳಲ್ಲಿ ಪರಸ್ಪರರು ಪಾಲ್ಗೊಳ್ಳಲೇಬೇಕಾದ ಪ್ರಸಂಗ ಸಂಭವಿಸಿದರೆ ಯಾವ ಕಲಹವೂ ಅಲ್ಲಿ ನೆನಪಿರುವುದಿಲ್ಲ. ಒಂದೆಡೆ ದಟ್ಟವಾಗಿ ಕವಿದ ಮೋಡಗಳ ಸಮೂಹ ಗಾಳಿ ಬೀಸಿದಾಗ ಚದರಿಹೋಗುವುದು. ದಾರಿಯಲ್ಲಿ ಹೋಗುವಾಗ ಸಿಕ್ಕ ಜನರೊಡನೆ ಉಂಟಾದ ಸ್ನೇಹ ಎಷ್ಟು ದಿನ ಇದ್ದೀತು ಎಂಬ ಅಭಿಪ್ರಾಯ ಇಲ್ಲಿದೆ. ಊಟದ ವಿಷಯ, ಅಣ್ಣತಮ್ಮಂದಿರ ವಿಷಯ, ಮೋಡಗಳ ವಿಚಾರ ಒತ್ತಟ್ಟಿಗಿರಲಿ. ಆದರೆ ಸ್ನೇಹದ ವಿಷಯದಲ್ಲಿ ಹಾಗೆ

ಹೇಳಲಾಗುವುದಿಲ್ಲ. ಏಕೆಂದರೆ ಆಕಸ್ಮಿಕವಾಗಿ ಆದ ಗೆಳೆತನ ಶಾಶ್ವತವಾಗಿ ಉಳಿಯುವ ಸಾಧ್ಯತೆಗಳು ಇಲ್ಲದಿಲ್ಲ.

೧೪

ಆನೆ ಹಸಿದೆಳೆಯ ಮೊಳೆಯಂ
ತಾನಳುಪಿಂ ಮೇಯಲದರ ಹಸು ಪೋದಪದೇ
ಹೀನರನಾಶ್ರಯಿಸಿದೊಡಪ
ಮಾನದ ಕೇಡು ಅರ್ಥಹಾನಿ ಚೂಡಾರತ್ನಾ

ಆನೆ ಹಸಿದು+ಎಳೆಯ ಮೊಳೆಯಂ=ಆನೆ ಹಸಿದು ಎಳೆಯ ಮೊಳಕೆಯನ್ನು; ತಾನು ಅಳುಪಿಂ=ತಾನು ಅತ್ಯಾಸೆಯಿಂದ; ಮೇಯಲು; ಅದರ, ಹಸು= ಹಸಿವು; ಪೋದಪುದೆ=ಹೋಗುವುದೇ? ಹೀನರನು+ ಆಶ್ರಯಿಸಿದೊಡೆ+ ಅಪಮಾನದ ಕೇಡು=ಹೀನರನ್ನು ಆಶ್ರಯಿಸಿದರೆ ಅವಮಾನ; ಕೇಡು; ಅರ್ಥಹಾನಿ= ಧನಹಾನಿಯಾಗುವುದು.

ಆನೆ ಹಸಿದು ಎಳೆಯ ಮೊಳಕೆಯನ್ನು ಅತಿಯಾದ ಆಸೆಯಿಂದ ತಿಂದರೆ ಅದರ ಹಸಿವು ಹಿಂಗುವುದೇ? ಹೀನರನ್ನು ಆಶ್ರಯಿಸಿದರೆ ಅವಮಾನ, ಕೇಡು, ಧನಹಾನಿಯಾಗುವುದು ಖಚಿತ.

ಆನೆ ತನಗೆ ತಕ್ಕದ್ದನ್ನು ಮಾತ್ರ ತಿನ್ನಬೇಕು. ಚಿಗುರೊಡೆಯುವ ಮೊಳಕೆಯನ್ನು ತಿಂದರೆ ಆನೆಗೂ ತೃಪ್ತಿಯಿಲ್ಲ, ಹಸಿವು ಹಿಂಗುವುದಿಲ್ಲ. ಮೊಳಕೆ ಚಿಗುರೊಡೆದು ಗಿಡವಾಗಿ ಮರವಾಗುವುದೂ ತಪ್ಪಿಹೋಗುತ್ತದೆ. ಅದೇ ರೀತಿ ಹೀನರನ್ನು ಆಶ್ರಯಿಸುವುದಾದರೆ ಅದರಿಂದ ಆಗುವುದು ಅವಮಾನ, ಧನಹಾನಿ.

೧೫

ಆರವೆಯ ನೆಳಲು ಪಳ್ಳದ
ನೀರುಂ ಬೆಳದಿಂಗಳುಂ ಪಥಾಶ್ರಮದೆಲರುಂ
ನಾರಿಯರು ಧರಣಿ ಧನವು ವಿ
ಚಾರಿಸೆಯೆಲ್ಲರೊಳು ಸಮವು ಚೂಡಾರತ್ನಾ

**ಆರವೆಯ ನೆಳಲು=ತೋಟದ ನೆರಳು; ಪಳ್ಳದ ನೀರುಂ=ಹಳ್ಳದ ನೀರು; ಬೆಳದಿಂಗಳುಂ ಪಥಾಶ್ರಮದ+ಎಲರುಂ= ದಾರಿಹೋಕರ ಆಯಾಸ ಪರಿಹರಿಸುವ ತಂಗಾಳಿ; ನಾರಿಯರು; ಧರಣಿಧನವುಂ= ಭೂಮಿಯಲ್ಲಿರುವ ಧನ; ವಿಚಾರಿಸೆ+ಎಲ್ಲರೊಳು ಸಮ=ವಿವೇಚಿಸಿ ನೋಡಿದರೆ ಎಲ್ಲವೂ ಸಮ.**

**ತೋಟದ ನೆರಳು, ಹಳ್ಳದ ನೀರು, ಚಂದ್ರನ ಬೆಳದಿಂಗಳು, ದಾರಿಹೋಕರ ಆಯಾಸ ಪರಿಹಾರಕ್ಕಾಗಿ ಬೀಸುವ ತಂಗಾಳಿ, ಭೂಮಿಯ ಧನ, ವಿಚಾರಿಸಿ ನೋಡಿದರೆ ಇವು ಎಲ್ಲರಿಗೂ ಸಮಾನವಾಗಿವೆ.**

**ಪ್ರಕೃತಿಯಿಂದ ದೊರೆಯುವ ಎಲ್ಲ ಸೌಲಭ್ಯಗಳು ಸರ್ವರಿಗೂ ಸಮನಾಗಿ ದೊರೆಯುತ್ತವೆ. ನೀರು, ನೆರಳು, ಬೆಳದಿಂಗಳು, ಪಥಿಕರ ಆಯಾಸ ಪರಿಹಾರಾರ್ಥ ಸಾಲುಮರಗಳು ಬೀಸುವ ಗಾಳಿ, ಧನ- ಇವು ಬಡವ, ಶ್ರೀಮಂತ, ಪ್ರಾಣಿ, ಪಕ್ಷಿಗಳೆಲ್ಲಕ್ಕೂ ಉಪಯೋಗವಾಗುವಂಥವು. ಇಲ್ಲಿ ಯಾವುದೇ ತಾರತಮ್ಯವೆಂಬುದು ಇಲ್ಲ. ಎಲ್ಲರಿಗೂ ಸಮಾನವಾಗಿ ಲಭ್ಯವಾಗುವಂಥವು.**

೧೬

ಆರವೆಯಿಲ್ಲದ ಕೆರೆಯಂ
ನೀರಿಲ್ಲದ ಬಾವಿಯರ್ಕನಿಲ್ಲದ ಪಗಲಂ
ಸಾರ ಕಲೆಯಿಲ್ಲದವರಂ
ಸಾರದಿರು ಸೌಖ್ಯವಿಲ್ಲವು ಚೂಡಾರತ್ನಾ

ಆರವೆಯಿಲ್ಲದ ಕೆರೆಯಂ=ಉದ್ಯಾನವಿಲ್ಲದ ಕೆರೆ; ನೀರಿಲ್ಲದ ಬಾವಿಯ+ ಅರ್ಕನಿಲ್ಲದ ಪಗಲಂ=ನೀರಿಲ್ಲದ ಬಾವಿ; ಸೂರ್ಯನಿಲ್ಲದ ಹಗಲು; ಸಾರಕಲೆ ಯಿಲ್ಲದವರಂ+ಸಾರದಿರು=ರಸವತ್ತಾದ ಕಲೆಯಿಲ್ಲದವರ ಒಡನಾಟ ಬೇಡ; ಸೌಖ್ಯ ವಿಲ್ಲವು= ಸುಖವಿಲ್ಲ.

ಉದ್ಯಾನವಿಲ್ಲದ ಕೆರೆ, ನೀರಿಲ್ಲದ ಬಾವಿ, ಸೂರ್ಯನಿಲ್ಲದ ಹಗಲು, ರಸವತ್ತಾದ ಕಲೆಯಿಲ್ಲದವರ ಒಡನಾಟ ಬೇಡ, ಅದರಿಂದ ಸೌಖ್ಯವಿಲ್ಲ.

ಊರೊಂದರಲ್ಲಿ ಕೆರೆಯಿದ್ದರೆ ಅದರ ಸುತ್ತ ಉದ್ಯಾನವನವಿದ್ದರೆ ಶೋಭೆ. ಅದಿಲ್ಲದಿರುವ ಕೇವಲ ಕೆರೆ ಮಾತ್ರ ಇರುವ ಉದಾಹರಣೆಗಳು ಸಾಕಷ್ಟಿವೆ. ಬಾವಿ ಎಂದಾಕ್ಷಣ ನೀರು. ನೀರಿಲ್ಲದ ಹಾಳು ಬಾವಿ ವ್ಯರ್ಥವಾದುದು. ಹಗಲು ಎಂದಾಕ್ಷಣ ಸೂರ್ಯ. ಸೂರ್ಯನಿಲ್ಲದಿದ್ದರೆ ಹಗಲು ಎನ್ನುವುದು ಸಾಧ್ಯವೇ? ಮಾನವನ ಜೀವನ ಸುಖದಿಂದ ಇರಬೇಕೆಂದರೆ ಯಾವುದಾದರೂ ರಸವತ್ತಾದ ಕಲೆ ತಿಳಿದಿರಬೇಕು. ಕಲೆಯಿಲ್ಲದವರ ಒಡನಾಟ ಸುಖವಿಲ್ಲದ್ದು. ಮನುಷ್ಯ ವಾಸಿಸುವೆಡೆಯಲ್ಲಿ ಕೆರೆ, ಬಾವಿಗಳು, ಉದ್ಯಾನವನ, ಮನರಂಜನೆಯಿದ್ದರೆ ಅಲ್ಲಿ ಸುಖವಿರುತ್ತದೆ. ಪರಿಸರ ಸುಂದರವಾಗಿದ್ದರೆ ಮನಸ್ಸೂ ಚೆನ್ನಾಗಿರುತ್ತದೆ.

೧೭

ಆರಾರುಂ ರಕ್ಷಿಪರಿಂ
ಆರಾರುಂ ಕಾಯ್ವ ಕೊಲ್ವರೆಂಬುದು ಪುಸಿ ಮು
ನ್ನಾರಾಧಿಸಿ ಪಡೆದುದನಿ
ನ್ನಾರಾರುಂ ಕಳೆಯಬಹುದೆ ಚೂಡಾರತ್ನಾ

ಆರು+ಆರುಂ=ಯಾರು ಯಾರನ್ನು; ರಕ್ಷಿಪರ್=ರಕ್ಷಿಸುವರು; ಇನ್=ಇನ್ನು; ಆರು+ಆರುಂ =ಯಾರನ್ನು ಯಾರು; ಕಾಯ್ವ=ಕಾಯುವರು; ಕೊಲ್ವರು+ಎಂಬುದು= ಕೊಲ್ಲುವರು ಎಂಬುದು; ಪುಸಿ=ಸುಳ್ಳು; ಮುನ್ನ+ಆರಾಧಿಸಿ=ಹಿಂದೆ ಆರಾಧಿಸಿ; ಪಡೆದುದನ್+ಇನ್ನು+ಆರಾರು=ಪಡೆದ ಪುಣ್ಯವನ್ನು ಇನ್ನು ಕಳೆಯಬಹುದೆ?

ಯಾರುಯಾರನ್ನು ರಕ್ಷಿಸುವರು, ಯಾರು ಯಾರನ್ನು ಕಾಪಾಡುವರು, ಕೊಲ್ಲುವರು ಎಂಬುದು ಸುಳ್ಳು. ಹಿಂದೆ ಆರಾಧಿಸಿ ಪಡೆದ ಪುಣ್ಯವನ್ನು ಯಾರೂ ಕಳೆದುಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ನಮ್ಮನ್ನು ನಾವು ಕಾಪಾಡಿಕೊಂಡು, ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು.

ನಮ್ಮ ನಮ್ಮ ಸುರಕ್ಷತೆಯನ್ನು ನಾವೇ ನೋಡಿಕೊಳ್ಳಬೇಕು. ಯಾರನ್ನೂ ನಂಬಿ ಬದುಕಬಾರದು ಎಂದು ತಿಳಿವಳಿಕೆ ಹೇಳಲಾಗಿದೆ.

೧೮

ಆರುಂ ದುರ್ಜನ ಕುಪ
ಕಾರಂ ಮಾಡಿದೊಡೆ ಸುಣ್ಣ ಕಲ್ಗಳ ಬಿಸಿಯನಿ
ವಾರಿಪೆನೆಂದದರೊಳು ತ
ಣ್ಣೀರಂ ಪೊಯ್ದಂತೆ ಸುಗುಣ ಚೂಡಾರತ್ನಾ

ಆರುಂ=ಯಾರೂ; ದುರ್ಜನಕೆ+ಉಪಕಾರಂ ಮಾಡಿದೊಡೆ=ದುರ್ಜನರಿಗೆ ಉಪಕಾರ ಮಾಡಿದರೆ; ಸುಣ್ಣಕಲ್ಗಳ ಬಿಸಿಯ=ಸುಣ್ಣದ ಕಲ್ಲುಗಳ ಬಿಸಿಯನ್ನು; ನಿವಾರಿಪೆನು+ಎಂದು+ಅದರೊಳು=ಹೋಗಲಾಡಿಸುವೆನೆಂದು ಅದರೊಳಗೆ; ತಣ್ಣೀರಂ ಪೊಯ್ದಂತೆ ಸುಗುಣ=ತಣ್ಣೀರು ಸುರಿದಂತೆ ಸುಗುಣ.

ದುರ್ಜನರಿಗೆ ಯಾರಾದರೂ ಉಪಕಾರ ಮಾಡಿದರೆ, ಸುಣ್ಣದ ಕಲ್ಲುಗಳ ಬಿಸಿಯನ್ನು ನಿವಾರಿಸಲೆಂದು ಹೋಗಿ ಅದರೊಳಗೆ ತಣ್ಣೀರನ್ನು ಸುರಿದಂತೆ.

ದುರ್ಜನರಾದವರಿಗೆ ಉಪಕಾರ ಮಾಡಿದರೆ ಅವರಿಂದ ತೊಂದರೆಯೇ ಹೆಚ್ಚು ಎಂಬ ವಿಷಯವನ್ನು ಸುಣ್ಣದ ಉಪಮೆಯ ಮೂಲಕ ತಿಳಿಯ ಹೇಳಿದ್ದಾನೆ ಕವಿ. ಸುಣ್ಣದ ಕಲ್ಲುಗಳು ಬಿಸಿಯಾಗಿವೆ. ಅದನ್ನು ತಣಿಸಲು ತಣ್ಣೀರು ಸುರಿದರೆ ಅದು ಕೊತಕೊತನೆ ಕುದಿಯಲಾರಂಭಿಸುತ್ತದೆ. ಹೀಗಾದಾಗ ಅದರ ಕಾವು ಮತ್ತಷ್ಟು ಹೆಚ್ಚಾಗುತ್ತದೆ. ಕವಿಯ ಈ ಮಾತುಗಳು ಕೆಲವೊಮ್ಮೆ ಬೇರೆ ರೀತಿಯದಾಗಿಯೂ ಪರಿಣಮಿಸಬಹುದು. ದುರ್ಜನನಾದವನು ಉಪಕಾರ ಪಡೆದು ಸಜ್ಜನನಾಗಿ ಪರಿವರ್ತನೆಯಾದ ಸಂದರ್ಭ ಇಲ್ಲವೆಂದೇನಲ್ಲ.

೧೯

ಆರೋಗಿಸುವೆಡೆಯೊಳ್ ದೇ
ಹಾರದೊಳಾಲೋಚನಂಗಳೊಳ್ ಮಜ್ಜನದೊಳ್
ಕೂರದ ನಾರಿಯರೊಳ್ ನೃಪ
ನಾರೈದೆಚ್ಚೆತ್ತು ನಡೆಗೆ ಚೂಡಾರತ್ನಾ

ಆರೋಗಿಸುವ+ಎಡೆಯೊಳ್=ಊಟ ಮಾಡುವ ಕಡೆ; ದೇಹಾರದೊಳ್ +ಆಳೋಚನಂಗಳೊಳ್=ದೇವಾಲಯದಲ್ಲಿ ಆಲೋಚನೆಗಳಲ್ಲಿ; ಮಜ್ಜನದೊಳ್=ಸ್ನಾನ ದಲ್ಲಿ ; ಕೂರದ ನಾರಿಯರೊಳ್=ಇಷ್ಟವಿಲ್ಲದ ನಾರಿಯರಲ್ಲಿ; ನೃಪನ್+ಆರೈದು+ ಎಚ್ಚೆತ್ತು ನಡೆಗೆ= ರಾಜನಾದವನು ಎಚ್ಚೆತ್ತುಕೊಂಡು ನಡೆಯಬೇಕು.

ಊಟ ಮಾಡುವ ಕಡೆ, ದೇವಾಲಯದಲ್ಲಿ, ಆಲೋಚನೆಗಳಲ್ಲಿ, ಸ್ನಾನ ಮಾಡುವೆಡೆಯಲ್ಲಿ, ಇಷ್ಟವಿಲ್ಲದ ಮಹಿಳೆಯರ ಜತೆಯಲ್ಲಿ ರಾಜನಾದವನು ಎಚ್ಚರದಿಂದಿರಬೇಕು.

ರಾಜನಾದವನು ಎಲ್ಲೆಲ್ಲಿ ಎಚ್ಚರವಹಿಸಬೇಕೆಂಬುದನ್ನು ಕವಿ ಹೇಳುತ್ತಿದ್ದಾನೆ. ನೀತಿ ಹೇಳುವಾಗ ರಾಜನೀತಿ ಹೇಳುವುದು ಕೂಡಾ ಒಂದು ಕ್ರಮ. ರಾಜ ಎಚ್ಚರ ತಪ್ಪಿದರೆ ರಾಜ್ಯ ಅಲ್ಲೋಲಕಲ್ಲೋಲವಾಗುವುದು. ಸರಿಯಾಗಿ ರಾಜ್ಯಭಾರ ಮಾಡಬೇಕಾದರೆ ರಾಜನಾದವನು ಎಷ್ಟು ಬಗೆಯಲ್ಲಿ ಜಾಗೃತವಾಗಿದ್ದರೂ ಸಾಲದು.

೨೦

ಆವಾವ ತೆರದ ಜೀವದ
ನೋವೆಲ್ಲಂ ತನ್ನ ನೋವದೆಂಬಾ ಮನುಜಗೆ
ಆವುದು ಜಪವಾವುದು ತಪ
ವಾವುದು ದೇವಾರ್ಚನೆಗಳ್ ಚೂಡಾರತ್ನಾ

ಆವಾವ ತೆರದ ಜೀವದ=ಯಾವ ಯಾವ ಬಗೆಯ ಜೀವದ; ನೋವೆಲ್ಲಂ= ನೋವೆಲ್ಲವೂ; ತನ್ನ ನೋವು+ಅದು+ಎಂಬ=ತನ್ನ ನೋವು ಅದು ಎನ್ನುವ; ಮನುಜಗೆ; ಆವುದು ಜಪ+ಆವುದು ತಪವು+ಆವುದು ದೇವಾರ್ಚನೆಗಳ್=ಯಾವುದು ಜಪ, ಯಾವುದು ತಪ, ಯಾವುದು ದೇವಾ ರ್ಚನೆಗಳು.

ಯಾವ ಯಾವ ಬಗೆಯ ಜೀವದ ನೋವೆಲ್ಲವೂ ಅದು ತನ್ನ ನೋವು ಎಂದು ಭಾವಿಸುವ ಮನುಜನಿಗೆ ಯಾವುದು ಜಪ, ಯಾವುದು ತಪ, ಯಾವುದು ದೇವಾರ್ಚನೆಗಳು.

ಜಗದ ನೋವೆಲ್ಲವನ್ನೂ ತನ್ನ ನೋವೆಂದು ಭಾವಿಸಿ ಮಿಡಿಯುವ ಮನವುಳ್ಳ ಮನುಜನಿಗೆ ಬೇರೆ ಜಪತಪ ದೇವಾರ್ಚನೆಗಳು ಬೇಕಾಗಿಲ್ಲ. ಆತ ಜನತೆಗೆ ಮಾಡುವ ಸೇವೆಯೇ ಜಪತಪ ಪೂಜೆಗಳು. ಜನಮುಖಿಯಾಗಿ ದುಡಿಯುವ ವ್ಯಕ್ತಿಗೆ ಬೇರೇನೂ ಬೇಡ, ಆತನಿಗೆ ಕಾಯಕವೇ ಕೈಲಾಸ.

೨೧

ಆವುದು ಸಮಯೋಚಿತವದು
ಭಾವಂ ಬೆರೆಸಿರ್ದ ಹೃದಯದನುವರಿದಳವರಿ
ದಾವವ ನುಡಿವವನವನಂ
ದೇವರೆನಲ್ತಿರದೆ ನೋಡು ಚೂಡಾರತ್ನಾ

ಆವುದು=ಯಾವುದು; ಸಮಯೋಚಿತವು + ಅದು = ಸಮಯೋಚಿತ ವಾದುದೊ ಅದು; ಭಾವಂ=ಭಾವವನ್ನು, ಬೆರೆಸಿ+ಇರ್ದ=ಬೆರೆಸಿದ್ದ; ಹೃದಯದ+ ಅನುವ + ಅರಿತು + ಅಳವ + ಅರಿತು + ಆವ=ಹೃದಯದ ಅನುವನ್ನು, ಶಕ್ತಿ ಯನ್ನು ಯಾವನು ಅರಿತು ನುಡಿವವನು+ಅವನಂ=ನುಡಿಯುವವನು ಅವನನ್ನು; ದೇವರ್+ಎನಲ್ತು+ಇರದೆ=ದೇವರೆನ್ನದೆ ಇರಲಾಗುವುದೇ ನೋಡು.

ಯಾವುದು ಸಮಯೋಚಿತವಾದುದೊ ಅದು ಭಾವ ಬೆರಸಿದ್ದಾಗಿರಬೇಕು. ಹೃದಯದ ಅನುವನ್ನು, ಶಕ್ತಿಯನ್ನು ಅರಿತು ನುಡಿಯುವವನನ್ನು ದೇವರೆನ್ನದೆ ಇರಲಾಗುವುದೇ.

ಕೇಳುವವನ ಹೃದಯದ ಭಾವವನ್ನು, ಶಕ್ತಿಯನ್ನು ಗ್ರಹಿಸಿ ಅದಕ್ಕನು ಗುಣವಾದ ಸಮಯೋಚಿತವಾದ ಮಾತುಗಳನ್ನಾಡುವವನನ್ನು ದೇವರ ಮಟ್ಟಕ್ಕೇರಿಸ ಲಾಗಿದೆ.

೨೨

ಆಳುಂ ಪೆಂಡಿರು ಸುತರುಂ
ಮೇಳದವರ್ ನೆಂಟರಿಷ್ಟರೊಡಹುಟ್ಟಿದರುಂ

ಕಾಲಾಳ್ಗಳು ರಥವಶ್ವಂ
ಕೇಳಳಿಪವೆ ಜವನ ಮುಳಿಸ ಚೂಡಾರತ್ನಾ

ಆಳುಂ ಪೆಂಡಿರು ಸುತರುಂ=ಆಳು, ಹೆಂಡತಿ, ಮಕ್ಕಳು; ಮೇಳದವರ್ =ಮನರಂಜನೆ ನೀಡುವವರು; ನಂಟರು+ಇಷ್ಟರು; ಒಡಹುಟ್ಟಿದರುಂ= ಒಡಹುಟ್ಟಿದವರು; ಕಾಲಾಳ್ಗಳು=ಕಾಲಾಳುಗಳು; ರಥವುಂ+ಅಶ್ವಂ=ರಥ, ಕುದುರೆ; ಜವನ ಮುಳಿಸ=ಯಮನ ಮುನಿಸನ್ನು; ಕೇಳಿ+ಅಳಿಪವೆ=ಕೇಳಿ ನಾಶವಾಗುವವೆ?

ಆಳು, ಹೆಂಡತಿ, ಮಕ್ಕಳು, ಮನರಂಜಿಸುವವರು, ನಂಟರು, ಇಷ್ಟರು, ಒಡಹುಟ್ಟಿದವರು, ಕಾಲಾಳುಗಳು, ರಥ ಕುದುರೆ–ಇವು ಕೇಳಿ ನಾಶವಾಗುವವೇ?

ಜೀವಿಗೆ ಸಾವು ಅನಿರೀಕ್ಷಿತವಾಗಿ ಬಂದೇ ಬರುತ್ತದೆ. ಹೆಂಡತಿ, ಮಕ್ಕಳು, ಆಳುಕಾಳು, ರಥಕುದುರೆ ಇತ್ಯಾದಿಗಳ ನಡುವೆ ವೈಭೋಗದಿಂದ ಬದುಕಿದರೂ ಮರಣವೆಂಬುದು ಹೇಳಿಕೇಳಿ ಬರುವುದಿಲ್ಲ. ಅದು ಪ್ರಾಕೃತಿಕವಾಗಿ ಬರುವಂಥದು.

೨೩

ಇರಿಯದ ಭಟನೀಯದ ನೃಪ
ಒಡದ ಹಯನೊಲಿಸದ ಬಲೆ ಓದದ ಪಾರ್ವಂ
ತೆರೆದೊಕ್ಕಲು ಬೆಳೆಯದ ಹೊಲ
ನರಿವರೆ ಧರಣಿಯೊಳು ಸತತ ಚೂಡಾರತ್ನಾ

ಇರಿಯದ ಭಟನ್+ಈಯದ ನೃಪ= ಇರಿಯದೆ ಇರುವ ಸೈನಿಕ, ದಾನ ಮಾಡದ ರಾಜ; ಓಡದ ಹಯನು=ಓಡದೆ ಇರುವ ಕುದುರೆ; ಒಲಿಯದ+ಅಬಲೆ= ಪ್ರೀತಿಸದ ಅಥವಾ ಒಲಿಯದಿರುವ ಹೆಣ್ಣು; ಓದದ ಪಾರ್ವಂ= ಓದದೆ ಇರುವ ಹಾರುವ; ತೆರೆದೊಕ್ಕಲು ಬೆಳೆಯದ ಹೊಲನ್=ಒಕ್ಕಲುತನ ಮಾಡಿದರೂ ಏನನ್ನೂ ಬೆಳೆಯಲಾಗದ ಹೊಲ; ಧರಣಿಯೊಳು ಸತತ=ಧರಣಿಯಲಿ ಯಾವಾಗಲೂ; ಅರಿವರೆ=ತಿಳಿಯುವರೆ.

ಹೋರಾಡದೆ ಇರುವ ಸೈನಿಕ, ದಾನ ಮಾಡದ ಅರಸ, ಓಡದೆ ಇರುವ ಕುದುರೆ, ಒಲಿಯದ ಹೆಣ್ಣು, ಓದದಿರುವ ಬ್ರಾಹ್ಮಣ, ಒಕ್ಕಲುತನ ಮಾಡಿದರೂ ಏನನ್ನೂ ಬೆಳೆಯಲಾಗದ ಹೊಲ ಇದ್ದರೂ ಇಲ್ಲದಿದ್ದರೂ ಒಂದೇ.

ಭಟ ಅಥವಾ ಸೈನಿಕನಾದವನು ಹೋರಾಡುವುದು, ರಾಜನಾದವನು ದಾನ ಮಾಡುವುದು, ಕುದುರೆಯು ವೇಗವಾಗಿ ಓಡುವುದು, ಹಾರವ ಎಂದರೆ ಚೆನ್ನಾಗಿ ವಿದ್ಯೆ ಕಲಿತು ಜ್ಞಾನವನ್ನು ಇತರರಿಗೆ ತಿಳಿಸುವವನು, ಹೊಲ ಅಥವಾ ಜಮೀನು ಎಂದರೆ ಬೆಳೆ ಬೆಳೆಯುವುದು- ಇವೆಲ್ಲ ಸಹಜವಾದಂಥವು. ಹಾಗಲ್ಲದೆ ತದ್ವಿರುದ್ಧ ವಾದರೆ ಸಮಾಜದ ಸ್ಥಿತಿ ಹದಗೆಡುವುದಂತೂ ಖಚಿತ.

೨೪

ಇಲ್ಲದ ವಿದ್ಯೆಯ ಗರ್ವಂ
ಬಲ್ಲಿದರೊಳು ಸೆಣಸಿ ಹಿಂಗಿ ಕಂದುವ ಭಂಗಂ
ಅಲ್ಲದ ಸತಿಯೊಡನಾಟಂ
ಕೊಲ್ಲದೆ ಮಾಣ್ದಪುದು ಕೇಳು ಚೂಡಾರತ್ನಾ

ಇಲ್ಲದ ವಿದ್ಯೆಯ ಗರ್ವಂ=ವಿದ್ಯೆಯಿಲ್ಲದೆ ಗರ್ವ ಪಡುವುದು; ಬಲ್ಲಿದರೊಳು=ಶಕ್ತಿಶಾಲಿಗಳ ಜೊತೆ; ಸೆಣಸಿ=ಕಾದಾಡಿ; ಹಿಂಗಿ=ಒಣಗಿ, ಕಂದುವ, ಭಂಗಂ=ಸೋಲುವ ಅವಮಾನ; ಒಲ್ಲದ ಸತಿಯ ಒಡನಾಟಂ=ಇಷ್ಟಪಡದ ಸತಿಯ ಒಡನಾಟ ಅಥವಾ ಸಹವಾಸ; ಕೊಲ್ಲದೆ, ಮಾಣ್ದಪುದು=ಬಿಡದು, ಕೇಳು.

ವಿದ್ಯೆಯಿಲ್ಲದೆ ಗರ್ವಪಡುವುದು, ಬಲ್ಲಿದರಾದವರ ಜೊತೆ ಕಾದಾಡಿ ಸೋಲುವುದು, ಒಲ್ಲದ ಹೆಂಡತಿಯ ಒಡನಾಟ- ಇವು ಕೊಲ್ಲದೆ ಬಿಡವು ಕೇಳು.

'ಅಲ್ಪ ವಿದ್ಯಾ ಮಹಾಗರ್ವೀ' ಎಂಬ ಮಾತಿಗನುಗುಣವಾಗಿ ಕೆಲವರ ವರ್ತನೆ ಇರುತ್ತದೆ. ಕೆಲವರು ಏನನ್ನೂ ಓದದೆ ಇದ್ದರೂ ಗರ್ವದಿಂದ ವರ್ತಿಸುತ್ತಾರೆ. "ವಿದ್ಯಾವಿಹೀನಃ ಪಶುಃ" ಎಂದು ಕೂಡ ಹೇಳುತ್ತಾರೆ. ಶಕ್ತಿಶಾಲಿಗಳಾದವರ ಜೊತೆ ಕಾದಾಡಿ ಸೋಲುವುದು, ಒಲ್ಲದ ಹೆಂಡತಿಯ ಒಡನಾಟ ಇವು ಮನುಷ್ಯನನ್ನು ಕೊಲ್ಲದೆ ಬಿಡವು. ಎಂದರೆ ಜೀವನದಲ್ಲಿ ಕಡುಕಷ್ಟಕ್ಕೆ ಒಳಗಾಗುವರು.

'ವಿದ್ಯಾದದಾತಿವಿನಯಂ' ವಿದ್ಯಾವಂತನಾದವನ ನಡೆವಳಿಕೆ ವಿನಯವಾಗಿರುತ್ತದೆ. ಆದರೆ ಪ್ರಸ್ತುತದಲ್ಲಿ ಇದಕ್ಕೆ ತದ್ವಿರುದ್ಧವಾಗಿ, ಅವಿದ್ಯಾವಂತರಂತೆ ನಡೆದುಕೊಳ್ಳುವವರೂ ಇರುವುದು ಚೋದ್ಯದ ಸಂಗತಿ. ತಾವು ತಿಳಿದದ್ದೇ ಜ್ಞಾನ, ಅನ್ಯರು ಏನನ್ನೂ ಅರಿಯರು ಎಂಬ ತರ್ಕ ಅವರದ್ದಾಗಿರುತ್ತದೆ.

೨೫

ಉಕ್ಕದೆಬಿಕ್ಕದೆ ಲಿಪಿಯಂ ನಕ್ಕದೆ
ತಡವರಿಸದೆಡಹದೆ ಪದವಿ
ಟ್ಟಕ್ಕರಬಣಿತೆಯೊಳೋದುವು
ದಕ್ಕರಿಗರಮಾರ್ಗವಲ್ತೆ ಚೂಡಾರತ್ನಾ

ಉಕ್ಕದೆ= ಅತಿಶಯ ತೋರದೆ; ಬಿಕ್ಕದೆ= ಬಿಕ್ಕಳಿಸದೆ; ಲಿಪಿಯಂ= ಲಿಪಿಯನ್ನು, ಅಕ್ಷರವನ್ನು; ನಕ್ಕದೆ=ನಗದೆ, ಅಪಹಾಸ್ಯ ಮಾಡದೆ; ತಡವರಿಸದೆ+ ಎಡಹದೆ=ತಡವರಿಸದೆ, ಎಡಹದೆ; ಪದವಿಟ್ಟು+ಅಕ್ಕರ=ಪದಗಳನ್ನು ಬರೆದು ಅಕ್ಷರವನ್ನು; ಬಣಿತೆಯೊಳು+ಓದುವುದು+ಅಕ್ಕರಿಗರ= ಆಕರ್ಷಕವಾಗಿಓದುವುದು ಅಕ್ಷರಸ್ಥರಾದವರ; ಮಾರ್ಗವು+ ಅಲ್ತೆ=ಮಾರ್ಗವಲ್ಲವೇ?.

ಅತಿಶಯತೋರದೆ, ಬಿಕ್ಕಳಿಸದೆ, ಅಪಹಾಸ್ಯಮಾಡದೆ, ಲಿಪಿಯನ್ನು ಅಥವಾ ಅಕ್ಷರವನ್ನು, ಪದಗಳನ್ನು ಆಕರ್ಷಕವಾಗಿ, ಸ್ಪಷ್ಟವಾಗಿ ಓದುವುದು ಅಕ್ಷರಸ್ಥನಾದವನ ಮಾರ್ಗವಲ್ಲವೇ?.

ಅಕ್ಷರಸ್ಥರುಅಥವಾ ವಿದ್ಯಾವಂತರು ಗರ್ವವಿಲ್ಲದೆ, ಅಪಹಾಸ್ಯ ಮಾಡದೆ, ತಡವರಿಸದೆ, ಎಡವದೆ ಲಿಪಿ ಅಥವಾ ಅಕ್ಷರವನ್ನುಅಥವಾ ಪದವನ್ನು ಆಕರ್ಷಕ ವಾಗಿ ಸ್ಪಷ್ಟವಾಗಿ ಓದಬೇಕು. ಹಾಗೆ ಓದುವುದೇ ವಿದ್ಯಾವಂತರು ಓದುವ ಪರಿ.

ಪ್ರಸ್ತುತವಿದ್ಯಮಾನಗಳನ್ನು ಗಮನಿಸಿದರೆ ಅಕ್ಷರಸ್ಥ ಅಥವಾ ವಿದ್ಯಾವಂತ ರೆನಿಸಿಕೊಂಡವರು ಪದಗಳ ಅಥವಾ ಅಕ್ಷರಗಳ ಉಚ್ಚಾರಣೆಗೆ ಆದ್ಯತೆ ನೀಡುತ್ತಿಲ್ಲ. ಸ್ಪಷ್ಟ ಉಚ್ಚಾರಣೆಮಾಡಬೇಕೆಂದು ಪ್ರಯತ್ನವನ್ನೂ ಪಡುವುದಿಲ್ಲ. ಇಂಥ ಮನಸ್ಥಿತಿ ಬದಲಾಗಬೇಕಿದೆ. ಪ್ರಯತ್ನಪಟ್ಟರೆ ಏನನ್ನುಬೇಕಾದರೂ ಸಾಧಿಸ ಬಹು ದಲ್ಲವೇ?

೨೬

ಉಟ್ಟೊಡೆ ಮಾಸುಗು ಕಪ್ಪಡ
ತೊಟ್ಟೊಡೆ ತಾಂ ಸವೆವುದಖಿಳ ಹೇಮಾಭರಣಂ
ನೆಟ್ಟನೆ ತನುವಳಿವುದು ಮೇಣ್
ಕೊಟ್ಟವನೊಡಲೊಡವೆ ಕೆಡದು ಚೂಡಾರತ್ನಾ

ಉಟ್ಟೊಡೆ ಮಾಸುಗು ಕಪ್ಪಡ=ಉಟ್ಟರೆ ಬಟ್ಟೆ ಮಾಸುವುದು; ತೊಟ್ಟೊಡೆ ತಾಂ=ತೊಟ್ಟರೆ ಅದು ಸವೆವುದು+ಅಖಿಳ ಹೇಮಾಭರಣಂ=ಸವೆಯುವುದು ಚಿನ್ನದ; ಆಭರಣ ನೆಟ್ಟನೆ, ತನುವು ಅಳಿವುದು=ದೇಹ ಅಳಿಯುವುದು; ಮೇಣ್=ಅಲ್ಲದೆ; ಕೊಟ್ಟವನ+ಒಡಲ+ಒಡವೆ=ದಾನಿಯಾದವನ ಐಶ್ವರ್ಯ ಹಾಳಾಗದು.

ಬಟ್ಟೆ ಉಟ್ಟುಕೊಂಡರೆ ಮಾಸುವುದು, ತೊಟ್ಟರೆ ಚಿನ್ನದ ಆಭರಣವೂ ಸವೆವುದು, ನೆಟ್ಟನೆ ತನುವು ಅಳಿಯುವುದು. ಆದರೆ ದಾನಿಯಾದವನ ಐಶ್ವರ್ಯ ಎಂದಿಗೂ ಕೆಡುವುದಿಲ್ಲ.

ಬಟ್ಟೆ, ಚಿನ್ನ, ದೇಹ- ಇವೆಲ್ಲ ಎಂದಾದರೊಂದು ದಿನ ನಾಶವಾಗುತ್ತವೆ. ಆದರೆ ದಾನಿಯಾದವನ ಐಶ್ವರ್ಯ ಎಂದಿಗೂ ನಾಶವಾಗುವುದಿಲ್ಲ.

೨೭

ಎಡರದೆತಡೆಯದೆ ತಲೆಯಂ
ಕೊಡಹದೆ ಕಡುವಹಿಲಜಾಡ್ಯವೆನಿಸದೆ ರಸಮಂ
ಕೆಡಿಸದೆ ಸರ್ವರ ಚಿತ್ರ
ಕ್ಕೊಡಬಡಲೋದುವನೆ ಗಮಕಿ ಚೂಡಾರತ್ನಾ

ಎಡರದೆ=ಅಡ್ಡಿಯುಂಟಾಗದಂತೆ; ತಡೆಯದೆ=ತಡವರಿಸದೆ, ನಿರರ್ಗಳವಾಗಿ; ತಲೆಯಂ=ತಲೆಯನ್ನು; ಕೊಡಹದೆ= ಕೊಡಹದೆ; ಕಡು=ವಿಶೇಷವಾಗಿ ಎನಿಸದೆ; ವಹಿಲಜಾಡ್ಯ=ತ್ವರಿತವಾಗಿಬರುವ ರೋಗದಂತೆ ಸ್ವಭಾವವುಳ್ಳವನು; ರಸಮಂ= ರಸವನ್ನು; ಕೆಡಿಸದೆ; ಸರ್ವರ=ಎಲ್ಲರ;

ಚಿತ್ತಕ್ಕೆ+ಒಡಬಡಲ್ಬುವನೆ=ಚಿತ್ತಕ್ಕೆ ಅಥವಾ ಮನಸ್ಸಿಗೆ ಒಡಂಬಡುವಂತೆ ಓದುವವನೆ; ಗಮಕಿ=ಗಮಕಿ.

ಎಲ್ಲಿಯೂ ಅಡ್ಡಿಯುಂಟಾಗದಂತೆ ನಿರರ್ಗಳವಾಗಿ, ಇದೊಂದು ಜಾಡ್ಯ ಎನಿಸದೆ, ರಸವನ್ನು ಕೆಡಿಸದೆ ಎಂದರೆ ರಸವತ್ತಾಗಿ, ತಲೆಯನ್ನು ಕೊಡಹದೆ, ವಿಶೇಷವಾಗಿ ತ್ವರೆಮಾಡದೆ ಎಲ್ಲರ ಮನಸ್ಸಿಗೂ ಒಪ್ಪಿಗೆಯಾಗುವಂತೆ ಓದುವವನೇ ಗಮಕಿ.

ಗಮಕಿಹೇಗಿರಬೇಕೆಂದು ಈ ಪದ್ಯದಲ್ಲಿ ಹೇಳಲಾಗಿದೆ. ಕಾವ್ಯವನ್ನು ಸರಾಗವಾಗಿ, ನಿರರ್ಗಳವಾಗಿ, ಮಧ್ಯದಲ್ಲಿ ಎಲ್ಲಿಯೂ ಅಡ್ಡಿಯುಂಟಾಗದಂತೆ, ಆತುರಪಡದೆ, ಎಲ್ಲರ ಮನಸ್ಸಿಗೂ ಹಿತವಾಗುವಂತೆ, ರಸಿಕರು ರಸಾಸ್ವಾದನೆ ಮಾಡುವಂತೆ ಸುಲಲಿತವಾಗಿ ಕಾವ್ಯವನ್ನು ಓದಬಲ್ಲವನೇ ಗಮಕಿ ಎಂದಿದ್ದಾನೆ ಕವಿ. ಗಮಕಿಗಳ ಪೈಕಿ ಕೆಲವರು ಆಗಾಗ ತಲೆ ಕೊಡಹಿ, ಆತುರಾತುರವಾಗಿ ಓದಿ ಮುಗಿಸಿ ಸಭಾ ಮರ್ಯಾದೆಗೆ ಭಂಗವುಂಟಾಗುವಂತೆ ಮಾಡುವವರನ್ನು ಗಮನಿಸಿರುವಕವಿ ಅಂಥವರಿಗೊಂದು ಕಿವಿಮಾತನ್ನು ಹೇಳಿ ಎಚ್ಚರಿಕೆಯನ್ನೂ ನೀಡಿದ್ದಾನೆ.

೨೮

ಎನಿತು ಜನಮಿರ್ದೊಡೇಂ ತ
ನ್ನನುವರಿಯದನೊಬ್ಬನಿಲ್ಲದಿರ್ದೊಡೆ ಶೂನ್ಯಂ
ಘನತರ ಚಿಕಿತ್ಸೆಯಿಲ್ಲದ
ಡೆನಿತೌಷಧವಿರ್ದಡೇನು ಚೂಡಾರತ್ನಾ

ಎನಿತು=ಎಷ್ಟು; ಜನಂ+ಇರ್ದೊಡೆ+ಏಂ=ಎಷ್ಟು ಜನರಿದ್ದರೆ ಏನು; ತನ್ನ+ಅನುವ+ಅರಿಯದನ್+ಒಬ್ಬನ್+ಇಲ್ಲದೆ+ ಇರ್ದೊಡೆ=ತನ್ನ ಶ್ರೇಷ್ಠತೆಯನ್ನು ತಿಳಿಯದವನು ಒಬ್ಬನೂ ಇಲ್ಲದಿದ್ದರೆ; ಎಲ್ಲವೂ ಶೂನ್ಯಂ=ಎಲ್ಲವೂ ಶೂನ್ಯ; ಘನತರ=ಒಳ್ಳೆಯ; ಚಿಕಿತ್ಸೆ+ಇಲ್ಲದಡೆ+ಎನಿತು+ಔಷಧ ಇರ್ದಡೆ+ಏನು=ಸರಿಯಾದ ಚಿಕಿತ್ಸೆ ಇಲ್ಲದಿದ್ದರೆ ಎಷ್ಟು ಔಷಧವಿದ್ದರೆ ಏನು ಪ್ರಯೋಜನ?

ವ್ಯಕ್ತಿಯ ಶ್ರೇಷ್ಠತೆಯನ್ನು ತಿಳಿಯದ ಎಷ್ಟು ಜನರಿದ್ದರೂ ಅದು ಶೂನ್ಯಕ್ಕೆ ಸಮ. ಒಳ್ಳೆಯ ಚಿಕಿತ್ಸೆ ಇಲ್ಲದಿದ್ದರೆ ಎಂತಹ ಉತ್ತಮ ಔಷಧವಿದ್ದು ಪ್ರಯೋಜನ ವೇನು?

ಸಮಾಜದಲ್ಲಿ ವ್ಯಕ್ತಿಯ ಘನತೆಗೌರವವನ್ನು ಅರಿತವರಿದ್ದರೆ, ಅವರ ಪ್ರೋತ್ಸಾಹದ ವಾಕ್ಸರಣಿಯಿದ್ದರೆ ಯಾರೇ ಆದರೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಲು ಸಾಧ್ಯ. ಆ ವ್ಯಕ್ತಿಯ ಬಗೆಗೆ ಏನೂ ತಿಳಿಯದ ಜನ ಸುತ್ತಲೂ ಇದ್ದರೇನು ಪ್ರಯೋಜನ? ಅದು ಶೂನ್ಯಕ್ಕೆ ಸಮ. ಇದನ್ನು ಉಪಮೆಯೊಂದರ ಮೂಲಕ ಇಲ್ಲಿ ವಿವರಿಸಲಾಗಿದೆ. ರೋಗಿಯಾದವರಿಗೆ ರೋಗನಿದಾನ ಮಾಡಿ ಚಿಕಿತ್ಸೆ ನೀಡದಿದ್ದರೆ ಎಂಥ ಔಷಧ ಇದ್ದರೆ ಏನು ಪ್ರಯೋಜನ. ಸರಿಯಾದ ಸಮಯಕ್ಕೆ ಔಷಧೋಪಚಾರ ಮಾಡಿದರೆ ಮಾತ್ರ ರೋಗ ಗುಣವಾಗಲು ಸಾಧ್ಯ. ಸಮಾಜ ಗಣ್ಯ ವ್ಯಕ್ತಿಯನ್ನು ಗುರುತಿಸಿ ಅವರಿಗೆ ನೀಡಬೇಕಾದ ಗೌರವ ಮರ್ಯಾದೆ ನೀಡದಿದ್ದರೇನು ಫಲ? ಸಮಾಜಕ್ಕೇ ಚಿಕಿತ್ಸೆ ನೀಡಬೇಕೆಂದು ಕವಿ ಇಲ್ಲಿ ಸೂಚಿಸಿದ್ದಾನೆ.

೨೯

ಎಲ್ಲಿ ಸುಶೀಲಂ ಸದ್ಗುಣ
ನೆಲ್ಲಿ ದಯೆಯು ಧರ್ಮವೆಸೆವ ಸತ್ಯಂ ನೆಲೆಗೊಂ
ಡಲ್ಲಿಯೆ ಆಯುಂ ಸಿರಿಯುಂ
ಸಲ್ಲೀಲೆಯೊಳಿರ್ಪುದಲ್ತೆ ಚೂಡಾರತ್ನಾ

ಎಲ್ಲಿ, ಸುಶೀಲಂ=ಎಲ್ಲಿ ಒಳ್ಳೆಯ ಶೀಲ; ಸದ್ಗುಣ+ಎಲ್ಲಿ= ಒಳ್ಳೆಯ ಗುಣಗಳು ಎಲ್ಲಿ; ದಯೆಯು; ಧರ್ಮಂ+ಎಸೆವ=ಧರ್ಮ ಎಲ್ಲಿ ಶೋಭಿಸುವುದೋ; ಸತ್ಯಂ=ಸತ್ಯವು; ನೆಲೆಗೊಂಡು+ಅಲ್ಲಿಯೆ=ಎಲ್ಲಿ ನೆಲೆಗೊಂಡಿ ರುವುದೋ ಅಲ್ಲಿ; ಆಯುಂ=ಆಯಸ್ಸು; ಸಿರಿಯುಂ=ಐಶ್ವರ್ಯವೂ; ಸಲ್ಲೀಲೆಯೊಳು+ ಇಪ್ಪುವು+ಅಲ್ತೆ= ಸಲ್ಲೀಲೆಯಲ್ಲಿ ವಿನೋದದಲ್ಲಿ ಇರುವುವಲ್ಲವೇ?

ಸೌಶಿಲ್ಯ, ಸದ್ಗುಣಗಳು ಎಲ್ಲಿರುವುದೋ ಅಲ್ಲಿ ದಯೆ, ಧರ್ಮ ಶೋಭಿಸುತ್ತವೆ. ಸತ್ಯವೂ ಅಲ್ಲಿ ನೆಲೆಗೊಂಡಿರುತ್ತದೆ. ಅಂಥವರಿಗೆ ಆಯುಸ್ಸು, ಐಶ್ವರ್ಯಗಳು ವೃದ್ಧಿಯಾಗುತ್ತವೆ

ಸದ್ಗುಣ, ಒಳ್ಳೆಯ ನಡತೆ ಇರುವೆಡೆಯಲ್ಲಿ ಸತ್ಯ, ದಯ, ಧರ್ಮಗಳು ನೆಲೆಗೊಂಡು ವಿರಾಜಿಸುತ್ತವೆ. ಪ್ರಸ್ತುತದಲ್ಲಿ ಈ ಎಲ್ಲ ಮೌಲ್ಯಗಳೂ ನಶಿಸುತ್ತಿವೆ.

ಅನಾಚಾರಗಳೇ ಹೆಚ್ಚುತ್ತಿವೆ.

೩೦

ಒಕ್ಕಲಿಗನೋದು ಹೆಳವನ
ವಿಕ್ರಮ ಮುಂಬೆಂದ ಸೀರೆ ಸಲ್ಲದ ಧರ್ಮಂ
ಪೊಕ್ಕಲೆಯ ನೀರು ಮನಕಂ
ಕೊಕ್ಕರಿಕೆಯ ತಾರದಿಹುದೆ ಚೂಡಾರತ್ನಾ

ಒಕ್ಕಲಿಗನ+ಓದು=ಒಕ್ಕಲಿಗ ಅಥವಾ ಬೇಸಾಯಮಾಡುವವನ ಓದು; ಹೆಳವನ=ಹೆಳವನಾದವನ; ವಿಕ್ರಮ=ಗೆಲುವು ಅಥವಾ ಸಾಧನೆ; ಮುಂಬೆಂದ= ಮುಂದೆ ಬೆಂದ, ಸೀರೆ=ಸೀರೆ, ಸಲ್ಲದ; ಪಕ್ಕಲೆಯ ನೀರು=ಚರ್ಮದ ಚೀಲದ ನೀರು; ಮನಕಂ=ಮನಸ್ಸಿಗೆ; ಕೊಕ್ಕರಿಕೆಯ=ಅಸಹ್ಯವನ್ನು; ತಾರದಿಹುದೆ=ತರುವುದಿಲ್ಲವೇ.

ಒಕ್ಕಲಿಗನ ವಿದ್ಯೆ, ಹೆಳವನಾದವನ ಸಾಧನೆ, ಮುಂದೆ ಬೆಂದ ಸೀರೆ, ಚರ್ಮದ ಚೀಲದ ನೀರು, ಮನಸ್ಸಿಗೆ ಅಸಹ್ಯವುಂಟುಮಾಡುವುದಿಲ್ಲವೇ.

ಹಿಂದೆ ವೃತ್ತಿಯಾಧಾರಿತ ಸಮಾಜವಿದ್ದಾಗ ಯಾರು ಯಾವ ವೃತ್ತಿ ಮಾಡಬೇಕೋ ಅದನ್ನೇ ಮಾಡುವುದು ಒಳಿತು ಎಂಬ ವ್ಯವಸ್ಥೆ ಇತ್ತು. ತಮ್ಮವೃತ್ತಿ ಬಿಟ್ಟು ಬೇರೆಡೆಗೆ ಮನಸೋತರೆ ಸಮಾಜದಲ್ಲಿ ಏರುಪೇರು ಉಂಟಾಗುತ್ತಿತ್ತು. ಒಕ್ಕಲಿಗನಾದವ ವಿದ್ಯಾರ್ಜನೆ ಕಡೆಗೆ ಮನವಿಟ್ಟರೆ ಬೇಸಾಯ ಹಾಳಾಗುತ್ತಿತ್ತು. ಹಾಗಾಗಿ ಒಕ್ಕಲಿಗ ಎಂದರೆ ಬೇಸಾಯ ಮಾಡುವವನು ಎಂದೇ ಹೇಳುತ್ತಿದ್ದರು. ಪ್ರಸ್ತುತ ಸಮಾಜದಲ್ಲಿ ಇದು ವ್ಯತಿರಿಕ್ತವಾಗಿದೆ. ಚೆನ್ನಾಗಿ ಓದಿಕೊಂಡ ವ್ಯಕ್ತಿ ವ್ಯವಸಾಯ ಮಾಡಲು ಮುಂದಾಗುತ್ತಿರುವುದನ್ನು ಕಾಣಬಹುದು. ಹಾಗೆಯೇ

ಹೆಳವನಾದವನು ಏನನ್ನಾದರೂ ಸಾಧಿಸುವಷ್ಟು ತರಬೇತಿ ಪಡೆಯುತ್ತಿದ್ದಾನೆ, ಸಾಧಿಸುತ್ತಿದ್ದಾನೆ. ಸಾಧನೆಗೆ ಹಲವಾರು ಮೆಟ್ಟಿಲುಗಳಿವೆ. ಸುಟ್ಟುಹೋದ ಸೀರೆಯ ಭಾಗವನ್ನು ತೆಗೆದು ಬೇರೆಬೇರೆ ಉಡುಪುಗಳನ್ನು ತಯಾರಿಸುವುದಿದೆ. ಹಾಗಾಗಿ ಇಂಥ ವಿಷಯಗಳು ಅಸಹ್ಯವುಂಟುಮಾಡುವಂಥವಲ್ಲ. ಚರ್ಮದ ಚೀಲದನೀರು ಕುಡಿಯಲು ಅಸಹ್ಯವಾಗಬಹುದು.

೩೧

ಒತ್ತುವ ಕೆರ ಒಲ್ಲದ ಸತಿ
ಮುತ್ತಿಗೆಗೊಳಗಪ್ಪ ದುರ್ಗಮಧಮನ ಕೆಳೆಯುಂ
ಸತ್ತವರಿಂದ ಕಷ್ಟದ
ಹತ್ತಿರೆ ಸಾರುವವನೆಗ್ಗ ಚೂಡಾರತ್ನಾ

ಒತ್ತುವ ಕೆರ=ಒತ್ತುವ ಚಪ್ಪಲಿ; ಒಲ್ಲದ ಸತಿ=ಇಷ್ಟವಿಲ್ಲದ ಹೆಂಡತಿ; ಮುತ್ತಿಗೆಗೆ+ಒಳಗಪ್ಪ ದುರ್ಗಮ್+ಅಧಮನ ಕೆಳೆಯುಂ=ಮುತ್ತಿಗೆಗೆ ಒಳಗಾಗುವ ದುರ್ಗ, ಕೆಟ್ಟವನ ಗೆಳೆತನ; ಸತ್ತವರಿಂದ ಕಷ್ಟವಾದುದರ ಹತ್ತಿರ ಸಾರುವವನು+ ಎಗ್ಗ=ಸಾವಿಗಿಂತ ಕಷ್ಟವಾದುದರ ಹತ್ತಿರ ಹೋಗುವವನು ದಡ್ಡ.

ಚಪ್ಪಲಿ ಕಾಲಿಗೆ ರಕ್ಷಣೆ ನೀಡುವಂಥದು, ಸುಲಭ ನಡಿಗೆಗೆ ಅನುಕೂಲವಾದಂಥದು. ಹಾಗಲ್ಲದೆ ಚಪ್ಪಲಿ ಮೆಟ್ಟಿದಾಗ ಅದು ಒತ್ತುತ್ತಿದ್ದರೆ ನಡೆಯುವುದೇ ಕಷ್ಟವಾಗುತ್ತದೆ. ಅಂಥ ಚಪ್ಪಲಿಯನ್ನುಳ್ಳಾತ, ಇಷ್ಟವಿಲ್ಲದ ಹೆಂಡತಿ ಯೊಡನಿರುವವನು, ಮುತ್ತಿಗೆಗೆ ಸುಲಭವಾಗಿ ಒಳಗಾಗುವ ದುರ್ಗವಿರುವ ಊರನ್ನು ಆಳುವ ದೊರೆ, ಅಧಮನಾದವನ ಗೆಳೆತನ, ಸಾವಿಗಿಂತ ಕಷ್ಟವಾದುದರ ಹತ್ತಿರ ಹೋಗುವವನು ದಡ್ಡ ಎಂದು ಹೇಳಲಾಗಿದೆ.

ಇಷ್ಟವಿಲ್ಲದ ಸತಿಯನ್ನು ಬಿಡುವುದು ಭಾರತೀಯ ಸಾಮಾಜಿಕ ಸಂದರ್ಭ ದಲ್ಲಿ ಅಷ್ಟು ಸುಲಭವಲ್ಲ. ಏಕೆಂದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದ ಕಾರಣಗಳಿಂದ. ಕ್ರಮೇಣ ಸ್ತ್ರೀಗೆ ಶಿಕ್ಷಣ, ಆರ್ಥಿಕ ಭದ್ರತೆ ಇರುವುದರಿಂದ ಒಲ್ಲದ ಪತಿಯನ್ನು ಬಿಡುವ ಪ್ರಸಂಗಗಳು ಇಲ್ಲದೇ ಇಲ್ಲ.

೩೨

ಒರ್ವರ ಸಿರಿಯೊರ್ವರ ಜಸ
ವೊರ್ವರ ಸಾಮರ್ಥ್ಯವೊರ್ವರಾಕಾರಂ ಮ
ತ್ತೊರ್ವರ್ ಬಯಸಿದರುಂಟೇ
ಪೂರ್ವಾರ್ಜಿತವಿಲ್ಲದವರ್ಗೆ ಚೂಡಾರತ್ನಾ

ಒರ್ವರ=ಬೇರೊಬ್ಬರ; ಸಿರಿಯು+ಒರ್ವರ ಜಸ=ಸಿರಿಯು, ಬೇರೊಬ್ಬರ ಯಶಸ್ಸು; ಒರ್ವರ=ಒಬ್ಬರ; ಸಾಮರ್ಥ್ಯವು+ ಒರ್ವರ+ಆಕಾರಂ=ಸಾಮರ್ಥ್ಯ, ಬೇರೆಯವರ ರೂಪ ಅಥವಾ ಆಕಾರ; ಮತ್ತೊರ್ವರ್=ಮತ್ತೊಬ್ಬರು; ಬಯಸಿ ದರೆ+ಉಂಟೆ=ಬಯಸಿದರೆ ಬರುವುದೇ; ಪೂರ್ವ+ಅರ್ಜಿತವು+ ಇಲ್ಲದ+ ಅವರ್ಗೆ= ಹಿಂದೆ ಮಾಡದೆ ಇದ್ದವರಿಗೆ.

ಬೇರೊಬ್ಬರ ಸಂಪತ್ತು, ಬೇರೆಯವರ ಯಶಸ್ಸು, ಸಾಮರ್ಥ್ಯ, ಬೇರೆಯವರ ರೂಪು ಅಥವಾ ಆಕಾರ ಬಯಸಿದರೆ ಬರಲು ಸಾಧ್ಯವೇ? ಪೂರ್ವಾರ್ಜಿತ ಪುಣ್ಯವಿದ್ದವರಿಗೆ ಮಾತ್ರ ಸಂಪತ್ತು, ಸಾಮರ್ಥ್ಯ, ರೂಪಗುಣಗಳು ಬರಲು ಸಾಧ್ಯ.

ಪೂರ್ವಜನ್ಮದ ಬಗೆಗೆ, ಅಂದು ಮಾಡಿದ ಪಾಪಪುಣ್ಯದ ಬಗೆಗೆ ಕವಿ ಹೇಳಿರುವುದು ಕವಿಯ ಸಮಕಾಲೀನರು ಹಾಗೂ ಪ್ರಸ್ತುತದಲ್ಲಿರುವವರು ಸದಾಚಾರ ಸಂಪನ್ನರಾಗಿ ನಡೆದುಕೊಳ್ಳುವಂತಾಗಲಿ ಎಂಬ ಸದುದ್ದೇಶದಿಂದ ಎಂಬುದು ಸ್ಪಷ್ಟ.

೩೩

ಓದದಬಾಯ್ ಅಮೃತಾನ್ನವ
ಮೋದದಬಾಯ್ಸಜ್ಜನರ್ಕಳಂ ಪ್ರಿಯದಿಂ
ಆದರಿಸದಬಾಯದು ತಾಂ
ಮೇದಿನಿಯೊಳುಬಿಲದಬಾಯಿ ಚೂಡಾರತ್ನಾ

ಓದದ ಬಾಯ್=ಓದದೆ ಇರುವ ಬಾಯಿ; ಅಮೃತಾನ್ನವಮೋದದ ಬಾಯ್=ಅಮೃತಾನ್ನ ಸವಿಯದ ಬಾಯಿ; ಸಜ್ಜನರ್ಕಳಂ=ಸಜ್ಜನರನ್ನು; ಪ್ರಿಯದಿಂ=

ಪ್ರೀತಿಯಿಂದ; ಆದರಿಸಿದಬಾಯ್+ಅದು=ಆದರಿಸದ ಬಾಯಿ ಅದು; ತಾಂ= ತಾನು; ಮೇದಿನಿಯೊಳು=ಭೂಮಿಯಲ್ಲಿ; ಬಿಲದ ಬಾಯಿ=ಬಿಲದ ಬಾಯಿಯಿದ್ದಂತೆ.

ಓದದೆ ಇರುವ ಬಾಯಿ, ಅಮೃತಾನ್ನವ ಸವಿಯದ ಬಾಯಿ, ಸಜ್ಜನರನ್ನು ಪ್ರೀತಿಯಿಂದ ಆದರಿಸದ ಬಾಯಿ ಅದು ಭೂಮಿಯಲ್ಲಿ ಬಿಲದ ಬಾಯಿಯಿದ್ದಂತೆ.

ಬರೆಯದ ಕೈ ಹೇಗೆ ವ್ಯರ್ಥವೋ ಓದದ ಬಾಯಿ ಕೂಡ. ಇವೆರಡೂ ಸಾಲುಗಳು ವಿದ್ಯೆಯ ಪ್ರಾಮುಖ್ಯತೆಯನ್ನು ಹೇಳುತ್ತವೆ ಎಂದು ಕವಿ ಸ್ಪಷ್ಟಪಡಿಸಿದ್ದಾನೆ.

ಬಾಯಿ ಇರುವುದು ಓದಲು ಅಥವಾ ವಿದ್ಯೆ ಕಲಿಯಲು, ಸವಿಸವಿಯಾದ ಭೋಜನ ಮಾಡಲು, ಸಜ್ಜನರನ್ನು ಪ್ರೀತಿಯಿಂದ ಗೌರವದಿಂದ ಮಾತನಾಡಿಸಲು. ಹೀಗಲ್ಲದೆ ಇದ್ದ ಬಾಯಿ ಅದು ಬಿಲದ ಬಾಯಿ. ಇದು ಯಾವ ಪುರುಷಾರ್ಥಕ್ಕೆ? ಮನೆಯ ಗೋಡೆ ಅಥವಾ ನೆಲದಲ್ಲಿ ಮಾಡುವ ಬಿಲವು ತೊಂದರೆಯನ್ನೇ ನೀಡುವಂಥದು. ಕೇವಲ ಬಿಲದ ಬಾಯಿಯಾಗದೆ ಮಾನವ ತನ್ನ ಬಾಯಿಯನ್ನು ಸತ್ಕಾರ್ಯಗಳಿಗೆ ಬಳಸಲಿ ಎನ್ನುವುದು ಕವಿಯ ಆಶಯ.

೩೪

ಓದಿನೊಳಲ್ಲದೆಯಿಹಪರ
ಸಾಧನ ಸಂಪತ್ತುಮಾಗದದು ಕಾರಣದಿಂ
ಓದುವುದು ಸಕಲ ಶ್ರುತಮಂ
ಭೇದಿಸಲಳವಪ್ಪುದಲ್ತೆ ಚೂಡಾರತ್ನಾ

ಓದಿನೊಳು+ಅಲ್ಲದೆ=ಓದಿನಲ್ಲಿ ಅಲ್ಲದೆ; ಇಹಪರ ಸಾಧನ ಸಂಪತ್ತುಂ+ ಅದು=ಇಹಪರ ಸಾಧನೆಗೆ ಅದು ಸಂಪತ್ತು ಆಗದು; ಅದು ಕಾರಣದಿಂ=ಆ ಕಾರಣದಿಂದ; ಓದುವುದು=ಓದಬೇಕು; ಸಕಲ ಶ್ರುತಮಂ=ಎಲ್ಲ ವೇದ ವೇದಾಂಗ ಗಳನ್ನು; ಭೇದಿಸಲು+ಅಳವು+ಅಪ್ಪುದು+ಅಲ್ತೆ=ಅರ್ಥೈಸಲು, ಅರಿಯಲು ಸಾಧ್ಯ ವಾಗುವುದಲ್ಲವೇ?

ವಿದ್ಯಾವಂತನಾದವನಿಗೆ ಇಹಪರ ಸೌಖ್ಯವುಂಟಾಗುತ್ತದೆ. ಓದಿದರೆ ಅಥವಾ ವಿದ್ಯೆ ಪಡೆದರೆ ಮಾತ್ರ ಇದು ಸಾಧ್ಯ. ವಿದ್ಯೆ ಅಥವಾ ಓದು ಇಲ್ಲದಿದ್ದರೆ ಸಾಧನೆಗೆ ಸಂಪತ್ತಾಗದು. ಆ ಕಾರಣದಿಂದ ಓದು ಎಂಬುದು ಅತಿ ಮುಖ್ಯ. ವಿದ್ವತ್ತು ಇದ್ದರೆ ಮಾತ್ರ ಎಲ್ಲ ವೇದವೇದಾಂಗಗಳನ್ನು ಅರಿಯಲು, ವಿಶ್ಲೇಷಿಸಲು ಸಾಧ್ಯವಾಗುವುದಿಲ್ಲವೇ?

ಓದಿನ ಅಥವಾ ವಿದ್ಯೆಯಪ್ರಾಮುಖ್ಯ ಎಂಥದೆಂಬುದನ್ನು ಕವಿ ತಿಳಿಸುತ್ತಿದ್ದಾನೆ. ವಿದ್ಯೆ ಇಹಪರ ಸಾಧನೆಗೆ ಸಂಪತ್ತು ಇದ್ದಂತೆ. ಆ ಸಂಪತ್ತು ಎಂದಿಗೂ ವ್ಯರ್ಥವಾಗದು. ಅತಿ ಕ್ಲಿಷ್ಟವೆಂದು ಭಾವಿಸುವ ವೇದಗಳನ್ನು ಕೂಡ ಭೇದಿಸಿ, ವಿಶ್ಲೇಷಿಸಿ, ವಿಮರ್ಶಿಸುವ, ಟೀಕಿಸುವ ಸಾಮರ್ಥ್ಯ ಬರುವುದು ವಿದ್ಯೆಯಿಂದಲ್ಲವೇ ಎಂದು ಪ್ರಶ್ನೆ ಕೇಳಲಾಗಿದೆ.

೩೫

ಓರಂತಿದಿರಿನ ಹೃದಯದ
ಸಾರಾಸಾರತೆಯನಱಿದು ನುಡಿವಂಗಿಳೆಯೊಳು
ಕೂರದರಾರ್ ಮೆಚ್ಚದರಾರ್
ಆರಾಧಿಸದಿರ್ಪರಾರು ಚೂಡಾರತ್ನಾ

ಓರಂತೆ+ಇದಿರಿನ ಹೃದಯದ=ಚೆನ್ನಾಗಿ ಎದುರಾಳಿಗಳ ಹೃದಯದ; ಸಾರ+ ಅಸಾರತೆಯನ್+ಅಱಿದು=ಸಾಮರ್ಥ್ಯವನ್ನು, ಅಸಾಮರ್ಥ್ಯವನ್ನು ತಿಳಿದು; ನುಡಿವಂಗೆ+ಇಳೆಯೊಳು=ನುಡಿಯುವವನಿಗೆ ಭೂಮಿಯಲ್ಲಿ; ಕೂರದರಾರ್ =ಪ್ರೀತಿಸದೆ ಇರುವವರು ಯಾರು; ಮೆಚ್ಚದರಾರ್=ಮೆಚ್ಚದೆ ಇರುವವರು ಯಾರು; ಆರಾಧಿಸದೆ+ಇರ್ಪರ್+ಆರು= ಆರಾಧಿಸದೆ ಇರುವವರು ಯಾರು.

ಬೇರೆಯವರ ಸಾಮರ್ಥ್ಯವನ್ನು, ಅಸಾಮಾರ್ಥ್ಯವನ್ನು ಚೆನ್ನಾಗಿ ತಿಳಿದು ನುಡಿಯುವವರನ್ನು ಭೂಮಿಯಲ್ಲಿ ಪ್ರೀತಿಸದಿರುವವರು ಯಾರು? ಮೆಚ್ಚದೆ ಇರುವವರು ಯಾರು, ಆರಾಧಿಸದೆ ಇರುವವರಾರು?

ಇಲ್ಲಿ ಮಾತಿನ ಮೌಲ್ಯವನ್ನು ಕುರಿತು ಹೇಳಲಾಗಿದೆ. ತನ್ನ ಎದುರಿಗಿರುವವರ ಮನದಿಂಗಿತವನ್ನು ಅರಿತು ಮಾತನಾಡುವವನನ್ನು ಈ ಭೂಮಿಯಲ್ಲಿ

ಪ್ರೀತಿಸದೆ, ಮೆಚ್ಚದೆ, ಆರಾಧಿಸದೆ ಇರುವವರು ಯಾರು? ಎಲ್ಲರೂ ಅಂಥವರನ್ನು ಇಷ್ಟಪಡುವರು.

೩೬

ಕಂದಿಲ್ಲದ ಕುಂದಿಲ್ಲದ
ನಿಂದಿಲ್ಲದ ಹಿರಿಯರಿಲ್ಲ ಕಿಂಚಿದ್ದೋಷಂ
ಹೊಂದದ ಕಾವ್ಯಮದಿಲ್ಲಂ
ಎಂದುಂ ಸಾಯದರುಮಿಲ್ಲ ಚೂಡಾರತ್ನಾ

ಕಂದಿಲ್ಲದ=ಕಳಂಕವಿಲ್ಲದ; ಕುಂದಿಲ್ಲದ=ಕೊರತೆಯಿಲ್ಲದ; ನಿಂದಿಲ್ಲದ= ನಿಂದೆಯಿಲ್ಲದ; ಹಿರಿಯರಿಲ್ಲ; ಕಿಂಚಿತ್+ದೋಷಂ ಹೊಂದದ=ಸ್ವಲ್ಪವೂ ದೋಷ ವಿಲ್ಲದ; ಕಾವ್ಯ + ಅದು + ಇಲ್ಲ=ಕಾವ್ಯವಿಲ್ಲ; ಎಂದುಂ=ಯಾವಾಗಲೂ; ಸಾಯ ದವರುಂ+ಇಲ್ಲ = ಸಾಯದವರು ಇಲ್ಲ.

ಕಳಂಕವಿಲ್ಲದ, ಕೊರತೆಯಿಲ್ಲದ, ನಿಂದೆಯಿಲ್ಲದ ಹಿರಿಯರಿಲ್ಲ. ಸ್ವಲ್ಪವೂ ದೋಷವಿಲ್ಲದ ಕಾವ್ಯವಿಲ್ಲ. ಸಾಯದೆ ಇರುವವರು ಯಾರೂ ಇಲ್ಲ.

ಕುಂದುಕೊರತೆಗಳಿಲ್ಲದ ಹಿರಿಯರು ಇರಲು ಸಾಧ್ಯವಿಲ್ಲ. ಮನುಷ್ಯ ಎಂದ ಮೇಲೆ ಕುಂದುಕೊರತೆಗಳಿಲ್ಲದ ಪರಿಪೂರ್ಣತೆ ಸಾಧ್ಯವಿಲ್ಲ. ಹಾಗೆಯೇ ಕಾವ್ಯವೂ ದೋಷವಿಲ್ಲದೆ ಇರಲು ಸಾಧ್ಯವಿಲ್ಲ. ಕವಿ ಕಿಂಚಿತ್ತೂ ದೋಷವಿಲ್ಲದೆ ಕಾವ್ಯ ಬರೆಯುವುದು ಕಷ್ಟ ಸಾಧ್ಯ.

ಕೊನೆಯದಾಗಿ ಮನುಷ್ಯನಿಗೆ ಸಾವು ಖಚಿತ. ಹುಟ್ಟು ಸಾವುಗಳು ಆಕಸ್ಮಿಕ ಹಾಗೂ ಅನಿವಾರ್ಯ ಎಂಬ ಸಾರ್ವಕಾಲಿಕ ಸತ್ಯವನ್ನು ಪ್ರತಿಪಾದಿಸಲಾಗಿದೆ.

೩೭

ಕಣ್ಣೊಳಗಣ ಕರಿಗುಡ್ಡೆಯು
ಸಣ್ಣಹುದೆಂದೆನಲುಬೇಡ ಜಗಮಂ ಕಾಣ್ಬುದು
ತನ್ನೊಳು ವಿವೇಕಮುಳ್ಳೊಡೆ
ಬಿನ್ನಣಮಂ ನೆರೆಯಲೇಕೆ ಚೂಡಾರತ್ನಾ

ಕಣ್ಣೊಳಗಣ ಕರಿಗುಡ್ಡೆಯು=ಕಣ್ಣಿನೊಳಗೆ ಇರುವ ಕರಿಗುಡ್ಡೆ; ಸಣ್ಣಹುದು+ಎಂದೆನಲು ಬೇಡ=ಸಣ್ಣದೆಂದು ಹೇಳಬೇಡ; ಜಗಮಂ=ಜಗತ್ತನ್ನು; ಕಾಣ್ಬುದು= ಕಾಣುವುದು; ತನ್ನೊಳು=ತನ್ನೊಳಗೆ; ವಿವೇಕಮ್+ಉಳ್ಳೊಡೆ= ವಿವೇಕ ವಿದ್ದರೆ; ಬಿನ್ನಣಮಂ= ಒಯ್ಯಾರವನ್ನು; ನೆರೆಯಲೇಕೆ=ಮಾಡುವುದೇಕೆ.

ಕಣ್ಣೊಳಗೆ ಇರುವ ಕರಿಗುಡ್ಡೆ ಸಣ್ಣದು ಎಂದು ಹೇಳುವುದು ಬೇಡ. ಅದು ಜಗತ್ತನ್ನೇ ನೋಡಲು ನಮಗೆ ನೆರವಾಗುತ್ತದೆ. ವಿವೇಕ ಇದ್ದವರು ಒಯ್ಯಾರ ಮಾಡುವ ಆವಶ್ಯಕತೆ ಇಲ್ಲ.

ಕಿರಿದರೊಳು ಹಿರಿದನ್ನು ಕಾಣುವ ಮಾನವನ ಅಂಗಗಳಲ್ಲಿ ಕಣ್ಣು ಎಷ್ಟು ಮಹತ್ತ್ವವಾದುದು ಎಂಬುದನ್ನು ಕವಿ ಮಾರ್ಮಿಕವಾಗಿ ಹೇಳಲಾಗಿದೆ.

೩೮

ಕನಕಂ ಪುಣ್ಯದಿ ಸಾರ್ದೊಡೆ
ಘನಮುನಿ ಸಜ್ಜನರಿಗಿತ್ತು ಭೋಗಿಸೆ ಸಫಲಂ
ತನಗಿಲ್ಲ ದಾನಕಿಲ್ಲದ
ಮನುಜನ ಸಿರಿ ಕನಸಿನಂತೆ ಚೂಡಾರತ್ನಾ

ಕನಕಂ=ಚಿನ್ನ; ಪುಣ್ಯದಿ=ಪುಣ್ಯವಶಾತ್; ಸಾರ್ದಡೆ=ಬಳಿ ಬಂದರೆ; ಘನಮುನಿ=ಶ್ರೇಷ್ಠ ಮುನಿ; ಸಜ್ಜನರಿಗಿತ್ತು=ಸಜ್ಜನರಿಗೆ ಕೊಟ್ಟು; ಭೋಗಿಸೆ=ತಾನು ಅನುಭವಿಸಿದರೆ; ಸಫಲಂ=ಸಾರ್ಥಕ; ತನಗಿಲ್ಲ=ತನಗಿಲ್ಲದ; ದಾನಕಿಲ್ಲದ; ಮನುಜನ ಸಿರಿ ಕನಸಿನಂತೆ= ಮನುಷ್ಯನ ಐಶ್ವರ್ಯ ಕನಸಿನಂತೆ.

ಪುಣ್ಯವಶಾತ್ ಚಿನ್ನ ಬಳಿ ಬಂದರೆ ಶ್ರೇಷ್ಠನಾದ ಮುನಿ ಅದನ್ನು ಸಜ್ಜನರಿಗೆ ನೀಡಿ ತಾನೂ ಅನುಭವಿಸಿದರೆ ಅದು ಸಾರ್ಥಕವಾಗುತ್ತದೆ. ತನಗೂ ಇಲ್ಲದೆ, ದಾನ ನೀಡಲೂ ಇಲ್ಲದೆ ಇರುವ ಸಿರಿ ಕೇವಲ ಕನಸಿನಂತೆ; ಅದು ನನಸಾಗಲು ಸಾಧ್ಯವೇ?

ಅಕಸ್ಮಿಕವಾಗಿ ಸಿರಿ ಬಂದಾಗ ಅದನ್ನು ಸತ್ಪಾತ್ರರಿಗೆ ನೀಡಿ, ತಾನೂ ಅನುಭವಿಸಿದರೆ ಒಳ್ಳೆಯದು. ದಾನ ನೀಡಲಾಗದ ಹಣ ಕನಸಿನಲ್ಲಿ ಕಂಡ ಹಣದಂತೆ ವ್ಯರ್ಥ.

೩೯

ಕನಕದ ಸಿಂಹಾಸನದೊಳು
ಶುನಕನ ಕುಳ್ಳಿರಿಸಿ ಸೇಸೆದಳಿಯಲು ಮತ್ತಂ
ತನು ಕೆರಳಿ ಬಗುಳ್ವುದಲ್ಲದೆ
ಘನತೆಯದಕುಂಟೆ ವಿವೇಕ ಚೂಡಾರತ್ನಾ

ಕನಕದ ಸಿಂಹಾಸನದೊಳು=ಚಿನ್ನದ ಸಿಂಹಾಸನದಲ್ಲಿ; ಶುನಕನ= ನಾಯಿಯನ್ನು; ಕುಳ್ಳಿರಿಸಿ; ಸೇಸೆ+ತಳಿಯಲು=ಅಕ್ಷತೆ ಹಾಕಲು; ಮತ್ತಂ=ಮತ್ತೆ; ತನು=ತಾನು; ಕೆರಳಿ; ಬಗುಳ್ವುದು+ಅಲ್ಲದೆ=ಬಗುಳುವುದಲ್ಲದೆ; ಘನತೆಯು+ಅದಕುಂಟೆ ವಿವೇಕ= ಘನತೆ, ವಿವೇಕ ಅದಕ್ಕುಂಟೆ?

ಚಿನ್ನದ ಸಿಂಹಾಸನದಲ್ಲಿ ನಾಯಿಯನ್ನು ಕುಳ್ಳಿರಿಸಿ ಅಕ್ಷತೆಯಿಕ್ಕಲು, ಮತ್ತೆ ಅದು ಕೆರಳಿ ಬಗುಳುವುದಲ್ಲದೆ, ವಿವೇಕ, ಘನತೆಗಳು ಅದಕ್ಕೆ ಉಂಟೆ?

ಯೋಗ್ಯತೆ ಇರುವವರಿಗೇ ಗೌರವ ಕೊಡಬೇಕೆಂದು ಹೇಳಲು ನಾಯಿಯ ಉದಾಹರಣೆಯನ್ನು ಕೊಡಲಾಗಿದೆ. ಋಣಾತ್ಮಕ ಅಂಶಗಳನ್ನು ಹೇಳಿ ಆ ಮೂಲಕ ಮಾನವನನ್ನು ಧನಾತ್ಮಕ ಚಿಂತನೆಯತ್ತ ಹೋಗಬೇಕೆಂಬುದನ್ನು ನಿರೂಪಿಸಲಾಗಿದೆ.

೪೦

ಕರಿದಂತ ಸಿಂಗದುಗುರ್ಗಳು
ಉರಗನ ಮಾಣಿಕ್ಯವಧಿಕಲೋಭಿಯ ಧನಮುಂ
ವರಹದ ದಾಡೆಯುಮಿನಿತುಂ
ಹರಣಂಗೊಂಡಲ್ಲದಿಲ್ಲ ಚೂಡಾರತ್ನಾ

ಕರಿದಂತ=ಆನೆಯ ದಂತ; ಸಿಂಗದ+ಉಗುರ್ಗಳು=ಸಿಂಹದ ಉಗುರುಗಳು; ಉರಗನ ಮಾಣಿಕ್ಯವು+ಅಧಿಕ ಲೋಭಿಯ ಧನಮುಂ=ಹಾವಿನ ಹೆಡೆಯಲ್ಲಿಯ ಮಾಣಿಕ್ಯ, ಅಧಿಕ ಲೋಭಿಯ ಹಣ; ವರಹದ ದಾಡೆಯುಂ+ಇನಿತುಂ=ಹಂದಿಯ ಕೋರೆದಾಡೆ ಇವಿಷ್ಟು; ಹರಣಂ+ಕೊಂಡಲ್ಲದೆ+ಇಲ್ಲ=ಪ್ರಾಣವನ್ನು ಕೊಂಡಲ್ಲದೆ ಬಿಡವು.

ಆನೆಯ ದಂತ, ಸಿಂಹದ ಉಗುರು, ಹಾವಿನ ಹೆಡೆಯ ಮಾಣಿಕ್ಯ, ಜಿಪುಣನ ಹಣ, ಹಂದಿಯ ಕೋರೆದಾಡೆ ಇವು ಪ್ರಾಣವನು ಕೊಂಡಲ್ಲದೆ ಬಿಡವು.

ಆನೆ, ಸಿಂಹ, ಹಾವು, ಹಂದಿಗಳ ದಂತ, ಉಗುರು, ಮಾಣಿಕ್ಯ, ಕೋರೆದಾಡೆಗಳನ್ನು ಪಡೆಯುವುದು ಕಡುಕಷ್ಟವಾದ ಹಾಗೂ ಪ್ರಾಣಾಂತಿಕವಾದ ವಿಚಾರ. ಅಧಿಕ ಜಿಪುಣನನ್ನು ಮೃಗಗಳ ಜತೆ ಹೋಲಿಸಿರುವುದು ಅವುಗಳಿಗಿಂತಲೂ ಈ ಲೋಭಿ ಕೆಟ್ಟವನೆಂಬುದನ್ನು ಸೂಚಿಸುತ್ತದೆ. ಈ ಜೀವಿಗಳಿಂದ ಪ್ರಾಣಹಾನಿ ತಪ್ಪದು. ಹಾಗೆಯೇ ಲೋಭಿಯಾದವನಿಂದ ಹಣ ಪಡೆಯುವುದು ಪ್ರಾಣಾಪಾಯ ಎಂದು ೂಚಿಸಲಾಗಿದೆ.

೪೧

ಕರ್ಮವ ಕೆಡಿಪನೆ ಗುರು ಸ
ತ್ಕರ್ಮದಿ ನಡೆದವನೆ ಮಾರ್ಗಿ ಕಾಲೋಚಿತ ದಯ
ಧರ್ಮವ ಪಡೆವನೆ ಹಿರಿಯಂ
ಮರ್ಮವನರಿವನೇ ಸುಮಿತ್ರ ಚೂಡಾರತ್ನಾ

ಕರ್ಮವ ಕೆಡಿಪನೆ ಗುರು=ಕರ್ಮದ ಫಲಗಳನ್ನು ಕೆಡಿಸಿ ಅಧ್ಯಾತ್ಮದತ್ತ ನಡೆಸುವವನೇ ಗುರು; ಸತ್ಕರ್ಮದಿ=ಒಳ್ಳೆಯ ಕೆಲಸದಿಂದ; ನಡೆದವನೆ ಮಾರ್ಗಿ=ನಡೆದವನೆ ಸನ್ಮಾರ್ಗಿ; ಕಾಲೋಚಿತ ದಯಧರ್ಮವ ಪಡೆವನೆ ಹಿರಿಯಂ=ಕಾಲಕ್ಕೆ ಸರಿಯಾದ ದಯೆಧರ್ಮ ಹೊಂದಿರುವವನೆ ಹಿರಿಯ; ಮರ್ಮವನ್ನು+ಅರಿವನೇ ಸುಮಿತ್ರ=ರಹಸ್ಯವನ್ನು ತಿಳಿಯುವವನೇ ಒಳ್ಳೆಯ ಮಿತ್ರ.

ಕರ್ಮದ ಫಲವನ್ನು ಕೆಡಿಸಿ ಅಧ್ಯಾತ್ಮದತ್ತ ನಡೆಸುವವನೇ ಗುರು, ಸತ್ಕರ್ಮಗಳಲ್ಲಿ ತೊಡಗುವವನೇ ಸನ್ಮಾರ್ಗಿ, ಕಾಲಕ್ಕೆ ಸರಿಯಾದ ದಯೆ, ಧರ್ಮ ಹೊಂದಿರುವವನೇ ಹಿರಿಯ, ರಹಸ್ಯವನ್ನು ತಿಳಿಯುವವನೇ ಒಳ್ಳೆಯ ಮಿತ್ರ.

ಗುರುಗಳು, ಸನ್ಮಾರ್ಗಿಗಳು, ಹಿರಿಯರು, ಒಳ್ಳೆಯ ಮಿತ್ರರು ಸಮಾಜದಲ್ಲಿ ಹೇಗೆ ನಡೆದುಕೊಳ್ಳುವರೆಂಬುದನ್ನು ನಿರೂಪಿಸುವ ಪ್ರಯತ್ನ ಇಲ್ಲಿದೆ.

೪೨

ಕಾಲೋಚಿತವರಿದಿತ್ತೊಡೆ
ಮೂಲೋಕವದಿತ್ತ ಸರಿಸಮಾನಮದಕ್ಕುಂ
ಮೇಲೆಡೆಯಾಡಿಸಿ ಕೊಟ್ಟಡೆ
ಕೂಲಿಗೆ ಸರಿಯಾಗದಿಹುದೆ ಚೂಡಾರತ್ನಾ

ಕಾಲ+ಉಚಿತವ+ಅರಿದು+ಇತ್ತೊಡೆ=ಸಂದರ್ಭವನ್ನು ತಿಳಿದು ಅದಕ್ಕನುಗುಣವಾಗಿ ಕೊಟ್ಟರೆ; ಮೂಲೋಕವದು+ಇತ್ತ ಸರಿಸಮಾನಂ+ಅದು+ ಅಕ್ಕುಂ=ಅದು ಮೂರುಲೋಕ ವನ್ನಿತ್ತುದಕ್ಕೆ ಸರಿಸಮಾನವಾಗಿರುತ್ತದೆ; ಮೇಲೆ+ಎಡೆ+ ಆಡಿಸಿಕೊಟ್ಟರೆ=ಸ್ವಲ್ಪ ಸಮಯವಾದ ಮೇಲೆ ಕೊಟ್ಟರೆ; ಕೂಲಿಗೆ ಸರಿಯಾಗದೆ+ ಇಹುದೆ=ಕೂಲಿ ಕೊಟ್ಟುದಕ್ಕೆ ಸಮವಾಗುವು ದಿಲ್ಲವೇ?

ಸಮಯ ಸಂದರ್ಭವನ್ನು ತಿಳಿದು ಅದಕ್ಕನುಗುಣವಾಗಿ ಸಹಾಯ ನೀಡಿದರೆ ಅದು ಮೂರುಲೋಕವನ್ನೇ ಕೊಟ್ಟುದಕ್ಕೆ ಸಮ. ಅಗತ್ಯ ಮುಗಿದ ಮೇಲೆ ಕೊಟ್ಟರೆ ಅದು ಕೂಲಿ ಕೊಟ್ಟುದಕ್ಕೆ ಸಮವಾಗುವುದಿಲ್ಲವೇ.

ಯಾರಿಗೆ ಆದರೂ ಸಮಯೋಚಿತವಾಗಿ ಸಹಾಯಹಸ್ತ ಚಾಚಿದಾಗ ಉಂಟಾಗುವ ಆನಂದಕ್ಕೆ ಪಾರವೇ ಇರುವುದಿಲ್ಲ. ಹಾಗೆ ಸಹಾಯ ಮಾಡಿದಾಗಲೇ ಅದು ಅಮೂಲ್ಯವಾಗಿರುತ್ತದೆ. ಹಾಗಲ್ಲದೆ ಮೀನಮೇಷ ಎಣಿಸುತ್ತ, ಕೊಡುವ ಮನಸ್ಸಿಲ್ಲದೆ ಯಾವಾಗಲೋ ಕೊಟ್ಟರೆ ಅದು ಕೂಲಿ ಕೊಟ್ಟಂತೆ ಇರುತ್ತದೆ. ಮಾನವನಿಗೆ ಸಮಯೋಚಿತಪ್ರಜ್ಞೆ ಎಂಬುದು ಅವಶ್ಯವಾಗಿ ಇರಬೇಕು. ಆಗಲೇ ಬದುಕು ಸಾರ್ಥಕವಾಗುತ್ತದೆ.

೪೩

ಕಿಚ್ಚಿಂದಂ ಚುಚ್ಚಿದ ಪುಣ್
ಮುಚ್ಚುಗು ಕೆಲವಾನುಂ ದಿನಕೆ ನಾಲಗೆಯಿಂದಂ
ಚುಚ್ಚಿದ ಪುಣ್ ಜನ್ಮಾಂತರ
ಮುಚ್ಚುವುದೇ ಮನದೊಳಿರದೆ ಚೂಡಾರತ್ನಾ

ಕಿಚ್ಚಿಂದಂ=ಬೆಂಕಿಯಿಂದ; ಚುಚ್ಚಿದ; ಪುಣ್=ಹುಣ್ಣು; ಮುಚ್ಚುಗುಂ= ಮುಚ್ಚಿಹೋಗುವುದು; ಕೆಲವಾನುಂ ದಿನಕೆ=ಕೆಲವು ದಿನಕೆ; ನಾಲಗೆಯಿಂದಂ= ನಾಲಗೆಯಿಂದ; ಚುಚ್ಚಿದ; ಪುಣ್=ಹುಣ್ಣು; ಜನ್ಮಾಂತರ=ಜನ್ಮಜನ್ಮದಲ್ಲೂ; ಮನ ದೊಳ್+ಇರದೆ= ಮನಸ್ಸಿನಲ್ಲಿ ಇರದೆ; ಮುಚ್ಚುವುದೇ=ಮುಚ್ಚಿಕೊಳ್ಳಲು ಸಾಧ್ಯವೇ?

ಬೆಂಕಿಯಿಂದ ಚುಚ್ಚಿದ ಹುಣ್ಣು ಕೆಲವು ದಿನಕ್ಕೆ ಮಾಯ್ದು ಮುಚ್ಚಿ ಹೋಗುತ್ತದೆ; ನಾಲಗೆಯಿಂದ ಚುಚ್ಚಿದ ಹುಣ್ಣು ಜನ್ಮಾಂತರದಲ್ಲೂ ಮುಚ್ಚಿ ಕೊಳ್ಳುವುದು ಸಾಧ್ಯವಿಲ್ಲ.

ಚರ್ಮದ ಮೇಲಾದ ಹುಣ್ಣನ್ನು ಚೆನ್ನಾಗಿ ಕಾಸಿದ ಸೂಜಿಯಿಂದ ಚುಚ್ಚಿದರೆ ಸ್ವಲ್ಪ ದಿನದಲ್ಲಿ ವಾಸಿಯಾಗುವುದು. ಆದರೆ ಮಾತಿನಿಂದ ಚುಚ್ಚಿದ ನೋವನ್ನು ಎಷ್ಟೇ ವರ್ಷಗಳಾದರೂ ಮರೆಯಲಾಗದು ಎಂಬ ಸತ್ಯವನ್ನು ಇಲ್ಲಿ ಹೇಳಲಾಗಿದೆ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬ ಗಾದೆ ಮಾತಿಗೆ ಪೂರಕವಾದ ವಿಚಾರವನ್ನೇ ಕವಿ ಹೇಳಿದ್ದಾನೆ.

ಳಳ

ಕಿಱಿದಾದ ವಿದ್ಯೆಯಾಗಲಿ
ಮೆಱೆವುದು ತನ್ನಲ್ಲಿ ಗುಣಗಳುಳ್ಳೊಡೆ ಮತ್ತಾ
ಒಳಿತೆಯೆ ನೀರಾದೊಡೆ ತಾಂ
ಬನಂ ಪಿಂಗಿಸದೆ ನೋಡು ಚೂಡಾರತ್ನಾ

ಕಿರಿದಾದ=ಸಣ್ಣದಾದ; ವಿದ್ಯೆಯಾಗಲಿ; ಮೆಱೆವುದು ತನ್ನಲ್ಲಿ; ಗುಣಗಳು+ ಉಳ್ಳೊಡೆ=ಗುಣಗಳಿದ್ದರೆ; ಮತ್ತು+ಆ=ಮತ್ತು ಆ; ಒಳಿತೆಯೆ=ಒಳ್ಳೆಯದೇ; ನೀರು+ ಆದೊಡೆ; ತಾಂ=ತಾನು; ಬಲಂ=ಬಲವನ್ನು, ಪಿಂಗಿಸದೆ=ಹಿಂಗಿಸುವುದಿಲ್ಲವೆನೋ; ನೋಡು

ಚಿಕ್ಕಪುಟ್ಟ=ನೀರಾದರೆ; ವಿದ್ಯೆಗಳಾದರೂ ಅದರಲ್ಲಿ ಒಳ್ಳೆಯ ಗುಣಗಳಿದ್ದರೆ ಅವು ಮೆರೆಯುವುವು. ಸಣ್ಣ ಒರತೆಯ ರೂಪದಲ್ಲಿ ಹರಿವ ನೀರು ವನವನ್ನು ಒಣಗಿಸುವುದೇ ನೋಡು.

ಒಳ್ಳೆಯ ಗುಣಗಳಿದ್ದರೆ ಸಣ್ಣದಾದ ವಿದ್ಯೆಯೂ ವಿಜೃಂಭಿಸಲು ಸಾಧ್ಯ. ಆ ಒಳ್ಳೆಯ ಗುಣವೇ ದುರ್ಬಲವಾದರೆ ಬಲವನ್ನು ಕುಗ್ಗಿಸುವುದಿಲ್ಲವೇ? 'ಗುಣಕೆ ಮತ್ಸರವೇ' ಎಂಬ ಮಾತಿನಂತೆ ಯಾರಲ್ಲಿ ಒಳ್ಳೆಯ ಗುಣಗಳಿರುತ್ತವೆಯೊ ಅವರು ಜಯ ಗಳಿಸುತ್ತಾರೆ.

೪೫

ಕುಲವಾವುದು ಸುಚರಿತಂ
ಚೆಲುವಾವುದು ಸಕಲ ಕಲೆಯನರಿವುದು ಯೋಗದ
ನೆಲೆ ಯಾವುದು ಕ್ಷಮೆ ಜೀವಕೆ
ಫಲಮಾವುದು ಪರಹಿತಾರ್ಥ ಚೂಡಾರತ್ನಾ

ಕುಲವಾವುದು ಸುಚರಿತಂ=ಸಚ್ಚಾರಿತ್ರ್ಯವೇ ಕುಲ, ಕುಲ ಯಾವುದು; ಚೆಲುವಾವುದು ಸಕಲಕಲೆಯನರಿವುದು= ಸಕಲಕಲೆಯನ್ನರಿಯುವುದೇ ಚೆಲುವು; ಯೋಗದ ನೆಲೆ ಯಾವುದು ಕ್ಷಮೆ; ಜೀವಕೆ ಫಲವಾವುದು; ಪರಹಿತಾರ್ಥ=ಜೀವಕ್ಕೆ ಫಲ ಯಾವುದೆಂದರೆ ಪರಹಿತಾರ್ಥ.

ಸಚ್ಚಾರಿತ್ರ್ಯವುಳ್ಳವನಿಗೆ ಕುಲ ಯಾವುದಾದರೇನು? ಸಕಲಕಲೆಯನರಿಯುವುದೇ ಚೆಲುವು. ಕ್ಷಮೆಯೇ ಯೋಗದ ನೆಲೆ. ಪರಹಿತಾರ್ಥವೇ ಜೀವನಕ್ಕೆ ಫಲ.

ಒಳ್ಳೆಯ ಗುಣ ಸ್ವಭಾವವುಳ್ಳ ವ್ಯಕ್ತಿಗೆ ಅಥವಾ ಸಚ್ಚಾರಿತ್ರ್ಯವುಳ್ಳವರಿಗೆ ಅವರ ಕುಲವನ್ನು ಯಾರೂ ಪರಿಗಣಿಸುವುದಿಲ್ಲ. ಅಂಥವರನ್ನು ಎಲ್ಲರೂ ಸತ್ಕರಿಸುವರು. ಸಕಲಕಲೆಗಳನ್ನು ಅರಿಯುವುದೇ ಚೆಲುವು ಅಥವಾ ಸೌಂದರ್ಯ. ಚೆಲುವು ಎಂಬುದು ಹೊರನೋಟಕ್ಕೆ ಗೋಚರಿಸುವಂಥದ್ದಲ್ಲ. ಕಲೆಯನ್ನೆಲ್ಲ ಚೆನ್ನಾಗಿ ಅರಿತಿದ್ದರೆ ಅದೇ ಆತನಿಗೆ ಸೊಬಗು. ಜೀವಕ್ಕೆ ಅಥವಾ ಜೀವನಕ್ಕೆ ಫಲ ಯಾವುದೆಂದರೆ ಪರಹಿತಾರ್ಥ. ಪರರಿಗೆ ಹಿತವನ್ನು ಉಂಟುಮಾಡಿದವರ ಜೀವನ ಸಾರ್ಥಕ.

೪೬

ಕೊಟ್ಟರಿಯನಿದಿರ್ಗೆ ತಾನುಂ
ಡುಟ್ಟಲೀಯಂ ಧರ್ಮವರಿಯನವನೀ ಬುವಿಯೊಳ್

ಪುಟ್ಟಿದೊಡೇಂ ಸತ್ತೊಡದೇಂ
ಪುಟ್ಟದೆ ತಾಂ ಮಾಡ್ದೊಡೇನು ಚೂಡಾರತ್ನಾ

ಕೊಟ್ಟರಿಯನ್+ಇದಿರ್ಗೆತಾನು+ಉಂಡು+ಉಟ್ಟಲು+ಈಯನ್ =ಎದುರಿಗಿದ್ದ ವರಿಗೆ ಕೊಟ್ಟರಿಯನು, ತಾನು ಉಂಡು ಉಡುವುದಿಲ್ಲ ಕೊಡುವುದೂ ಇಲ್ಲ; ಧರ್ಮವ+ಅರಿಯನ್+ಅವನು ಈ ಬುವಿಯೊಳ್=ಧರ್ಮವನ್ನು ತಿಳಿಯನು ಅವನು ಈ ಭೂಮಿಯಲ್ಲಿ; ಪುಟ್ಟಿದೊಡೆ+ಏಂ=ಹುಟ್ಟಿದರೇನು; ಪುಟ್ಟದೆ ತಾಂ=ಹುಟ್ಟುವು ದಿಲ್ಲವೇ ತಾನು, ಮಾಡ್ದೊಡೆ+ಏನು=ಮಾಡದಿದ್ದರೆ ಏನು.

ತನ್ನ ಎದುರಿದ್ದವರಿಗೆ ಕೊಡಬೇಕೆಂದು ತಿಳಿಯದು, ತಾನೂ ಉಂಡು, ಉಡದೆ, ಬೇರೆಯವರಿಗೂ ಕೊಡದೆ ಧರ್ಮವನ್ನು ತಿಳಿಯದವನು ಈ ಭೂಮಿಯಲ್ಲಿ ಇದ್ದೂ ವ್ಯರ್ಥ. ಏನೂ ಮಾಡದಿದ್ದವನು ಹುಟ್ಟಿದರೇನು? ಹುಟ್ಟದಿದ್ದರೇನು?

ಭೂಮಿಯಲ್ಲಿ ಹುಟ್ಟಿದಾತನ ಬದುಕು ಸಾರ್ಥಕವಾಗಬೇಕಾದರೆ ತನ್ನಲ್ಲಿರು ವುದನ್ನು ತಾನೂ ಅನುಭವಿಸಿ, ಇತರರಿಗೂ ನೀಡಬೇಕು. ಹಾಗಲ್ಲದೆ ಲೋಭಿಯಂತೆ ಬದುಕುವುದು ವ್ಯರ್ಥ ಎಂದು ಹೇಳಲಾಗಿದೆ.

೪೭

ಕೊಲಲಾಗದು ಧರ್ಮಿಗಳಂ
ಗೆಲಲಾಗದು ನಂಬಿದವರ ಸತ್ಯಕೆ ಮಿಥ್ಯಾ
ಛಲ ಬೇಡ ಹಿರಿಯರೆಡೆಯೊಳು
ಬಲುಹಾಗದು ಬಂಧುಗಳೊಳು ಚೂಡಾರತ್ನಾ

ಕೊಲಲಾಗದು ಧರ್ಮಿಗಳಂ=ಧರ್ಮಿಷ್ಠರಾದವರನ್ನು ಕೊಲ್ಲಬಾರದು; ಗೆಲಲಾಗದು ನಂಬಿದವರ=ನಂಬಿದವರನ್ನು ಗೆಲಲಾಗದು; ಸತ್ಯಕೆ ಮಿಥ್ಯಂ=ಸತ್ಯಕ್ಕೆ ಸುಳ್ಳನ್ನು; ಛಲ ಬೇಡ ಹಿರಿಯರ+ಎಡೆಯೊಳು=ಹಿರಿಯರಿರುವಲ್ಲಿ ಛಲ ಬೇಡ; ಬಲುಹು ಆಗದು ಬಂಧುಗಳೊಳು=ಬಂಧುಗಳಿರುವಲ್ಲಿ ಸಾಮರ್ಥ್ಯ ತೋರುವುದು ಬೇಡ.

ಧರ್ಮಿಷ್ಠರಾದವರನ್ನು ಕೊಲ್ಲಲಾಗದು. ನಂಬಿದವರನ್ನು ಗೆಲ್ಲಲಾಗದು. ಸತ್ಯದ ಮುಂದೆ ಸುಳ್ಳು ಹೇಳಬಾರದು, ಹಿರಿಯರಿರುವಲ್ಲಿ ಛಲ ಬೇಡ, ಬಂಧುಗಳಿಗೆ ನಿನ್ನ ಸಾಮರ್ಥ್ಯ ತೋರಿಸುವುದು ಬೇಡ.

ಕವಿ ಇಲ್ಲಿ ಧನಾತ್ಮಕ ಅಂಶಗಳನ್ನು ಹೇಳುತ್ತಿದ್ದಾನೆ. ಧರ್ಮಾತ್ಮರಾದವರು ಋಜುಮಾರ್ಗದಲ್ಲಿ ಬದುಕುತ್ತಿರುತ್ತಾರೆ. ಅಂಥವರನ್ನು ಕೊಲ್ಲಲಾಗದು, ಅತಿಯಾದ ನಂಬಿಕೆ, ವಿಶ್ವಾಸವಿಟ್ಟಿರುವವರನ್ನು ಗೆಲ್ಲಲಾಗದು, ಸತ್ಯವಿರುವಾಗ ಸುಳ್ಳು ಹೇಳಬಾರದು, ಹಿರಿಯರ ಎದುರಿನಲ್ಲಿ ಛಲವನ್ನು ಇಟ್ಟುಕೊಳ್ಳದೆ ಅವರ ಅನುಭವದ ಮಾರ್ಗದರ್ಶನದಲ್ಲಿ ನಡೆಯಬೇಕು. ಬಂಧುಗಳಿರುವ ಕಡೆ ಸಾಮರ್ಥ್ಯ ತೋರಿಸ ಬಾರದು.

೪೮

ಕೊಲ್ವುದು ಧರ್ಮವೆ ಪರವಧು
ಗೊಲ್ವುದದೇ ಸೊಬಗೆ ಪಾಪಹೇತುಂಗಳೊಂದಂ
ಕಳ್ವುದು ನೀತಿಯನುಜರ
ಗೆಲ್ವುದದೇಂ ಚದುರೆ ಕೇಳು ಚೂಡಾರತ್ನಾ

ಕೊಲ್ವುದು=ಕೊಲ್ಲುವುದು; ಧರ್ಮವೆ; ಪರವಧುಗೆ+ಒಲ್ವುದು+ ಅದೇಂ= ಪರಸ್ತ್ರೀಗೆ ಒಲಿಯುವುದು ಅದೇನು; ಸೊಬಗೆ=ಒಳ್ಳೆಯದೇ; ಪಾಪ ಹೇತುಂಗಳು= ಪಾಪಕ್ಕೆ ಕಾರಣಗಳು; ಒಂದನ್ನು ಕಳ್ವುದು=ಕಳ್ಳತನ ಮಾಡುವುದು; ನೀತಿಯೆ+ ಅನುಜರ=ನೀತಿಯೆ ಅನುಜರ(ಒಡಹುಟ್ಟಿದವರ); ಗೆಲ್ವುದು+ಅದು+ಏಂ= ಗೆಲ್ಲುವುದು ಅದೇನು; ಚದುರೆ=ಚಾತುರ್ಯವೇ ಕೇಳು.

ಕೊಲ್ಲುವುದು ಧರ್ಮವೇ? ಪರವಧುವಿಗೆ ಒಲಿಯುವುದು ಅದೇನು ಸರಿಯೇ? ಪಾಪಕ್ಕೆ ಕಾರಣಗಳು, ಒಂದನ್ನು ಕಳ್ಳತನ ಮಾಡುವುದು ನೀತಿಯೇ? ಸೋದರರನ್ನು ಗೆಲ್ಲುವುದು ಚಾತುರ್ಯವೇ ಕೇಳು.

ಪಾಪಕ್ಕೆ ಹಲವಾರು ಕಾರಣಗಳಿವೆ ಎಂಬುದನ್ನು ಕವಿ ಹಲವು ನಿದರ್ಶನಗಳ ಮೂಲಕ ನಿರೂಪಿಸಿದ್ದಾನೆ. ಕೊಲ್ಲುವುದು, ಪರವಧುವಿಗೆ ಪರಿತಪಿಸಿ ಒಲಿಯುವುದು, ಕಳ್ಳತನ ಮಾಡುವುದು, ಸಹೋದರರನ್ನು ಗೆಲ್ಲುವುದು- ಇವು ಪಾಪಹೇತುಗಳು. ಇವನ್ನೆಲ್ಲ ಬಿಟ್ಟು ಸನ್ನಡತೆಯಲ್ಲಿ ಬಾಳುವುದು ಉತ್ತಮ ಎಂದು ಹೇಳಲಾಗಿದೆ. ಇಲ್ಲಿ ಅನುಜರ ಗೆಲ್ಲುವುದು ಎಂದಾಗ ಭರತ-ಬಾಹುಬಲಿಯ ಪ್ರಸಂಗವೂ ಪರಸ್ತ್ರೀಗೆ ಒಲಿಯುವುದು ಎಂದಾಗ ರಾವಣನ ವಿಷಯವೂ ನೆನಪಿಗೆ ಬರುತ್ತದೆ.

ವಚನಗಳಲ್ಲಿ ಈ ವಿಷಯಗಳು ಪ್ರಸ್ತಾವಗೊಂಡಿವೆ. 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ' ಮೊದಲಾದ ವಚನಗಳನ್ನು ಇಲ್ಲಿ ನೆನೆಯಬಹುದು.

೪೯

ಕೋಪದೊಳೊದಗು ಮನಸಂ
ತಾಪಂ ಸತಿಸುತರಗಲ್ಕೆ ಜನನಂ ಮರಣಂ
ಕೂಪರ ಕೆಳೆ ತಪದಾನಂ
ಪೋಪವು ಬಱಿವಾತಿನಿಂದೆ ಚೂಡಾರತ್ನಾ

ಕೋಪದೊಳೊದಗಿದ ಮನಸುಂ ತಾಪಂ=ಕೋಪವಿದ್ದಾಗಿನ ಮನಸ್ಥಿತಿ, ತಾಪ; ಸತಿಸುತರ+ಅಗಲ್ಕೆ=ಹೆಂಡತಿ ಮಕ್ಕಳ ಅಗಲುವಿಕೆ; ಜನನಂ ಮರಣಂ=ಜನನ ಮರಣ; ಕೂಪರ ಕೆಳೆ=ದಡ್ಡರ ಗೆಳೆತನ; ತಪದಾನಂ=ತಪಸ್ಸಿನಿಂದ ದೊರೆತ ಪುಣ್ಯದ ದಾನ; ಬಱಿವಾತಿನಿಂ=ಬರಿಮಾತಿನಿಂದ; ಪೋಪವು=ಹೋಗುವುದಿಲ್ಲ.

ಕೋಪವಿದ್ದಾಗಿನಮನಸ್ಥಿತಿ, ತಾಪ, ಸತಿಸುತರ ಅಗಲಿಕೆ, ಜನನಮರಣ, ದಡ್ಡರ ಗೆಳೆತನ, ತಪಸ್ಸಿನ ಫಲದಿಂದ ಬಂದ ಪುಣ್ಯವನ್ನು ದಾನ ಮಾಡುವುದು- ಇವೆಲ್ಲ ತುಂಬ ಕಷ್ಟಕರವಾದ ವಿಷಯಗಳು. ಇವುಗಳನ್ನು ಬರಿಮಾತುಗಳಿಂದ ಹೇಳಲು ಸಾಧ್ಯವಿಲ್ಲ. ಆ ಅನುಭವ, ಆ ಸಂದರ್ಭವನ್ನು ಅವರವರೇ ಸರಿದೂಗಿಸಿಕೊಳ್ಳಬೇಕೇ ಹೊರತು ಬೇರೆಯವರು ಹೇಳುವ ಸಾಂತ್ವನದ ನುಡಿಗಳಿಂದ ಹೋಗಲಾಡಿಸಲು ಸಾಧ್ಯವಿಲ್ಲ.

೫೦

ಗೀತದ ಗೋಷ್ಠಿಯ ಮೇಳದ
ಮಾತಿನ ಸಂಭ್ರಮದ ಬಿನದದೋಲಗವಬಲಾ
ವ್ರಾತದೊಳು ಸಂದಡಾತಂ
ಆತನೆ ಬದಿ ವಿಷ್ಣು ಜಿಷ್ಣು ಚೂಡಾರತ್ನಾ

ಗೀತದ ಗೋಷ್ಠಿಯ=ಸಂಗೀತ ಗೋಷ್ಠಿಯ; ಮೇಳದ ಮಾತಿನ ಸಂಭ್ರಮದ; ಬಿನದದ+ಓಲಗ=ವಿನೋದದ ಸಭೆಯ; ಅಬಲಾ= ಅಬಲೆಯರ; ವ್ರಾತದೊಳು= ಸಮೂಹದಲ್ಲಿ; ಸಂದಡೆ+ಆತಂ=ಸೇರಿದರೆ ಆತ; ಆತನೆ; ಬದಿ=ಕೀಳು ಮನುಷ್ಯ; ವಿಷ್ಣು ಜಿಷ್ಣು.

ಸಂಗೀತಗೋಷ್ಠಿಯ, ನೃತ್ಯ ಮೇಳದ, ಮಾತಿನ ಸಂಭ್ರಮದ, ವಿನೋದದ ಸಭೆಯ, ಅಬಲೆಯರ ಸಮೂಹ- ಇತ್ಯಾದಿಗಳಲ್ಲಿ ಸೇರಿದಾತ ಕೀಳು ಮನುಷ್ಯ ನಾಗುತ್ತಾನೆ. ಆತ ವಿಷ್ಣುವಾಗಲಿ ಜಿಷ್ಣುವಾಗಲಿ ಕೀಳುಮಟ್ಟಕ್ಕಿಳಿಯುವುದು ಶತಸ್ಸಿದ್ಧ.

ಹಿಂದೆ ಸಂಗೀತ, ನೃತ್ಯ, ವಿನೋದಗೋಷ್ಠಿಗಳನ್ನು ವೇಶ್ಯೆಯರು ನಡೆಸುತ್ತಿದ್ದರೆಂದು ತಿಳಿದುಬರುತ್ತದೆ. ಹಾಗಾಗಿ ಈ ವಿದ್ಯೆಗಳನ್ನು ಹೆಣ್ಣು ಮಕ್ಕಳಿಗೆ ಕಲಿಸಲು ಸಮಾಜ ಇಚ್ಛಿಸುತ್ತಿರಲಿಲ್ಲ. ಪ್ರಸ್ತುತದಲ್ಲಿ ಈ ಅಭಿಪ್ರಾಯ ಬದಲಾಗಿದೆ. ಯಾರಿಗೆ ಯಾವುದು ಇಷ್ಟವೊ ಅದನ್ನು ಕಲಿಯುವ ಅವಕಾಶಗಳು ಸೃಷ್ಟಿಯಾಗಿವೆ. ಅಬಲೆಯರ ಎಂದರೆ ಹೆಣ್ಣುಮಕ್ಕಳ ಸಂಗಡವಿದ್ದಂಥ ಗಂಡುಮಕ್ಕಳು ಹಾಳಾ ಗುತ್ತಾರೆಂಬ ನಂಬಿಕೆಯೂ ಇದೆ. ಆತ ವಿಷ್ಣುವಾಗಲಿ, ಎಲ್ಲವನ್ನೂ ಜಯಿಸಿದ ಜಿಷ್ಣುವಾಗಲಿ ಹಾಳಾಗುತ್ತಾನೆಂಬ ವಿಚಾರ ಇಲ್ಲಿದೆ. ವಿವೇಚನಾಯುಕ್ತ ನಡೆವಳಿಕೆ ಯಿದ್ದರೆ ಇಂಥ ಯಾವುದೇ ಆಚಾತುರ್ಯ ಸಂಭವಿಸುವುದಿಲ್ಲ ಎಂದು ಹೇಳಬಹುದು.

೫೧

ಗುಣಿಯ ಗುಣಾವಳಿಯಂ ಸ
ದ್ಗುಣಿಗಳು ನೆಱೆ ಬಲ್ಲರಲ್ಲದವಗುಣಿಯಱಿಯಂ

ಗುಣಮುಳ್ಳ ಪುಷ್ಪವನವಂ
ನೊಣ ಬಲ್ಲುದೆಯಳಿಯ ತೆಱದಿ ಚೂಡಾರತ್ನಾ

ಗುಣಿಯ ಗುಣಾವಳಿಯಂ=ಗುಣವಂತನಾದವನ ಗುಣಗಳನ್ನು; ಸದ್ಗುಣಿಗಳು; ನೆಱೆ=ಚೆನ್ನಾಗಿ; ಬಲ್ಲರಲ್ಲದೆ; ಅವಗುಣಿ+ ಅಱಿಯಂ=ಅವಗುಣಿ ಯಾದವನು ತಿಳಿಯುವುದಿಲ್ಲ; ಗುಣವುಳ್ಳ ಪುಷ್ಪವನವಂ=ಒಳ್ಳೆಯ ಪುಷ್ಪವಿರುವ ವನವನ್ನು; ನೊಣ ಬಲ್ಲುದೆಯ್+ಅಳಿಯ ತೆಱದಿ=ನೊಣಕ್ಕೆ ತಿಳಿಯುವುದೆ ದುಂಬಿಯ ಹಾಗೆ.

ಗುಣವಂತನಾದವನ ಗುಣಗಳನ್ನು ಸದ್ಗುಣಿಗಳಾದವರು ಚೆನ್ನಾಗಿ ಬಲ್ಲರಲ್ಲದೆ ಅವಗುಣಿ ತಿಳಿಯುವುದಿಲ್ಲ. ಒಳ್ಳೆಯ ಪುಷ್ಪೋದ್ಯಾನವನ್ನು ದುಂಬಿ ತಿಳಿದಂತೆ ನೊಣ ತಿಳಿಯಲು ಸಾಧ್ಯವೇ?

'ಬಲ್ಲವರೆ ಬಲ್ಲರು ಬೆಲ್ಲದ ಸವಿಯ' ಎಂಬ ನಾಣ್ಣುಡಿಯಂತೆ ಸಮಾನ ಮನಸ್ಕರ ಗುಣಸ್ವಭಾವಗಳು ಅದೇ ಬಗೆಯ ಗುಣಗಳಿರುವವರಿಗೆ ಚೆನ್ನಾಗಿ ತಿಳಿಯುತ್ತವೆ. ಹಾಗಿದ್ದಾಗ ಅವರ ಸ್ನೇಹ ಸಂಬಂಧಗಳು ಗಟ್ಟಿಯಾಗಿ ಉಳಿಯುತ್ತವೆ. ಹೀನಗುಣವುಳ್ಳವರಿಗೆ ಒಳ್ಳೆಯವರ ಗುಣ ನಡೆವಳಿಕೆಗಳು ಹಿಡಿಸುವುದಿಲ್ಲ. ಸದ್ಗುಣಿಗಳಾದವರನ್ನು ಒಂದಲ್ಲ ಒಂದು ಬಗೆಯಲ್ಲಿ ಹೀಗಳೆಯುತ್ತಾರೆ. ಇದನ್ನು ಉಪಮೆಯೊಂದರ ಮೂಲಕ ಸಮರ್ಥಿಸಲಾಗಿದೆ. ಯಾವ ಉದ್ಯಾನದಲ್ಲಿ ಎಂಥ ಹೂಗಳಿವೆ, ಅವುಗಳ ಮಕರಂದದ ಸವಿ ಹೇಗಿರುತ್ತದೆಂಬುದರ ಅರಿವು ದುಂಬಿಗೆ ಚೆನ್ನಾಗಿ ತಿಳಿದಿರುತ್ತದೆ. ಆದರೆ ನೊಣಕ್ಕೆ ಆ ಬಗೆಯ ಪರಿಜ್ಞಾನವಿರುವುದಿಲ್ಲ.

೫೨

**ಗೆಲ್ಲದ ಬವರಮುಮಂ ತನ**
**ಗಲ್ಲದ ನಂಟರುಮನಿಚ್ಛೆಯರಿಯದ ಸತಿಯಂ**
**ಹೊಲ್ಲೆಹವ ನುಡಿವ ಮನುಜರ**
**ಮೆಲ್ಲನೆ ಬಿಡುವುದು ವಿವೇಕ ಚೂಡಾರತ್ನಾ**

ಗೆಲ್ಲದ ಬವರಮುಮಂ=ಗೆಲ್ಲಲಾಗದ ಯುದ್ಧವನ್ನು; ತನಗಲ್ಲದ ನಂಟರು ಮನ್+ಇಚ್ಛೆಯರಿಯದ ಸತಿಯಂ=ತನಗಲ್ಲದ ನಂಟರನ್ನು, ಇಚ್ಛೆಯರಿತು ನಡೆಯದ

ಸತಿಯನ್ನು; ಹೊಲ್ಲೆಹವ ನುಡಿವ ಮನುಜರಂ=ಕೆಟ್ಟದ್ದನ್ನು ಹೇಳುವ ಮನುಷ್ಯರನ್ನು; ಮೆಲ್ಲನೆ ಬಿಡುವುದು ವಿವೇಕ=ಬುದ್ಧಿವಂತಿಕೆ.

ಗೆಲ್ಲಲಾಗದ ಯುದ್ಧವನ್ನು, ತನಗಾಗದ ನಂಟರನ್ನು, ಇಚ್ಛೆಯರಿತು ನಡೆಯದ ಸತಿಯನ್ನು; ಕೆಟ್ಟದನ್ನು ಹೇಳುವವರನ್ನು ಮೆಲ್ಲನೆ ಬಿಡುವುದು ಬುದ್ಧಿವಂತಿಕೆಯ ಲಕ್ಷಣ.

ತನ್ನೆದುರಿರುವವರು ಬಲಿಷ್ಠರು, ಅವರನ್ನೂ ಗೆಲ್ಲಲಾಗದೆಂದು ತಿಳಿದ ಮೇಲೆ ಅವರಿಂದ ದೂರವುಳಿಯುವುದು ಉತ್ತಮ. ಜೀವನದ ಸುಖದುಃಖಗಳಿಗೆ ಸ್ಪಂದಿಸ ದಿರುವ ನಂಟರು ಇದ್ದರೆಷ್ಟು ಇಲ್ಲದಿದ್ದರೆಷ್ಟು? ಅಂಥ ನಂಟರನ್ನು ಸೇರಬಾರದು. ಗಂಡನ ಇಚ್ಛೆಯರಿತು ನಡೆಯದ ಸತಿಯನ್ನು ಬಿಡಬೇಕು, ಸದಾ ಕೆಡುಕನ್ನೇ ಬಯಸಿ ಕೆಟ್ಟದ್ದನ್ನೇ ನುಡಿಯುವವರನ್ನು ಮೆಲ್ಲನೆ ಬಿಡುವುದು ವಿವೇಕ ಎನ್ನಲಾಗಿದೆ.

ಗಂಡನ ಇಚ್ಛೆಯರಿತು ನಡೆಯದ ಸತಿ ಎಂದು ಹೇಳಿರುವ ಮಾತು ಪ್ರಸ್ತುತದಲ್ಲಿ ಸ್ವಲ್ಪ ಭಿನ್ನವಾಗುತ್ತದೆ. ಹೆಂಡತಿಗೆ ಇಚ್ಛೆಯಿರುವುದಿಲ್ಲವೇ? ಆಕೆಯ ಇಚ್ಛೆಯರಿತು ಪತಿ ನಡೆಯಬಾರದೆ ಎಂಬೆಲ್ಲ ಪ್ರಶ್ನೆಗಳು ಇವೆ.

ಕವಿ ಬಾಳಿ ಬದುಕಿದ ಕಾಲವನ್ನು ಪರಿಗಣಿಸಿದಾಗ ಇಲ್ಲಿ ಹೇಳಿರುವ ಮಾತುಗಳು ಸರಿಯೆನಿಸುತ್ತವೆ. ಪಿತೃಪ್ರಧಾನ ಸಮಾಜದಲ್ಲಿ ಹೀಗಲ್ಲದೆ ಬೇರೆ ಹೇಳಲು ಸಾಧ್ಯವೇ?

೫೩

ಚಂದನ ಹಿಮ ಪನ್ನೀರಿಂ
ಚಂದಿರ ಕಿರಣಂ ವಿಶೇಷ ಶೈತ್ಯಂ ಮತ್ತಾ
ಚಂದನ ಹಿಮ ಪನ್ನೀರ್ ಶಶಿ
ಯಿಂದಂ ಮೃದುವಚನ ಶೈತ್ಯ ಚೂಡಾರತ್ನಾ

ಚಂದನ=ಶ್ರೀಗಂಧ; ಹಿಮ; ಪನ್ನೀರಿಂ=ಪನ್ನೀರಿಗಿಂತ; ಚಂದಿರ ಕಿರಣಂ= ಚಂದ್ರಕಿರಣ; ವಿಶೇಷ ಶೈತ್ಯಂ=ವಿಶೇಷವಾಗಿ ತಂಪಾಗಿರುತ್ತದೆ; ಮತ್ತೆ+ಆ=ಮತ್ತೆ ಆ; ಚಂದನ, ಹಿಮ, ಪನ್ನೀರ್, ಶಶಿಗಿಂತ=ಚಂದ್ರನಿಗಿಂತ; ಮೃದುವಚನ; ಶೈತ್ಯ=ತಂಪು.

ಚಂದನ, ಹಿಮ, ಪನ್ನೀರಿಗಿಂತ ಚಂದ್ರಕಿರಣ ವಿಶೇಷವಾಗಿ ತಂಪಾಗಿರುತ್ತದೆ. ಮತ್ತೆ ಆ ಶ್ರೀಗಂಧ, ಹಿಮ, ಪನ್ನೀರು, ಶಶಿಗಿಂತ ಮೃದುವಚನವೆಂಬುದು ಇನ್ನಷ್ಟು ತಂಪಾಗಿರುತ್ತದೆ.

ಮಾತಿನ ಮಹತ್ತ್ವವನ್ನು ಕುರಿತು ಹೇಳಲಾಗಿದೆ. ಮೃದುವಚನವೆಂಬುದು ಶ್ರೀಗಂಧ, ಹಿಮ, ಪನ್ನೀರು ಹಾಗೂ ಚಂದ್ರಕಿರಣ- ಇವುಗಳಿಗಿಂತ ಹೆಚ್ಚು ಹಿತವಾಗಿರುತ್ತದೆ ಎನ್ನಲಾಗಿದೆ.

೫೪

ಚಿಂತಿಪನೆ ನರಕಿ ಸಲೆ ನಿ
ಶ್ಚಿಂತನೆ ಸುಖಿ ಕೋಪಮುಳ್ಳಾತನೆ ಪಾಪಿಯು
ಸಂತೋಷಿಯೆ ಸಿರಿವಂತಂ
ಭ್ರಾಂತಳಿದನೆ ಪರಮಯೋಗಿ ಚೂಡಾರತ್ನಾ

ಚಿಂತಿಪನೆ=ಚಿಂತಿಸುವವನೆ; ನರಕಿ=ದುಃಖಿ; ಸಲೆ=ಚೆನ್ನಾಗಿ; ನಿಶ್ಚಿಂತನೆ ಸುಖಿ; ಕೋಪಂ+ಉಳ್ಳಾತನೆ ಪಾಪಿಯು; ಸಂತೋಷಿಯೆ ಸಿರಿವಂತಂ= ಸಂತೋಷದಿಂದ ಇರುವವನೆ ಶ್ರೀಮಂತ; ಭ್ರಾಂತಿ+ಅಳಿದನೆ=ಭ್ರಾಂತಿ ಬಿಡುವವನೆ; ಪರಮಯೋಗಿ.

ಚಿಂತಿಸುವವನೆ ದುಃಖಿ, ನಿಶ್ಚಿಂತೆಯಿಂದಿರುವವನೆ ಸುಖಿ, ಕೋಪಿಯಾದವನೇ ಪಾಪಿ, ಸಂತೋಷದಿಂದಿರುವವನೆ ಶ್ರೀಮಂತ, ಭ್ರಾಂತಿಯನ್ನು ಬಿಟ್ಟವನೆ ಪರಮಯೋಗಿ.

ಇಂದು ಇಂದಿಗೆ, ನಾಳೆ ನಾಳೆಗೆ ಎಂದು ವಿಚಾರಪರನಾದವನು ಅತ್ಯಂತ ಸುಖಿಯಾಗಿರುತ್ತಾನೆ. ಸದಾ ಚಿಂತೆಯಲ್ಲಿ ಮುಳುಗಿರುವವನೇ ದುಃಖಿ. ಸಂತೋಷದಿಂದ ಇರುವವನೇ ಶ್ರೀಮಂತ, ಭ್ರಾಂತಿಯನ್ನು ಬಿಟ್ಟವನೇ ಪರಮಯೋಗಿ ಎಂಬ ವಿಚಾರಪ್ರಚೋದಕವಾದ ಕವಿವಾಣಿ ಮಾನವನಿಗೆ ಸ್ಫೂರ್ತಿ ನೀಡುವಂಥದು.

೫೫

ಚೂಣಿಯೊಳೀಡಾಡಿದೊಡಂ
ಕೋಣೆಯೊಳಡಗಿರ್ದೊಡಂ ಲಲಾಟ ಲಿಖಿತಂ
ಮಾಣದಿದನರಿದು ಜಾಣಂ
ಪೂಣಿಸಿ ಕಾದುವುದು ರಣದಿ ಚೂಡಾರತ್ನಾ

ಚೂಣಿಯೊಳು+ಈಡಾಡಿದೊಡಂ= ರಣರಂಗದ ಮುಂಭಾಗದಲ್ಲಿ ಬಿದ್ದರೂ; ಕೋಣೆಯೊಳಗೆ+ಇರ್ದೊಡಂ= ಕೋಣೆಯೊಳಗೆ ಇದ್ದರೂ; ಲಲಾಟ ಲಿಖಿತಂ= ಹಣೆಯ ಬರೆಹ; ಮಾಣದು+ಇದನು+ಅರಿದು=ಬಿಡದು, ಇದನ್ನು ತಿಳಿದು; ಜಾಣಂ= ಜಾಣನು; ಪೂಣಿಸಿ=ಪ್ರತಿಜ್ಞೆ ಮಾಡಿ; ಕಾದುವುದು ರಣದಿ=ರಣರಂಗದಲ್ಲಿ ಹೋರಾ ಡುವುದು.

ಪ್ರಾಣಭಯದಿಂದ ರಣರಂಗದಲ್ಲಿ ಹೋರಾಡದೆ ಹಿಮ್ಮೆಟ್ಟುವುದು ಹೇಡಿಯ ಗುಣ. ಹಾಗಲ್ಲದೆ, ವೀರನಾದವನು ರಣರಂಗದಲ್ಲಿ ವೀರಾವೇಶದಿಂದ ಹೋರಾಡಲೇ ಬೇಕು ಎಂದು ಸೈನಿಕರಿಗೆ ಪ್ರೋತ್ಸಾಹದ ನುಡಿಗಳನ್ನು ಹೇಳಲಾಗಿದೆ.

ರಣರಂಗದ ಮುಂಚೂಣಿಯಲ್ಲಿ ಬಿದ್ದರೂ, ಕೋಣೆಯೊಳಗೆ ಇದ್ದರೂ, ಹಣೆಯ ಬರೆಹ ಬಿಡದು. ಇದನ್ನು ತಿಳಿದು ಜಾಣನಾದವನು ಪ್ರತಿಜ್ಞೆ ಮಾಡಿ ರಣರಂಗದಲ್ಲಿ ಹೋರಾಡುವುದು.

೫೬

ಜಾತಸ್ಯ ಮರಣ ತಪ್ಪದು
ಯೇತಕೆ ಚಿಂತಿಸುವೆ ಬರಿದೆ ಹಣೆಯಲಿ ಬರೆದಿರೆ
ಕಾತರಿಸಬೇಡ ಮಾನವ
ಭೀತಿಯ ಬಿಡು ಹರಣದೆಡೆಗೆ ಚೂಡಾರತ್ನಾ

ಜಾತಸ್ಯ=ಹುಟ್ಟಿದ ಮೇಲೆ, ಮರಣ ತಪ್ಪದು; ಏತಕೆ ಚಿಂತಿಸುವೆ ಬರಿದೆ=ಸುಮ್ಮನೆ ಏಕೆ ಚಿಂತಿಸುವೆ; ಹಣೆಯಲಿ ಬರೆದಿರೆ; ಕಾತರಿಸಬೇಡ ಮಾನವ=

ಹಂಬಲಿಸಬೇಡ ಮಾನವ; ಭೀತಿಯ ಬಿಡು ಹರಣದ+ಎಡೆಗೆ=ಪ್ರಾಣದ ಕಡೆಗೆ ಭಯವನು ಬಿಡು.

ಹುಟ್ಟಿದ ಮೇಲೆ ಮರಣ ತಪ್ಪದು, ಏತಕೆ ಚಿಂತಿಸುವೆ ಬರಿದೆ, ಹಣೆಯಲಿ ಬರೆದದ್ದನ್ನು ತಪ್ಪಿಸಲು ಆಗದು, ಹಂಬಲಿಸಬೇಡ ಮಾನವ, ಪ್ರಾಣದ ಮೇಲಿರುವ ಭೀತಿಯನ್ನು ಬಿಡು.

'ಜಾತಸ್ಯ ಮರಣಂ ಧ್ರುವಂ' ಎಂಬ ಸಂಸ್ಕೃತದ ಹೇಳಿಕೆಯನ್ನು ಆಧಾರ ವಾಗಿಟ್ಟುಕೊಂಡು ಕವಿ ಈ ಪದ್ಯವನ್ನು ಬರೆದಿದ್ದಾನೆ.

೫೭

ಜಾತಿಯನುಸುರ್ವನೆ ಕವಿ ರಸ
ರೀತಿಯಲ್ಲೋದುವನೆ ಗಮಕಿ ಪರರೆಂದುದನುಂ
ಘಾತಿಪನೆ ವಾದಿ ವಾಕ್ನೆರೆ
ವಾತಂ ವಾಗ್ಮಿಕನು ಧರೆಗೆ ಚೂಡಾರತ್ನಾ

ಧರೆಗೆ=ಧರೆಯಲ್ಲಿ;ರೀತಿಯನು+ಉಸುರ್ವನೆಕವಿ=ಸ್ವಾಭಾವಿಕವಾದುದನ್ನು(ಜಾತಿಯನ್ನು) ಹೇಳುವವನೆ ಕವಿ; ರಸ ರೀತಿಯಲ್ಲಿ+ಓದುವವನೆ ಗಮಕಿ=ರಸ, ರೀತಿಗಳಿಗೆ ಅನುಗುಣವಾಗಿ ಕಾವ್ಯ ಓದುವವನೆ ಗಮಕಿ; ಪರರು+ ಎಂದುದನಂ =ಬೇರೆಯವರು ಹೇಳಿದುದನ್ನು; ಘಾತಿಪನೆ= ಭೇದಿಸುವವನೆ; ಅಥವಾ ವಾದಿಸುವವನೆ, ವಾದಿ, ವಾಕ್=ಮಾತು; ನೆರೆವ+ಆತಂ=ಚೆನ್ನಾಗಿ ಮಾತನಾಡಬಲ್ಲವನೆ ವಾಗ್ಮಿ.

ಭೂಮಿಯಲ್ಲಿ ಸ್ವಾಭಾವಿಕವಾದುದನ್ನು ಹೇಳುವವನೇ ಕವಿ. ರಸ ಮತ್ತು ರೀತಿಗೆ ಅನುಗುಣವಾಗಿ ಕಾವ್ಯ ಓದುವವನೆ ಗಮಕಿ. ಬೇರೆಯವರು ಹೇಳಿದುದನ್ನು ಖಂಡಿಸಿ ಭೇದಿಸಿ ಮಾತನಾಡುವವನೆ ವಾದಿ. ಚೆನ್ನಾಗಿ ಮಾತನಾಡಬಲ್ಲವನೇ ವಾಗ್ಮಿ.

ಮೊದಲ ಸಾಲಿನಲ್ಲಿ 'ಜಾತಿಯನುಸುರ್ವವನೆ ಕವಿ' ಎನ್ನಲಾಗಿದೆ. ಇಲ್ಲಿ ಜಾತಿ ಎಂದರೆ ವರ್ಣಾಶ್ರಮದ್ದಲ್ಲ. ಸ್ವಾಭಾವಿಕವಾದುದು ಎಂದು ಗ್ರಹಿಸಬೇಕು. ಛಂದಸ್ಸಿನ ಪರಿಜ್ಞಾನವುಳ್ಳವನು ಕವಿ. ರಸಕ್ಕೆ ರೀತಿಗೆ ತಕ್ಕಂತೆ ಯತಿ ಇತ್ಯಾದಿಗಳನ್ನು

ಅರಿತು ಕಾವ್ಯವಾಚನ ಮಾಡುವವನೆ ಗಮಕಿ. ಬೇರೆಯವರು ಹೇಳಿದುದನ್ನು ಚೆನ್ನಾಗಿ ಗ್ರಹಿಸಿ, ಅದನ್ನು ಭೇದಿಸಿ ವಾದಿಸುವವನೇ ವಾದಿ. ಚೆನ್ನಾಗಿ ಮಾತನಾಡಬಲ್ಲವನೆ ವಾಗ್ಮಿ. ಕವಿ, ಗಮಕಿ, ವಾದಿ, ವಾಗ್ಮಿಗಳು ಹೇಗಿರಬೇಕೆಂದು ತಿಳಿಸಲಾಗಿದೆ.

೫೮

ತಂಬುಲವಿಲ್ಲದ ಮೊಗಮುಂ
ನಂಬುಗೆಯಿಲ್ಲದನ ಹರದು ದೋಷಿಯ ತಪಮುಂ
ಇಂಬರಿಯದವಳೊಳಾಟಂ
ಕುಂಭಿನಿಗದು ಹಾಸ್ಯ ಸುಕವಿ ಚೂಡಾರತ್ನಾ

ತಂಬುಲವಿಲ್ಲದ ಮೊಗಮುಂ=ತಾಂಬೂಲವಿಲ್ಲದ ಬಾಯಿ; ನಂಬುಗೆ ಯಿಲ್ಲ ದನ ಹರದು=ನಂಬಿಕೆಯಿಲ್ಲದ ವ್ಯಾಪಾರ; ದೋಷಿಯ ತಪಮುಂ= ದೋಷಿ ಯಾದ ವನ ತಪಸ್ಸು; ಇಂಬು+ಅರಿಯದ+ಅವಳೊಳ್+ಆಟಂ= ಪ್ರೀತಿಯಿಲ್ಲ ದವಳ ಒಡ ನಾಟ; ಕುಂಭಿನಿಗದು ಹಾಸ್ಯ=ಭೂಮಿಯಲ್ಲಿ ಅದು ಹಾಸ್ಯಾಸ್ಪದ.

ತಾಂಬೂಲವಿಲ್ಲದ ಬಾಯಿ, ನಂಬಿಕೆಯಿಲ್ಲದ ವ್ಯಾಪಾರ, ದೋಷಿ ಯಾದ ವನು ಮಾಡುವ ತಪಸ್ಸು, ಪ್ರೀತಿಯಿಲ್ಲದವಳ ಒಡನಾಟ – ಇವು ಭೂಮಿಯಲ್ಲಿ ಹಾಸ್ಯಾ ಸ್ಪದ.

ತಾಂಬೂಲ ಸೇವನೆ ಭಾರತೀಯ ಆಹಾರ ಪದ್ಧತಿಯ ಒಂದು ಭಾಗ. ತಾಂಬೂಲದಿಂದ ಸೇವಿಸಿದ ಆಹಾರ ಜೀರ್ಣವಾಗುವುದಲ್ಲದೆ ಮಾನವನ ದೇಹಕ್ಕೆ ಅಗತ್ಯವಾದ ಸುಣ್ಣದ ಅಂಶ ನೀಡುತ್ತದೆ. ಹಾಗಾಗಿ ಬಾಯಿ ಎಂದರೆ ತಾಂಬೂಲ ಸೇವಿಸಿದರೆ ಮಾತ್ರ ಬಾಯಿ ಎಂದು ಸ್ಪಷ್ಟಪಡಿಸಿದ್ದಾನೆ ಕವಿ. ವ್ಯಾಪಾರವೆಂಬುದು ನಂಬಿಕೆಯ ಹಿನ್ನೆಲೆಯಲ್ಲೇ ನಡೆಯುವಂಥದು. ತಾಪಸಿಯಾದವನು ದೋಷಮುಕ್ತ ನಾಗಿರಬೇಕು. ಹಾಗಲ್ಲದಿದ್ದಲ್ಲಿ ತಪಸ್ಸಿನ ಫಲ ಸಿದ್ಧಿಸುವುದಿಲ್ಲ. ಅಂಥವರು ತಪಸ್ಸು ಮಾಡುವುದು ಹಾಸ್ಯಾಸ್ಪದ ಎನ್ನಲಾಗಿದೆ.

೫೯

ತಕ್ಕುಚಿತಂಗಳ ಮಾಡದ
ಬಿಕ್ಕಿದರಿಗೆ ನೀರೆರೆಯದ ಪಸಿದರ್ಗನ್ನವ
ನಿಕ್ಕದ ಲೋಭಿಯ ಧನವಾ
ಮೆಕ್ಕೆಯ ಹಣ್ಣಂತೆ ನೋಡು ಚೂಡಾರತ್ನಾ

ತಕ್ಕ+ಉಚಿತಂಗಳ ಮಾಡದ=ತಕ್ಕುದಾದ ಉಚಿತವಾದವನ್ನು ಮಾಡದಿರುವ; ಬಿಕ್ಕಿದವರಿಗೆ=ಬಿಕ್ಕಳಿಸುವವರಿಗೆ; ನೀರೆರೆಯದ=ನೀರನ್ನು ನೀಡದ; ಪಸಿದರ್ಗೆ+ ಅನ್ನವನ್=ಹಸಿದವರಿಗೆ ಅನ್ನವನ್ನು; ಇಕ್ಕದ=ಇಕ್ಕದಿರುವ; ಲೋಭಿಯ=ಜಿಪುಣನ; ಧನವು+ಆ=ಆ ಧನ; ಮೆಕ್ಕೆಯ ಹಣ್ಣಂತೆ ನೋಡು=ಮೆಕ್ಕೆಯ ಹಣ್ಣಿನಂತೆ ನೋಡು

ತಕ್ಕುದಾದಂಥವನ್ನು, ಉಚಿತವಾದಂಥ ಕೆಲಸವನ್ನು ಮಾಡದಿರುವ, ಬಿಕ್ಕಳಿಸುವವನಿಗೆ ನೀರನ್ನು ನೀಡದ, ಹಸಿದವರಿಗೆ ಅನ್ನವನ್ನು ಇಕ್ಕದ, ಜಿಪುಣನ ಬಳಿ ಇರುವ ಹಣ ಮೆಕ್ಕೆ ಹಣ್ಣು ಇದ್ದಂತೆ ಇದು ಯಾವುದಕ್ಕೂ ಪ್ರಯೋಜನವಿಲ್ಲ.

ಸಮಾಜದಲ್ಲಿ ಬದುಕುತ್ತಿದ್ದಾಗ ಆ ಸಮಾಜಕ್ಕೆ ನಾವು ಏನನ್ನಾದರೂ ನೀಡಬೇಕೆಂಬ ಸದಾಶಯವಿದೆ. ಜಿಪುಣನ ಬಳಿ ಎಷ್ಟೇ ಹಣವಿದ್ದರೂ ಸದ್ವಿನಿಯೋಗ ವಾಗದಿದ್ದರೆ ಅದು ವ್ಯರ್ಥ.

೬೦

ತನಗುಪಭೋಗಿಸಲುಂ ಸ
ಜ್ಜನರ್ಗೀಯಲುಮಿಲ್ಲದೊಡವೆಗೊಡೆಯಂ ಗಡಕಾಂ
ಚನಗಿರಿಯು ತನ್ನ ಪಿತೃಗಳ
ಧನವೆಂಬಾ ಮರುಳನಂತೆ ಚೂಡಾರತ್ನಾ

ತನಗೆ+ ಉಪಭೋಗಿಸಲುಂ= ತನಗೆ ಅನುಭವಿಸಲು; ಸಜ್ಜನರ್ಗೆ+ ಈಯಲುಂ+ಇಲ್ಲದ+ಒಡವೆಗೆ+ಒಡೆಯಂ+ಗಡ= ಸಜ್ಜನರಿಗೆ ಕೊಡಲು ಇಲ್ಲದ ಒಡವೆಗೆ ಒಡೆಯನಾದರೇನು; ಕಾಂಚನಗಿರಿಯು ತನ್ನ ಪಿತೃಗಳ= ಚಿನ್ನದ ಬೆಟ್ಟವೇ ತನ್ನ ಪಿತೃಗಳ; ಧನವು+ಎಂಬಾ ಮರುಳನಂತೆ=ಧನ ಎಂದು ಹೇಳುವ ಹುಚ್ಚನಂತೆ.

ತನಗೆ ಅನುಭವಿಸಲು, ಸಜ್ಜನರಿಗೆ ಕೊಡಲು ಇಲ್ಲದ ಒಡವೆಗೆ ಒಡೆಯನಾದರೇನು? ಚಿನ್ನದ ಬೆಟ್ಟವೇ ತನ್ನ ಪಿತೃಗಳ ಧನ ಎಂದು ಹೇಳುವಾತ ಹುಚ್ಚನಂತೆ.

ತಾನೂ ಅನುಭವಿಸದೆ ಸಜ್ಜನರಾದವರಿಗೂ ಕೊಡಲಾಗದ ಒಡವೆಗೆ ಒಡೆಯನಾದರೆ ಏನು ಫಲ? ತನ್ನ ಸಂಪತ್ತನ್ನು ತಾನು ಅನುಭವಿಸುವುದಾದರೆ ಅದು ಸಾರ್ಥಕ. ಹಾಗಲ್ಲದೆ ಅದನ್ನು ಬೇರೆಯವರಿಗೂ ನೀಡದೆ ಇರುವ ಮನಸ್ಥಿತಿಯವರು ಎಷ್ಟು ಸಂಪತ್ತು ಇಟ್ಟುಕೊಂಡಿದ್ದರೂ ಪ್ರಯೋಜನವಿಲ್ಲ.

ಚಿನ್ನದ ಬೆಟ್ಟವೇ ತನ್ನ ಪಿತೃಗಳ ಆಸ್ತಿಯೆಂದು ಹೇಳುವಾತ ಹುಚ್ಚನೇ ಸರಿ. ಚಿನ್ನದ ಬೆಟ್ಟ ಎಂದರೆ ಸ್ವರ್ಗ ಎಂದು ಹೇಳುವುದೂ ಉಂಟು. ಸತ್ತವರು ಸ್ವರ್ಗಕ್ಕೆ ಹೋಗುವರು ಎಂಬ ನಂಬಿಕೆ ಕೂಡಾ ಇದ್ದೇ ಇದೆ. ಸ್ವರ್ಗಲೋಕವೇ ತನ್ನ ಪಿತೃಗಳ ಆಸ್ತಿ ಎಂದು ಹೇಳುವವ ಮರುಳನೇ ಸರಿ.

೬೧

ತಪ್ಪುತ್ತೆಡಹುತ್ತೋದು
ತ್ತಿಪ್ಪನಬಾಯ್ಕತ್ತೆವಾಯಿ ಕಾನನವಾಯ್ತಾಂ
ಕಪ್ಪುರ ಕರಡಗೆ ಬಾಯುಂ
ತಪ್ಪದೆಯೋದುವನ ಬಾಯಿ ಚೂಡಾರತ್ನಾ

ತಪ್ಪುತ್ತ+ ಎಡಹುತ್ತ+ಓದುತ್ತ+ ಇಪ್ಪನ= ತಪ್ಪಾಗಿ, ತಡವರಿಸುತ್ತ, ಓದುತ್ತಾ ಇರುವವನ ಬಾಯಿ; ಕತ್ತೆವಾಯಿ= ಕತ್ತೆಯಬಾಯಿ; ಕಾನನ ವಾಯ್ತು= ಕಾಡಾಯಿತು; ಆ; ಕಪ್ಪುರ ಕಡರಗೆ= ಕರ್ಪೂರ ಭರಣಿ; ಬಾಯುಂ= ಬಾಯಿಯು; ತಪ್ಪದೆ+ಓದುವವನ; ಬಾಯಿ.

ತಪ್ಪಾಗಿ, ತಡವರಿಸುತ್ತ ಓದುವವನ ಬಾಯಿ ಕತ್ತೆಯ ಬಾಯಿಗೆ ಸಮ. ಕಾಡಾಯ್ತು ಅದು(ಹಾಳಾಯಿತು). ತಪ್ಪಿಲ್ಲದೆ, ತಡವರಿಸದೆ ಓದುವ ಬಾಯಿ ಕರ್ಪೂರದ ಭರಣಿಯಿದ್ದಂತೆ.

ತಪ್ಪಾಗಿ, ತಡವರಿಸುತ್ತ ಓದುವವನನ್ನು ಕವಿ ಟೀಕಿಸಿದ್ದಾನೆ. ಏಕೆಂದರೆ ಓದುವುದನ್ನೇ ಸರಿಯಾಗಿ ಕಲಿಯದಿದ್ದರೆ ಅಂಥವನ ಬಾಯಿಯನ್ನು ಕತ್ತೆಯ ಬಾಯಿಗೆ ಹೋಲಿಸಲಾಗಿದೆ. ಕತ್ತೆ ಅರಚಿದರೆ ಅದು ಕೇವಲ ಕರ್ಕಶ ಕೂಗು ಆಗುತ್ತದೆ. ಅದು ಓದು ಆಗಲು ಸಾಧ್ಯವೇ ಇಲ್ಲ; ಅದೊಂದು ವ್ಯರ್ಥಾಲಾಪ ಅಷ್ಟೇ. ಅಂಥದ್ದನ್ನು ಕಾನನವಾಯ್ತು ಎಂದಿದ್ದಾನೆ ಕವಿ. ಇಲ್ಲಿ ಕಾಡು ಎಂದರೆ ಉಪಯೋಗಕ್ಕೆ ಬಾರದಂಥದ್ದು ಎಂದು ಅರ್ಥೈಸಬೇಕಲ್ಲದೆ ಅನ್ಯಥಾ ಭಾವಿಸಲಾಗುವುದಿಲ್ಲ. ತಪ್ಪಿಲ್ಲದೆ ಸ್ಪಷ್ಟವಾಗಿ, ನಿರರ್ಗಳವಾಗಿ ಓದುವ ಬಾಯಿಯನ್ನು ಕರ್ಪೂರದ ಕರಡಗೆಗೆ ಉಪಮಿಸಲಾಗಿದೆ. ಕರ್ಪೂರದ ಕರಡಗೆಯನ್ನು ತೆರೆದಾಗ ಸುವಾಸನೆ ಹೊರಸೂಸುತ್ತದೆ. ಅದನ್ನು ಎಲ್ಲರೂ ಆಘ್ರಾಣಿಸಿ ಆಸ್ವಾದಿಸಬಹುದು. ಹೀಗೆ ಚೆನ್ನಾಗಿ ಓದಿದರೆ ಅದು ಎಲ್ಲರಿಗೂ ಸ್ಪಷ್ಟವಾಗಿ ಅರ್ಥವಾಗುತ್ತದೆ, ಆಸ್ವಾದಯೋಗ್ಯ ವಾಗಿರುತ್ತದೆ. ಓದು ಅದರ ಮಹತ್ತ್ವವನ್ನು ಕುರಿತು ಇಲ್ಲಿ ತಿಳಿಸಲಾಗಿದೆ.

೬೨

ತಮತಮಗೆ ಬುದ್ಧಿವಂತರು
ತಮತಮಗೆಯು ವಿದ್ಯದಲ್ಲಿಯಧಿಕರು ಚೆಲುವರು
ತಮತಮಗೆ ಗುಣಿಗಳಲ್ಲದೆ
ತಮತಮಗವಗುಣಗಳುಂಟೆ ಚೂಡಾರತ್ನಾ

ತಮತಮಗೆ=ಅವರವರಿಗೆ; ಅವರೇ ಬುದ್ಧಿವಂತರು; ತಮತಮಗೆಯೆ= ತಮಗೆ ತಾವೇ; ವಿದ್ಯದಲ್ಲಿಯು+ಅಧಿಕರು= ವಿದ್ಯದಲ್ಲಿಯೂ ಅಧಿಕರು; ಚೆಲುವರು= ಸುಂದರರು; ತಮತಮಗೆ ಗುಣಿಗಳು+ಅಲ್ಲದೆ= ತಮಗೆ ತಾವೇ ಗುಣವಂತರು ಅಲ್ಲದೆ; ತಮತಮಗೆ+ಅವಗುಣಗಳುಂಟೆ=ತಮಗೆ ಅವಗುಣಗಳು ಇರಲು ಸಾಧ್ಯವೇ?

ಅವರವರಿಗೆ ಅವರೇ ಬುದ್ಧಿವಂತರು, ತಮಗೆ ತಾವೇ ವಿದ್ಯೆಯಲ್ಲಿಯೂ ಅಧಿಕರು, ಚೆಲುವರು, ಅಲ್ಲದೆ ತಮಗೆ ತಾವೇ ಗುಣಿಗಳು, ಇಂಥವರಲ್ಲಿ ಅವಗುಣಗಳು ಇರಲು ಸಾಧ್ಯವೇ?

ಜನರು ತಮಗೆ ತಾವೇ ಬುದ್ಧಿವಂತರು, ವಿದ್ಯಾವಂತರು, ಚೆಲುವರು, ಗುಣವಂತರು ಎಂದು ಭಾವಿಸುತ್ತಾರೆ. ಹೀಗೆ ಭಾವಿಸುವವರು ತಮ್ಮಲ್ಲಿ ಅವಗುಣಗಳಿವೆ ಎಂದು ಭಾವಿಸುತ್ತಾರೆಯೇ? ಅಹಂ ಇರುವವರಿಗೆ ತಾವು ಮಾಡಿದ್ದೇ ಸರಿ ಎಂಬ ಭಾವ ಇರುವುದು ಸಹಜ. ಅಂಥವರನ್ನು ಕುರಿತಾದ ಪದ್ಯವಿದು.

೬೩

ತಾಗಿ ತಲೆಯೊಡೆದ ಬಳಿಕಂ
ಬಾಗುವುದತಿ ಬುದ್ಧಿಯಲ್ಲವದು ಕಾರಣದಿಂ
ತಾಗದ ವೊಡೆಯದ ಮುನ್ನವ
ನಾಗತವರಿವವನೆ ಜಾಣ ಚೂಡಾರತ್ನಾ

ತಾಗಿ ತಲೆಯೊಡೆದ ಬಳಿಕಂ ಬಾಗುವುದು+ಅತಿಬುದ್ಧಿಯಲ್ಲವು+ ಅದು= ತಲೆಗೆ ತಾಕಿದ ಮೇಲೆ ಬಾಗುವುದು ಅತಿ ಬುದ್ಧಿಯಲ್ಲ; ಅದು ಕಾರಣದಿಂ=ಆ ಕಾರಣದಿಂದ; ತಾಗದ ಒಡೆಯದ ಮುನ್ನವೆ ಅನಾಗತನ+ಅರಿವವನೆ ಜಾಣ=ತಲೆ ತಾಗದ ಮುಂದೆ ಆಗಬಹುದಾದಂಥ ವಿಚಾರದ ಬಗ್ಗೆ ಅರಿವುಳ್ಳವನೇ ಜಾಣ.

ತಲೆ ಬಾಗಿ ಪೆಟ್ಟು ಬಿದ್ದ ಮೇಲೆ ಬಾಗಿ ನಡೆಯುವುದಕ್ಕಿಂತ ತಲೆ ತಾಗದ ಪೆಟ್ಟು ಬೀಳದ ಮುನ್ನ ಮುಂದೆ ಆಗಬಹುದಾದಂಥದನ್ನ ಅರಿತು ನಡೆಯುವವನೇ ಜಾಣ.

ತಗ್ಗಿ ಬಗ್ಗಿ ನಡೆದರೆ ಬದುಕು ಹಸನಾಗಿರುತ್ತದೆ ಎಂಬ ಮಾತನ್ನು ಆಗಾಗ ಹಿರಿಯರು ಆಡುವುದುಂಟು. ಇದು ಕೇವಲ ದೈಹಿಕವಾಗಿ ಆಗುವ ಪೆಟ್ಟಿಗಿಂತ ಜೀವನದಲ್ಲಿ ಹೊಂದಿಕೊಂಡು ಹೋಗಬೇಕು ಎಂಬ ತಿಳಿವಳಿಕೆ ನೀಡುವ ಮಾತಾಗಿದೆ. ನೇರವಾಗಿ ಬಾಗಿ ನಡೆಯದಿದ್ದರೆ, ಅಂದರೆ ಅಹಂಕಾರಿಯಾಗಿದ್ದರೆ ಜೀವನದಲ್ಲಿ ಕಷ್ಟ ಅನುಭವಿಸಬೇಕಾಗುವುದು. ಹಾಗಲ್ಲದೆ ವಿನಯಶೀಲನಾಗಿ ಹೊಂದಾಣಿಕೆಯ ಸ್ವಭಾವವಿರುವವರು ಎಲ್ಲಿ ಹೋದರೂ ಯಾವುದಕ್ಕೂ ಎದೆಗುಂದದೆ ಬದುಕಬಹುದು.

೬೪

ತಾನುಂಬುದು ಪೆರರ್ಗೀವುದು
ಮಾನಿನಿಯನೊಲಿಸಿ ಸುಖದೊಳಿರ್ಪುದು ಮನುಜಂ
ದೀನತೆಯಂ ಬಿಡು ಬಿಡು ಸಿರಿ
ಮಾನವರಿಗೆ ನೆಲೆಯದಲ್ಲ ಚೂಡಾರತ್ನಾ

ತಾನುಂಬುದು=ತಾನು ಉಣ್ಣುವುದು; ಪೆರರ್ಗೀವುದು=ಬೇರೆಯವರಿಗೆ ಕೊಡುವುದು; ಮಾನಿನಿಯರನು+ಒಲಿಸಿ= ಸ್ತ್ರೀಯರನ್ನೊಲಿಸಿ; ಸುಖದಿಂದ+ ಇರ್ಪುದು =ಸುಖದಿಂದ ಇರುವುದು; ಮನುಜಂ=ಮನುಜನ; ದೀನತೆಯಂ= ದೀನತೆಯ; ಬಿಡು ಬಿಡು; ಸಿರಿ ಮಾನವರಿಗೆ ನೆಲೆಯದಲ್ಲ.

ತಾನು ಉಣ್ಣುವುದು, ಬೇರೆಯವರಿಗೆ ಕೊಡುವುದು, ಸ್ತ್ರೀಯರನ್ನು ಒಲಿಸಿಕೊಂಡು ಸುಖದಿಂದ ಇರುವುದು ಒಳ್ಳೆಯದು. ಮನುಜ ದೀನತೆಯನ್ನು ಬಿಡು ಬಿಡು, ಸಿರಿ ಅಥವಾ ಶ್ರೀಮಂತಿಕೆ ಎನ್ನುವುದು ಸ್ಥಿರವಲ್ಲ ಎಂದು ತಿಳಿವಳಿಕೆ ಹೇಳಿದ್ದಾನೆ ಕವಿ.

ತಾನು ಉಣ್ಣುವುದು ಎಂದರೆ ಅನುಭವಿಸುವುದು, ಸಾಧ್ಯವಾದರೆ ಬೇರೆ ಯವರಿಗೆ ಸಹಾಯ ಮಾಡುವುದು, ಹೆಂಡತಿ ಜೊತೆ ಅವಳ ಇಂಗಿತವರಿತು ಆಕೆಯನ್ನು ಅನುಸರಿಸಿಕೊಂಡು ಸುಖದಿಂದ ಬಾಳುವುದು ಒಳ್ಳೆಯದು. ಇರುವಾಗ ಚೆನ್ನಾಗಿ ಸುಖಪಡು. ಸಿರಿ ಎಂಬುದು ಸ್ಥಿರವಲ್ಲ. 'ಸಿರಿ ಬರುವುದೆಷ್ಟೊತ್ತು, ಹೋಗು ವುದೆಷ್ಟೊತ್ತು' ಎಂಬ ಅನುಭವದ ಮಾತಿದೆ. ಅದನ್ನೇ ಇಲ್ಲಿ ಹೇಳಲಾಗಿದೆ.

೬೫

ತ್ಯಾಗಿಗೆ ಧನ ತೃಣ ಪರತರ
ಯೋಗಿಗೆ ತೃಣವೀ ಜಗತ್ತು ಕಲಿಗಂ ಸಮರೋ
ದ್ಯೋಗಂ ತೃಣ ಮಾತರಿಯದ
ಹಗೆಗೆ ತೃಣ ನೀತಿಶಾಸ್ತ್ರ ಚೂಡಾರತ್ನಾ

ತ್ಯಾಗಿಗೆ ಧನ ತೃಣ=ತ್ಯಾಗಿಗೆ ಧನ ತೃಣಕ್ಕೆ ಸಮಾನ; ಪರತರ ಯೋಗಿಗೆ ತೃಣವು+ಈ ಜಗತ್ತು=ಪರಲೋಕದತ್ತ ಧ್ಯಾನವಿರುವ ಯೋಗಿಗೆ ಈ ಜಗತ್ತು ತೃಣಕ್ಕೆ ಸಮಾನ; ಕಲಿಗಂ=ಕಲಿಗೆ; ಸಮರ+ಉದ್ಯೋಗಂ= ವೀರನಿಗೆ ಯುದ್ಧವೆಂಬುದು ತೃಣಕ್ಕೆ ಸಮಾನ; ಮಾತು+ಅರಿಯದ=ಮಾತಾಡಲು ತಿಳಿಯದ; ಹಗೆಗೆ=ವೈರಿಗೆ; ನೀತಿಶಾಸ್ತ್ರ ಎಂಬುದು ತೃಣಕ್ಕೆ ಸಮಾನ.

ತ್ಯಾಗಿಗೆ ಧನವೂ, ಪರಲೋಕಾಸಕ್ತ ಯೋಗಿಗೆ ಈ ಜಗತ್ತೂ, ಪರಾಕ್ರಮಿಯಾದವನಿಗೆ ಯುದ್ಧವೂ ಮಾತನ್ನು ತಿಳಿಯದ ಶತ್ರುವಿಗೆ ನೀತಿಶಾಸ್ತ್ರವೂ ತೃಣಕ್ಕೆ ಸಮಾನ.

ತ್ಯಾಗಿಯಾದವನ ಬಳಿ ಎಷ್ಟೇ ಸಿರಿಸಂಪತ್ತು ಇದ್ದರೂ ಅದು ತೃಣಕ್ಕೆ ಸಮಾನ. ಯೋಗಿಯಾದವನು ಭೂಲೋಕದಲ್ಲಿದ್ದರೂ ಆತ ಪರಲೋಕಾಸಕ್ತನಾಗಿದ್ದಾಗ ಜಗತ್ತು ಆತನಿಗೆ ತೃಣಕ್ಕೆ ಸಮಾನ. ಧೀರನೂ ಪರಾಕ್ರಮಿಯೂ ಆದವನಿಗೆ ಯುದ್ಧ ತೃಣಕ್ಕೆ ಸಮಾನ. ಮಾತಿನ ಧರ್ಮವನ್ನರಿಯದ ಮೂರ್ಖತನದಿಂದ ವರ್ತಿಸುವವನಿಗೆ ನೀತಿಶಾಸ್ತ್ರ ತೃಣಕ್ಕೆ ಸಮಾನ. ಒಂದೊಂದು ಕ್ಷೇತ್ರದಲ್ಲಿ ಒಬ್ಬೊಬ್ಬರು ಪರಿಣತಿ ಪಡೆದಿರುತ್ತಾರೆ. ಹಾಗಾಗಿ ಅವರಿಗೆ ಬೇರೆ ಯಾವುದೂ ಲೆಕ್ಕಕ್ಕೇ ಇಲ್ಲ.

೬೬

ತೇಜಸ್ವಿಯ ಧರ್ಮಜ್ಞನ
ರಾಜಸಮೀಪಸ್ಥನಪ್ಪನಂ ದುರ್ಜನನಂ
ಓಜೆಯೊಳುಪಾಯ ಮಳ್ಳರ
ನೀ ಜಗದೊಳು ಸೆಣಸಬೇಡ ಚೂಡಾರತ್ನಾ

ತೇಜಸ್ವಿಯ=ಘನತೆಯುಳ್ಳವನ; ಧರ್ಮಜ್ಞನ=ಧರ್ಮವನ್ನು ತಿಳಿದವನ; ರಾಜ ಸಮೀಪಸ್ಥನ್+ಅಪ್ಪನಂ=ರಾಜನಿಗೆ ನಿಕಟವರ್ತಿಯಾದವನ; ದುರ್ಜನನಂ= ಕೆಟ್ಟವನನ್ನು; ಓಜೆಯೊಳ್=ಈ ಕ್ರಮದಲ್ಲಿ; ಉಪಾಯ ಮಳ್ಳರನ್=ಉಪಾಯವಿಲ್ಲದ ದಡ್ಡರನ್ನು; ಈ ಜಗದೊಳು=ಈ ಜಗದಲ್ಲಿ; ಸೆಣಸಬೇಡ=ಕಾದಾಡಬೇಡ.

ಘನತೆಯುಳ್ಳವನ, ಧರ್ಮವನ್ನು ತಿಳಿದವನ, ರಾಜನಿಗೆ ನಿಕಟವರ್ತಿಯಾದವನ, ದುರ್ಜನನ, ಉಪಾಯವಿಲ್ಲದ ದಡ್ಡರ ಜೊತೆ ಹೋರಾಡುವುದು ಬೇಡ.

ಕೆಲವರ ಜೊತೆ ಕಾದಾಡುವುದು ಸರಿಯಲ್ಲ. ಅವರಲ್ಲಿ ಒಳ್ಳೆಯವರೂ ಇರುತ್ತಾರೆ. ಕೆಟ್ಟವರು, ಮೂರ್ಖರು ಇರುತ್ತಾರೆ. ಅಂಥವರ ಜೊತೆ ಕಾದಾಡುವುದು ಸರಿಯಲ್ಲ ಎಂಬುದು ಕವಿಯ ಅಭಿಮತ.

೬೭

ದೀನನ ದೊರೆತನದಿಂದಂ
ದಾನಿಯ ಬಡತನವೆ ಲೇಸದಂತೆನೆ ಶರನಿಧಿ
ಪಾನೀಯಕೆ ಯೋಗ್ಯವೆ ಸ
ನ್ಮಾನಂ ಚಿಕ್ಕೊರತೆ ಲೇಸು ಚೂಡಾರತ್ನಾ

ದೀನನ ದೊರೆತನದಿಂದಂ=ಬಡವನ ದೊರೆತನಕ್ಕಿಂತ; ದಾನಿಯ ಬಡತನವೆ ಲೇಸು+ಅದು+ಎಂತೆನೆ=ದಾನಿಯಾದವನ ಬಡತನವೇ ಲೇಸು; ಅದು ಹೇಗೆಂದರೆ; ಶರನಿಧಿ ಪಾನೀಯಕೆ ಯೋಗ್ಯವೆ=ಸಮುದ್ರದ ನೀರು ಕುಡಿಯಲು ಯೋಗ್ಯವೇ? ಸನ್ಮಾನಂ=ಒಳ್ಳೆಯ; ಚಿಕ್ಕ+ಒರತೆ ಲೇಸು, ಒಳ್ಳೆಯದಾದ ಚಿಕ್ಕ ಒರತೆಯೇ ಸಾಕು.

ಬಡವನ ದೊರೆತನಕ್ಕಿಂತ, ದಾನಿಯ ಬಡತನವೇ ಲೇಸು, ಅದು ಹೇಗೆಂದರೆ ಸಮುದ್ರದ ನೀರು ಕುಡಿಯಲು ಯೋಗ್ಯವೇ? ಒಳ್ಳೆಯದಾದ ಚಿಕ್ಕ ಒರತೆಯೇ ಸಾಕು. ಇಲ್ಲಿ ಸದಮಲ ಚಿತ್ತವಿರುವವರ ಬಗೆಗೆ ಹೇಳಲಾಗಿದೆ.

೬೮

ದೀನರು ದಯಹೀನರು ಗುಣ
ಹೀನರುಗಳು ಲಕ್ಷಸಂಖ್ಯೆಯಿದ್ದೇಂ ಬಂದೇಂ
ದಾನಿ ಜಗದೊಳಗೆ ಸಂತತ
ಭಾನುವಿನಂತೊಬ್ಬನಿಹನು ಚೂಡಾರತ್ನಾ

ದೀನರು, ದಯಾಹೀನರು ಗುಣಹೀನರುಗಳು; ಲಕ್ಷಸಂಖ್ಯೆ+ಇದ್ದೇನು = ಲಕ್ಷಸಂಖ್ಯೆಯಲ್ಲಿ ಇದ್ದೇನು; ಬಂದು+ಏಂ=ಬಂದರೆ ಏನು? ಏನನ್ನು; ದಾನಿ ಜಗದೊಳಗೆ ಸಂತತ=ದಾನಿಯಾದವನು ಬಂದು ಯಾವಾಗಲೂ ನೀಡುತ್ತಿದ್ದರೆ; ಭಾನುವಿನಂತೆ+ಒಬ್ಬನು+ಇಹನು=ಸೂರ್ಯನಂತೆ ಒಬ್ಬನಿದ್ದಾನೆ.

ದೀನರು, ದಯೆಯಿಲ್ಲದವರು, ಗುಣಹೀನರಾದವರು ಲಕ್ಷಲಕ್ಷ ಸಂಖ್ಯೆಯಲ್ಲಿ ಇದ್ದರೇನು? ದಾನಿಯಾದವನೊಬ್ಬ ಏನನ್ನಾದರೂ ಸಂತತ ನೀಡಿದರೆ ಅಂಥವನು ಸೂರ್ಯನಿದ್ದಂತೆ.

ದಾನಿಗಳ ಬಗೆಗೆ ಅನೇಕ ಪದ್ಯಗಳಿವೆ. ಅದರಲ್ಲಿ ಇದೂ ಒಂದು. ದಾನಗುಣವುಳ್ಳವರು ಕೆಲವೇ ಕೆಲವು ಮಂದಿ. ಎಷ್ಟೇ ಸಿರಿವಂತರಾದರೂ ಬೇರೆಯವರಿಗೆ ನೀಡಬೇಕೆಂಬ ಮನಸ್ಥಿತಿ ಇರುವುದಿಲ್ಲ. ಹಾಗಾಗಿ ಲಕ್ಷಲಕ್ಷ ಸಂಖ್ಯೆಯಲ್ಲಿ ದಯಾಹೀನರು, ಹೀನಗುಣವುಳ್ಳವರು ಇದ್ದರೇನು? ಒಬ್ಬ ದಾನಿ ಬಂದು ಸತತವಾಗಿ ದಾನ ಮಾಡುತ್ತಿದ್ದರೆ ಅಂಥವನು ಸೂರ್ಯನಿದ್ದಂತೆ ಎಂದು ಹೇಳಿರುವುದು ಸಮಂಜಸವೆನಿಸುತ್ತದೆ.

೬೯

ದುರಿತಾತ್ಮರ ಕಿವಿಗೆ ಮಹಾ
ಪುರುಷರ ನುಡಿ ವಿಷಮವಾಗಿ ತೋರ್ಕುಂ ನಿರ್ಭಾ
ಗ್ಯರ ಕಣ್ಗೆ ನಿಧಿಯೆ ತಾ ಬಿಡ
ದುರಿಯಾಗಿಯೆ ತೋರುವಂತೆ ಚೂಡಾರತ್ನಾ

ದುರಿತಾತ್ಮರ=ದುರ್ಜನರ; ಕಿವಿಗೆ; ಮಹಾಪುರುಷರ ನುಡಿ; ವಿಷಮವಾಗಿ ತೋರ್ಕುಂ=ಸರಿ ಕಾಣುವುದಿಲ್ಲ; ನಿರ್ಭಾಗ್ಯರ ಕಣ್ಗೆ=ಅದೃಷ್ಟಹೀನರ ಕಣ್ಣಿಗೆ; ನಿಧಿಯೆ=ಸಂಪತ್ತು, ತಾ ಬಿಡದೆ+ಉರಿಯಾಗಿಯೆ=ತಾನು ಬಿಡದೆ ಉರಿಯಾಗಿಯೆ ತೋರುವಂತೆ.

ದುರ್ಜನರ ಕಿವಿಗೆ ಮಹಾಪುರುಷರ ನುಡಿ ಸರಿಯೆನಿಸುವುದಿಲ್ಲ; ಅದು ಹೇಗೆಂದರೆ ಅದೃಷ್ಟಹೀನರ ಕಣ್ಣಿಗೆ ಸಂಪತ್ತು ಉರಿಯಾಗಿಯೇ ತೋರುತ್ತದೆ.

ದುರ್ಜನರಿಗೆ ಮಹಾಪುರುಷರ ನುಡಿ ವಿಷಮವಾಗಿ ತೋರುತ್ತದೆ. ಅದೃಷ್ಟಹೀನರ ವಿಷಯದಲ್ಲಿ ಸಂಪತ್ತು ಉರಿಯಾಗಿ ತೋರುತ್ತದೆ. ಕೆಲವರಿಗೆ ಎಷ್ಟೇ ಪ್ರೋತ್ಸಾಹ, ಬೆಂಬಲ ನೀಡಿದರೂ ಅವರಿಗೆ ಮುಂದುವರಿಯಲು ಆಗುವುದೇ ಇಲ್ಲ. ಅಂಥವರನ್ನು ಕುರಿತು ಇಲ್ಲಿ ಹೇಳಲಾಗಿದೆ.

೭೦

ನಡುಗಡಲ ಜಲವ ಹೊಕ್ಕರೆ
ಮಡ ನನೆಯದು ತನ್ನ ಮುನ್ನ ಮಾಡಿದ ಸುಕೃತಂ
ಎಡೆಯಲ್ಲರಸಿದರುಂಟೇ
ಬಿದಿ ಬರೆದುದೆ ತೊಡೆಯಬಹುದೆ ಚೂಡಾರತ್ನಾ

ನಡುಗಡಲ ಜಲವ ಹೊಕ್ಕರೆ=ಸಮುದ್ರದ ಮಧ್ಯದ ಜಲವನ್ನು ಹೊಕ್ಕರೆ; ಮಡ ನನೆಯದು=ತಲೆ ನೆನೆಯುವುದಿಲ್ಲ; ತನ್ನ ಮುನ್ನ ಮಾಡಿದ ಸುಕೃತವಂ=ತಾನು ಹಿಂದೆ ಮಾಡಿದ ಸುಕೃತವನ್ನು; ಎಡೆಯಲ್ಲಿ+ಅರಸಿದರೆ+ಉಂಟೇ=ಬಳಿಯಲ್ಲಿ ಹುಡುಕಿದರೆ ಸಿಗಲು ಸಾಧ್ಯವೇ?; ಬಿದಿ ಬರೆದುದ ತೊಡೆಯಬಹುದೆ=ವಿಧಿ ಬರೆಹ ವನ್ನು ಅಳಿಸಲಾಗುವುದೆ?

ಸಮುದ್ರದ ಮಧ್ಯದಲ್ಲಿ ಹೋಗಿ ನಿಂತರೂ ತಲೆ ನೆನೆಯುವುದಿಲ್ಲ. ತಾನು ಹಿಂದೆ ಮಾಡಿದ ಸುಕೃತವನ್ನು ಹತ್ತಿರದಲ್ಲಿ ಹುಡುಕಿದರೆ ಸಿಗಲು ಸಾಧ್ಯವೇ? ವಿಧಿಲಿಪಿಯನ್ನು ಅಳಿಸಲಾಗುವುದೇ?

'ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು' ಎಂಬ ಮಾತಿಗೆ ಪದ್ಯದ ಮೊದಲ ಸಾಲು ಹೊಂದುತ್ತದೆ. ಹಿಂದೆ ಮಾಡಿದ ಪುಣ್ಯವನ್ನು ಹತ್ತಿರದಲ್ಲಿ ಹುಡುಕಿದರೆ ಸಿಗಲು ಸಾಧ್ಯವೇ? ಏನು ಆಗಬೇಕೋ ಅದು ಆಗೇ ಆಗುತ್ತದೆ. ಅದನ್ನು ಯಾರಿಂದಲೂ ತಪ್ಪಿಸಲಾಗುವುದಿಲ್ಲ ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ. ಇಲ್ಲಿ ಕವಿ ವಿಧಿವಾದಕ್ಕೇ ಒತ್ತು ನೀಡಿದ್ದಾನೆ.

೬೧

ನಡೆವುದು ನಗೆಗೆಡೆಯಾಗದೆ
ನುಡಿವುದು ನಯ ನೀತಿಯಲಿ ಸುಜನರೊಳೆಂತುಂ
ಬಿಡುವುದು ಕೆಡೆನುಡಿಯವರಂ
ಜಡರೊಡನಾಡಲ್ಕೆ ಬೇಡ ಚೂಡಾರತ್ನಾ

ನಡೆವುದು ನಗೆಗೆ + ಎಡೆಯಾಗದೆ= ನಗೆಗೀಡಾಗದಂತೆ ನಡೆಯುವುದು; ನುಡಿವುದು ನಯ ನೀತಿಯಲಿ; ಸುಜನರೊಳ್+ ಎಂತುಂ=ಸುಜನರ ಜತೆ ಯಾವಾಗಲೂ ನಯನೀತಿಯಿಂದ ನುಡಿಯಬೇಕು; ಬಿಡುವುದು; ಕೆಡೆ ನುಡಿಯುವರಂ=ಕೆಟ್ಟ ಮಾತುಗಳನ್ನಾಡುವವರನ್ನು ಬಿಡಬೇಕು; ಜಡರ+ಒಡನೆ+ಆಡಲ್ಕೆ ಬೇಡ=ಜಡರೊಡನೆ ಮಾತನಾಡಬೇಡ.

ನಗೆಗೀಡಾಗುವಂತೆ ನಡೆಯುವುದು, ನಯನೀತಿಯಲಿ ನುಡಿಯುವುದು, ಸುಜನರ ಜೊತೆ ಯಾವಾಗಲೂ ನಯವಿನಯದಿಂದ ನುಡಿಯಬೇಕು, ಕೆಟ್ಟ ಮಾತುಗಳಾಡುವವರನ್ನು ಬಿಡಬೇಕು, ಜಡಮತಿಗಳೊಡನೆ ಮಾತನಾಡಬೇಡ.

ನಡೆನುಡಿಗಳು ನಯವಿನಯದಿಂದಿರಬೇಕು. ಸುಜನರೊಡನೆ ಯಾವಾಗಲೂ ವಿನೀತರಾಗಿ ನಯವಾಗಿ ಮಾತನಾಡಬೇಕು. ಕೆಟ್ಟ ಮಾತುಗಳನ್ನಾಡುವವರನ್ನೂ ಜಡಮತಿಗಳನ್ನೂ ಮಾತನಾಡಿಸಬಾರದು. ಅವರನ್ನು ದೂರವಿಡಬೇಕು. ಒಟ್ಟಿನಲ್ಲಿ ಬೇರೆಯವರಿಗೆ ನೋವಾಗದಂತೆ, ಅಪಹಾಸ್ಯಕ್ಕೆ ಗುರಿಯಾಗದಂತೆ ಮಾತನಾಡಬೇಕು ಎಂಬುದು ಇಲ್ಲಿಯ ಇಂಗಿತವಾಗಿದೆ.

೬೨

ನಾಯಿ ಮೊದಲಾಗಿ ತನ್ನವ
ಗೋಯೆನ್ನದು ತನ್ನರನ್ಯರೆಂಬುದ ಬಲ್ಲುದು
ನೋಯಂ ನುಡಿವ ಮನುಷ್ಯಂ
ನಾಯಿಂದಂ ಕಷ್ಟಮಲ್ತೆ ಚೂಡಾರತ್ನಾ

ನಾಯಿ ಮೊದಲಾಗಿ, ತನ್ನವಗೆ+ಓ ಯೆನ್ನದು ತನ್ನರ್+ಅನ್ಯರ್+ಎಂಬುದ ಬಲ್ಲುದು=ನಾಯಿ ಮೊದಲಾದುವು ತನ್ನವರು, ಬೇರೆಯವರು ಎಂಬುದನ್ನು ತಿಳಿದು ಬೊಗಳುತ್ತದೆ. ನೋಯಂ=ನೋಯನು, ನೊಂದುಕೊಳ್ಳನು, ನುಡಿವ ಮನುಷ್ಯನ್=ಮಾತನಾಡುವ; ನಾಯಿಂದಂ ಕಷ್ಟವಲ್ತೆ=ನಾಯಿಗಿಂತ ಕಡೆಯಲ್ಲವೇ?

ನಾಯಿ ಮೊದಲಾದವು ಸಹ ತನ್ನವರು ಯಾರು ಅನ್ಯರು ಯಾರು ಎಂಬುದನ್ನು ತಿಳಿದು ಬೊಗಳುತ್ತವೆ. ಮಾತುಬಲ್ಲ ಮನುಷ್ಯ ನೋಯದೆ ನುಡಿಯುವನು. ಮಾನವ ನಾಯಿಗಿಂತ ಕಡೆಯಲ್ಲವೆ?

ಸಾಕುಪ್ರಾಣಿಗಳಿಗೆ ಪ್ರೀತಿ ತೋರಿಸಿದರೆ ಅವು ತುಂಬ ವಿಶ್ವಾಸದಿಂದ ನಡೆದುಕೊಳ್ಳುತ್ತವೆ ಕೊನೆಯ ತನಕ. ಆದರೆ ಮಾನವನ ಎಲುಬಿಲ್ಲದ ನಾಲಗೆ ಏನನ್ನಾದರೂ ನುಡಿಯುತ್ತದೆ. ತಾನು ನುಡಿದುದಕ್ಕೆ ಕಿಂಚಿತ್ತೂ ಬೇಸರಿಸುವುದಿಲ್ಲ. ಮೂಕಪ್ರಾಣಿಗಳಿಗಾದರೂ ಮನುಷ್ಯನ ಭಾವನೆಗಳು ಅರ್ಥವಾಗುತ್ತವೆ. ಆದರೆ ಅದೇ ಮಾನವ ಇತರರಿಗೆ ನೋವಾಗುವುದೇನೋ ಎಂದು ಯೋಚಿಸದೆ ತನ್ನಿಚ್ಛೆ ಬಂದಂತೆ ನುಡಿಯುವನು. ಮಾನವ ನಾಯಿಗಿಂತಲೂ ಕಡೆ ಎನ್ನಲಾಗಿದೆ.

೭೩

ನಾರಿ ಮನೆ ಕಳ್ಳಿಯಾದೊಡೆ
ಕೇರಿಯ ತಳವಾರ ಚೋರನಾದೊಡೆ ಮತ್ತಾ
ಭಾರಿಕ ಕೊಂಡೆಯನಾದೊಡೆ
ಊರೇಳಿಗೆಯಾಗದಿಹುದು ಚೂಡಾರತ್ನಾ

ನಾರಿ ಮನೆ ಕಳ್ಳಿಯಾದೊಡೆ=ಮನೆಯಲ್ಲಿ ಹೆಣ್ಣೇ ಕಳ್ಳಿಯಾದರೆ; ಕೇರಿಯ ತಳವಾರ ಚೋರನಾದೊಡೆ=ಕೇರಿಯ ತಳವಾರನೇ ಕಳ್ಳನಾದರೆ; ಮತ್ತೆ+ಆಭಾರಿಕ=ಮತ್ತೆ ಕೃತಜ್ಞನಾಗಿರಬೇಕಾದವ; ಕೊಂಡೆಯನ್+ಆದೊಡೆ= ಚಾಡಿಕೋರನಾದರೆ; ಊರ+ಏಳಿಗೆಯು+ಆಗದೆ+ಇಹುದು=ಊರಿನ ಏಳಿಗೆ ಆಗುವುದಿಲ್ಲ.

ಮನೆಯಲ್ಲಿಯ ಹೆಣ್ಣು ಅಥವಾ ಹೆಂಡತಿಯೇ ಕಳ್ಳಿಯಾದರೆ, ಕೇರಿಯ ತಳವಾರ ಚೋರನಾದೊಡೆ, ಕೃತಜ್ಞನಾಗಿರಬೇಕಾದವ ಚಾಡಿ ಹೇಳುವವನಾದರೆ, ಊರಿನ ಏಳಿಗೆ ಆಗುವುದಿಲ್ಲ.

'ಹೆಣ್ಣು ಸಂಸಾರದ ಕಣ್ಣು' ಎಂಬ ಮಾತಿದೆ. ಸಂಸಾರವನ್ನು ಸರಿದೂಗಿಸಿ ಕೊಂಡು ನಡೆಯಬೇಕಾದವಳೇ ಕಳ್ಳಿಯಾದರೆ ಸಂಸಾರ ನಡೆಯುವುದಾದರೂ ಹೇಗೆ? ಊರನ್ನು ಕಾಯುವ ತಳವಾರ ಚೋರನಾದರೆ ಆ ಊರಿನ ವ್ಯವಹಾರ ನಡೆಯುವು ದಾದರೂ ಹೇಗೆ? ತಳವಾರ ಊರನ್ನು ರಕ್ಷಿಸಬೇಕಾದವನು. ರಕ್ಷಕನೇ ಭಕ್ಷಕನಾದರೆ, ಕೃತಜ್ಞತೆಯಿಂದ ಇರಬೇಕಾದವನು ಚಾಡಿಕೋರನಾದರೆ ಆ ಊರಿನ ಏಳಿಗೆ ಆಗಲು ಸಾಧ್ಯವೇ ಇಲ್ಲ ಎಂದು ಶತಕಕಾರ ಹೇಳುತ್ತಿದ್ದಾನೆ.

೭೪

**ನಾರಿಯ ಮನಮಂ ಕವಿತಾ**
**ಸಾರತೆಯಂ ದಿವ್ಯತಪಸಿಯಂ ಸಜ್ಜನರಂ**
**ಭಾರಿಯಜಾಣರುಬಲ್ಲರು**
**ಊರುಗರೇಂಬಲ್ಲರೆಂದ ಚೂಡಾರತ್ನಾ**

**ನಾರಿಯ ಮನಮಂ=ನಾರಿಯ ಮನಸ್ಸನ್ನು; ಕವಿತಾ ಸಾರತೆಯಂ=ಕವಿತೆಯ ಸಾರವನ್ನು; ದಿವ್ಯ ತಪಸಿಯಂ=ದಿವ್ಯ ತಪಸ್ವಿಯನ್ನು; ಸಜ್ಜನರಂ=ಸಜ್ಜನರನ್ನು; ಭಾರಿಯ ಜಾಣರು=ತುಂಬಾ ಜಾಣರು; ಬಲ್ಲರು; ಊರುಗಂ+ಏಂ=ಸಾಮಾನ್ಯ ಜನರೇನು; ಬಲ್ಲರು+ಎಂದ=ಬಲ್ಲರೆಂದ.**

**ಸ್ತ್ರೀಯರ ಮನಸ್ಸನ್ನು, ಕವಿತೆಯ ಸಾರ ಅಥವಾ ಮಹತ್ತ್ವವನ್ನು ದಿವ್ಯ ತಪಸ್ವಿಯನ್ನು, ಸಜ್ಜನರನ್ನು ಕಡು ಜಾಣರಾದವರು ಮಾತ್ರ ಬಲ್ಲರು, ಸಾಮಾನ್ಯ ಜನರೇನು ಬಲ್ಲರು.**

**ಪ್ರಾಚೀನ ಕಾಲದಿಂದಲೂ ಸ್ತ್ರೀಗೆ ಅಂಟಿದ ಕಳಂಕವೊಂದಿದೆ; 'ಮೀನಿನ ಹೆಜ್ಜೆಯನ್ನೂ ಹೆಣ್ಣಿನ ಮನಸ್ಸನ್ನೂ ತಿಳಿಯಲು ಅಸಾಧ್ಯ' ಎಂಬ ಈ ಉಕ್ತಿಗೆ ಅನುಗುಣವಾಗಿ ಎಲ್ಲ ಕಾವ್ಯಗಳು ಅಥವಾ ಪುರುಷಪ್ರಧಾನ ಸಮಾಜ ಸಹಮತ**

**ವ್ಯಕ್ತಪಡಿಸುತ್ತಲೇ ಬಂದಿರುವುದು ಸರ್ವ ವಿದಿತ. ಆದರೆ ಪುರುಷನ ಯಾವುದೇ ಕೃತ್ಯವನ್ನೂ ಖಂಡಿಸುವ, ವ್ಯಾಖ್ಯಾನಿಸುವಗೋಜಿಗೆ ಹೋಗುವುದೇ ಇಲ್ಲ. ಇದು ಏಕಮುಖವಾದ ತೀರ್ಮಾನ. ಆದರೆ ಕಡುಜಾಣನಾದವ ಮಾತ್ರ ತಿಳಿಯಬಲ್ಲ ಎಂದಿದ್ದಾನೆ ಕವಿ. ಕಾವ್ಯದ ಸಾರವನ್ನು, ದಿವ್ಯ ತಪಸ್ವಿಗಳನ್ನು, ಸಜ್ಜನರನ್ನು, ಮೇಧಾವಿಯಾದವನು ಮಾತ್ರ ತಿಳಿಯಲುಸಾಧ್ಯ. 'ಲೋಕೋಭಿನ್ನರುಚಿಃ' ಎಂಬಂತೆ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಕವಿತೆ ಗ್ರಹಿಸುವುದುಂಟು.**

೭೫

ನಿರುಪಮ ಗುಣಿಯೆನಿಸಿದ ಸ
ತ್ಪುರುಷನ ರೂಪೆಂತುಟಾದಡಾತನೆ ಯೋಗ್ಯಂ
ಪರಿಮಳವನೀವ ಚಂದನ
ಗೊರಡುಂ ಮುರುಡಾದೊಡೇನು ಚೂಡಾರತ್ನಾ

ನಿರುಪಮ ಗುಣಿಯೆನಿಸಿದ=ಅತಿಶಯವಾದ ಅನನ್ಯ ಗುಣವಂತನೆನಿಸಿದ; ಸತ್ಪುರುಷನ; ರೂಪು+ಎಂತುಟಾದಡೆ+ಆತನೆ ಯೋಗ್ಯಂ=ರೂಪು ಹೇಗಿದ್ದರೇನು, ಆತನೇ ಯೋಗ್ಯನು; ಪರಿಮಳವನು+ಈವ=ಸುವಾಸನೆ ನೀಡುವ; ಚಂದನ+ ಕೊರಡುಂ ಮುರುಟು+ಆದಡೆ+ಏನು=ಗಂಧದ ಕೊರಡು ಡೊಂಕಾದರೇನು?

ಅತಿಶಯವಾದ, ಅನನ್ಯ ಗುಣವಂತನೆನಿಸಿದ ಸತ್ಪುರುಷನ ರೂಪು ಹೇಗಿದ್ದ ರೇನು, ಆತನೇ ಯೋಗ್ಯನು. ಸುವಾಸನೆ ನೀಡುವ ಚಂದನದ ಕೊರಡು ಡೊಂಕಾ ದರೇನು?

ವ್ಯಕ್ತಿಯ ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಗುಣಗಳು ಅತಿಮುಖ್ಯ. ರೂಪವಂತನಲ್ಲದಾತ ಸದ್ಗುಣಿಯಾಗಿದ್ದರೆ ಸಾಕು ಆತನೇ ಯೋಗ್ಯನು; ಇದನ್ನು ಸಮರ್ಥಿಸಲು ಗಂಧದ ಕೊರಡಿನ ಉಪಮೆ ನೀಡಲಾಗಿದೆ. ಕೊರಡು ಡೊಂಕಾದರೆ ಅದರಿಂದ ಹೊರಸೂಸುವ ಗಂಧಕ್ಕೇನೂ ಕುಂದಾಗುವುದಿಲ್ಲವಲ್ಲವೆ?

ಗುಣಕೆ ಮತ್ಸರವೆ' ಎಂಬ ಉಕ್ತಿಯಂತೆ ಸದ್ಗುಣಿಗಳು ಚಂದನ ತನ್ನಷ್ಟಕ್ಕೆ ಸೌರಭಸೂಸುವಂತೆ ತಮ್ಮ ಸದ್ಗುಣ ಸ್ವಭಾವದಿಂದಲೇ ಬಾಳುತ್ತಾರೆ.

೭೬

ನೀತಿಗಳು ಸಕಲಶಾಸ್ತ್ರ
ಖ್ಯಾತಿಗಳಱಿವುಳ್ಳರಸಿಕಬುಧಜನಮನಸಂ
ಪ್ರೀತಿಗಳು ದುಃಖತಿಮಿರ
ಜ್ಯೋತಿಗಳೆಂದೆನಿಸುತಿಹವು ಚೂಡಾರತ್ನಾ

ನೀತಿಗಳು ಸಕಲಶಾಸ್ತ್ರ ಖ್ಯಾತಿಗಳು=ನೀತಿಗಳು ಸಕಲಶಾಸ್ತ್ರಗಳನ್ನೊಳಗೊಂಡವೆಂಬ ಖ್ಯಾತಿಗಳಿಸಿವೆ; ಅಱಿವುಳ್ಳ ರಸಿಕ ಬುಧ ಜನ ಮನ=ಜ್ಞಾನವುಳ್ಳ ರಸಿಕರಾದ ವಿದ್ವಾಂಸರ ಮನಸ್ಸಿಗೆ; ಸಂಪ್ರೀತಿಗಳು=ಸಂತೋಷ ಉಂಟುಮಾಡುವಂಥವು; ದುಃಖತಿಮಿರ=ದುಃಖವೆಂಬ ಕತ್ತಲೆಗೆ; ಜ್ಯೋತಿಗಳು+ಎಂದು+ ಎನಿಸುತಿಹವು=ಜ್ಯೋತಿಗಳೆನಿಸುವುವು.

ನೀತಿಗಳೆಂಬವು ಸಕಲಶಾಸ್ತ್ರಗಳನ್ನೊಳಗೊಂಡ ಖ್ಯಾತಿಯುಳ್ಳಂಥವು ಎನಿಸಿವೆ. ಜ್ಞಾನವುಳ್ಳ ರಸಿಕ ಜನರ ಮನಸ್ಸಿಗೆ ಸಂತೋಷವುಂಟು ಮಾಡುವಂಥವು. ದುಃಖವೆಂಬ ಗಾಢಾಂಧಕಾರಕ್ಕೆ ಜ್ಯೋತಿಗಳೆನಿಸುತ್ತಿಹವು.

ನೀತಿಗಳು ಕೇವಲ ಬಾಯಿಮಾತಿನ ಉಕ್ತಿಗಳಲ್ಲ. ಇವು ಸಕಲಶಾಸ್ತ್ರಗಳಿಂದ ಕೂಡಿದ ವಿದ್ವತ್ತಿನ ಅರಿವಿನ ಅನುಭವದಿಂದ ಜನ್ಯವಾದವು ಎಂಬುದರಲ್ಲಿ ಸಂಶಯ ವಿಲ್ಲ. ಇವು ರಸಿಕಬುಧಜನಕ್ಕೆ ಸಂತೋಷ ನೀಡುವುವು. ಮಾನವರ ಬದುಕಿಗೆ ದಾರಿದೀಪಗಳು. ಏನೇ ಕಷ್ಟ-ದುಃಖ ಮುಂತಾದ ಸಂದರ್ಭಗಳಲ್ಲಿ ಸಾಂತ್ವನ ನೀಡಿ ಮನಸ್ಸಿಗೆ ಸಮಾಧಾನವುಂಟುಮಾಡುತ್ತವೆ. ಇಂತಹ ನೀತಿಗಳನ್ನು ಅನುಕರಿಸಿ ಅನೇಕರು ಉಜ್ಜ್ವಲವಾದ ಬದುಕನ್ನು ಕಟ್ಟಿಕೊಂಡ ಎಷ್ಟೋ ಸಂದರ್ಭಗಳು ನಮ್ಮ ಮುಂದಿವೆ.

೭೭

ನುಡಿದೆರಡಂ ನುಡಿವಂಗಂ
ಕೆಡುವುದು ಸಿರಿ ತೇಜವಳಿಗು ಸಂಪದ ತೊಲಗುಂ
ನುಡಿದಂತೆ ನಡೆವವನ ಸಲೆ
ಬಿಡದರಸುತ ಬಹಳು ಲಕ್ಷ್ಮಿ ಚೂಡಾರತ್ನಾ

ನುಡಿದ+ಎರಡಂ ನುಡಿವಂಗಂ=ಎರಡೆರಡನ್ನು ಮಾತನಾಡುವವನಿಗೆ; ಕೆಡುವುದು, ತೇಜಸ್ಸು ಅಳಿಯುವುದು, ಸಂಪದ=ಐಶ್ವರ್ಯ; ತೊಲಗುವುದು; ನುಡಿದಂತೆ ನಡೆಯುವವನಿಗೆ; ಸಲೆ=ಖಂಡಿತ; ಬಿಡದು+ಅರಸುತನ=ಅರಸುತನ ತಪ್ಪದೆ ಪ್ರಾಪ್ತವಾಗುತ್ತದೆ. ಬಹಳು ಲಕ್ಷ್ಮಿ=ಲಕ್ಷ್ಮಿ ತಾನಾಗಿಯೇ ಬರುವಳು.

ಮಾತಿನ ಮಹತ್ತ್ವದ ಬಗ್ಗೆ ಕವಿ ಹೇಳಿರುವ ತಿಳಿವಳಿಕೆ ಇದು. ಎರಡೆರಡು ರೀತಿ ಮಾತನಾಡಬಾರದು. ಹಾಗೇನಾದರೂ ಮಾಡಿದರೆ, ಅಂಥವನ ಸಿರಿಯೂ ತೇಜಸ್ಸೂ ಹಾಳಾಗುತ್ತದೆ. ಐಶ್ವರ್ಯ ತೊಲಗುವುದು. ನುಡಿದಂತೆ ನಡೆಯುವವನಿಗೆ ಖಂಡಿತವಾಗಿಯೂ ಅರಸುತನ ಪ್ರಾಪ್ತವಾಗಿ ಲಕ್ಷ್ಮಿ ತನಗೆ ತಾನೇ ಒಲಿದು ಬರುವಳು. ನುಡಿದಂತೆ ನಡೆದರೆ ಎಲ್ಲ ಬಗೆಯ ಶ್ರೇಯಸ್ಸೂ ಉಂಟಾಗುತ್ತದೆ ಎಂಬುದು ಇಲ್ಲಿಯ ಆಶಯವಾಗಿದೆ.

೭೮

ಪತಿಹಿತೆ ಸತಿ ತೊರೆದನೆಯತಿ
ಮತಿವಂತನೆ ಮಂತ್ರಿ ಯಿಚ್ಛೆಯಜೀವನೆ ಚದುರಂ
ಪಿತೃಮಾತೃಭಕ್ತನೇ ಸುತ
ಸತತಂ ರಕ್ಷಿಪನೆ ತಂದೆ ಚೂಡಾರತ್ನಾ

ಪತಿಹಿತೆ ಸತಿ ತೊರೆದನೆಯ್+ಅತಿ ಮತಿವಂತನ್= ಪತಿಯ ಹಿತವರಿತು ನಡೆವ ಸತಿಯಳ ಬಿಡದವನೆ ಅತಿ ಬುದ್ಧಿವಂತ; ಮಂತ್ರಿ ಇಚ್ಛೆಯಜೀವನೆ ಚದುರಂ=ಮಂತ್ರಿಯ ಇಚ್ಛೆಯನ್ನರಿತು ನಡೆಯುವವನೆ ಚತುರ; ಪಿತೃಮಾತೃ ಭಕ್ತನೆ; ಸುತ=ಮಗ; ಸತತ ರಕ್ಷಿಪನೆ=ಸದಾ ರಕ್ಷಿಸುವವನೆ; ತಂದೆ.

ಪತಿಯ ಹಿತವರಿತು ನಡೆವ ಸತಿಯನ್ನು ಬಿಡದವನೆ ಅತಿ ಬುದ್ಧಿವಂತ, ಮಂತ್ರಿಯ ಇಚ್ಛೆಯರಿತು ನಡೆಯುವವನೇ ಚತುರ, ತಂದೆ ತಾಯಿಯರನ್ನು ಪ್ರೀತಿಸುವವನೇ ಮಗ; ಸದಾಕಾಲ ರಕ್ಷಿಸುವವನೆ ತಂದೆ.

ವ್ಯಕ್ತಿಯ ಗುಣಸ್ವಭಾವಗಳ್ನು ಅರಿತು ಅದಕ್ಕಗನುಗುಣವಾಗಿ ನಡೆದು ಕೊಳ್ಳಬೇಕು. ಹಾಗಾದಾಗ ಮಾತ್ರ ಬದುಕು ಹಸನಾಗುತ್ತದೆ. ಪತಿಯ ಇಷ್ಟಾನಿಷ್ಟಗಳನ್ನು

ತಿಳಿದು ನಡೆಯುವ ಹೆಂಡತಿ, ಮಂತ್ರಿಯ ಇಚ್ಛೆಯರಿತು ನಡೆಯುವ, ಚತುರ ಅಧಿಕಾರಿ, ತಂದೆ ತಾಯಿಯರನ್ನು ಪ್ರೀತಿ, ಭಕ್ತಿಗಳಿಂದ ನೋಡಿಕೊಳ್ಳುವ ಮಗ, ಸದಾ ಕುಟುಂಬವನ್ನು, ಮಕ್ಕಳನ್ನು ಸಂರಕ್ಷಿಸುವ ತಂದೆ– ಇವರು ಇದ್ದಾಗ ಸಂತೋಷ, ನೆಮ್ಮದಿಗಳಿರುತ್ತವೆ. ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯಿಂದ, ಸಮರ್ಥವಾಗಿ ನಿರ್ವಹಿಸಿದರೆ ಎಲ್ಲವೂ ಸರಿಯಿರುತ್ತದೆ.

೭೯

ಪರಗೃಹವಾಸವೆ ಕಷ್ಟಂ
ಸಿರಿಯುಳ್ಳರ ಮನೆಯ ಹೆಣ್ಣ ತಹುದತಿಕಷ್ಟಂ
ಪರಸೇವೆಯಧಿಕ ಕಷ್ಟಂ
ಧರೆಯೊಳು ಬಡತನವೆ ಕಷ್ಟ ಚೂಡಾರತ್ನಾ

ಪರಗೃಹವಾಸವೆ ಕಷ್ಟಂ; ಸಿರಿಯುಳ್ಳವರ=ಶ್ರೀಮಂತರ; ಮನೆಯ ಹೆಣ್ಣ; ತಹುದು+ಅತಿ ಕಷ್ಟಂ=ತರುವುದು ಅತಿ ಕಷ್ಟ; ಪರಸೇವೆಯು+ಅಧಿಕ ಕಷ್ಟಂ; ಧರೆಯೊಳು=ಭೂಮಿಯಲ್ಲಿ; ಬಡತನವೆ ಕಷ್ಟ.

ಬೇರೆಯವರ ಮನೆಯಲ್ಲಿರುವುದು ಕಷ್ಟ; ಶ್ರೀಮಂತರ ಮನೆಯ ಹೆಣ್ಣನ್ನು ತರುವುದು ಅತಿ ಕಷ್ಟ; ಪರರ ಸೇವೆ ಮಾಡುವುದು ತುಂಬ ಕಷ್ಟ; ಭೂಮಿಯಲ್ಲಿ ಬಡತನವೆಂಬುದು ಕಷ್ಟ.

ಸಾಧಾರಣವಾಗಿ ಬೇರೆಯವರ ಮನೆಯಲ್ಲಿ ಒಂದು ಅಥವಾ ಎರಡು ದಿನ ಇರಬಹುದು. ದೀರ್ಘಕಾಲ ಇರುವುದು ಸರಿಯಲ್ಲ. ಅದರ ಪರಿಣಾಮ ಬೇರೆಯ ರೀತಿಯೇ ಇರುತ್ತದೆ. ಹಾಗೆಯೇ ಶ್ರೀಮಂತರ ಮನೆಯಿಂದ ಹೆಣ್ಣು ತರಬಾರದೆಂಬುದು ಕೂಡ ಸಮಾಜದಲ್ಲಿರುವ ನಂಬಿಕೆ. ಏಕೆಂದರೆ ಅವರಿಗೆ ಕಷ್ಟಗಳ ಅರಿವಿರುವುದಿಲ್ಲ. ಹಾಗಾಗಿ ಅತ್ತೆ ಮನೆಯಲ್ಲಿ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ಬೇರೆಯವರಿಗೆ ಸೇವೆ ಮಾಡುವುದು ಇನ್ನೂ ಕಷ್ಟ. ಒಟ್ಟಾರೆ ಬಡತನವೆಂಬುದು ಭೂಮಿಯಲ್ಲಿ ಕಡುಕಷ್ಟ ಎನ್ನುವುದು ಅನುಭವ ಜನ್ಯವಾದ, ಸತ್ಯವಾದ ಮಾತು.

೮೦

ಪುಲಿದೊವಲುಂ ಫಣಿಶಿರದೊಳ್
ನೆಲಸಿದ ಮಾಣಿಕ್ಯವಧಿಕ ಲೋಭಿಯ ಧನವುಂ
ತ್ವರಿತಗತಿಯಿಂದ ಬಾರವು
ಕೊಲಲಾರ್ಪಂಗಲ್ಲದಿಲ್ಲ ಚೂಡಾರತ್ನಾ

ಪುಲಿದೊವಲುಂ=ಹುಲಿಯ ತೊಗಲು; ಫಣಿ=ಹಾವಿನ; ಶಿರದೊಳ್ =ಹೆಡೆಯೊಳಗೆ; ನೆಲಸಿದ=ಇರುವ; ಮಾಣಿಕ್ಯವು; ಅಧಿಕ ಲೋಭಿಯ ಧನವುಂ=ಅತಿ ಜಿಪುಣನ ಹಣವು; ತ್ವರಿತ ಗತಿಯಿಂದ=ವೇಗವಾಗಿ; ಬಾರವು=ಬರುವುದಿಲ್ಲ; ಕೊಲಲು+ಆರ್ಪಂಗೆ+ಅಲ್ಲದೆ+ಇಲ್ಲ=ಕೊಲ್ಲಲಾದವನಿಗೆ ಮಾತ್ರ ಸಿಗದೆ ಇರುವುದಿಲ್ಲ.

ಹುಲಿಯ ಚರ್ಮ, ಹಾವಿನ ಹೆಡೆಯಲ್ಲಿರುವ ಮಾಣಿಕ್ಯ, ಲೋಭಿಯಿಂದ ಧನ ಪಡೆಯುವುದು ಬಹಳ ಕಷ್ಟ. ಕೊಂದರೆ ಮಾತ್ರ ಅಂಥವನ್ನು ಪಡೆಯಬಹುದು.

ಪ್ರಪಂಚದಲ್ಲಿ ಕೆಲವನ್ನು ಪಡೆಯುವುದು ಬಹಳ ಕಷ್ಟ. ಹುಲಿಯ ತೊಗಲು ಹಾವಿನ ಹೆಡೆಯ ಮಾಣಿಕ್ಯದಂಥವನ್ನು ಪಡೆಯಲು ಅವನ್ನು ಕೊಂದರೆ ಮಾತ್ರ ಪಡೆಯಲು ಸಾಧ್ಯ. ಹಾಗಲ್ಲದೆ ನೇರವಾಗಿ ಶೌರ್ಯ ಪ್ರದರ್ಶಿಸಿ ಪಡೆಯಲು ಹೋದರೆ, ಪ್ರಾಣಾಪಾಯ ತಪ್ಪಿದ್ದಲ್ಲ. ಶತಕಕಾರರು ಜಿಪುಣನ ಬಗೆಗೆ ಕೆಲವು ಪದ್ಯಗಳನ್ನು ಬರೆದು, ಅವನ ಅತಿಯಾದ ಲೋಭವನ್ನು ತಿಳಿಸುತ್ತಾರೆ.

೮೧

ಪೊನ್ನಂದಣವುಂ ಸತ್ತಿಗೆ
ರನ್ನದ ಹಾರಂಗಳೊರೆವ ಚಾಮರವಿದಿರೊಳ್
ಚನ್ನೆಯರಿಪ್ಪಾ ಸೌಖ್ಯಂ
ಮುನ್ನಂ ನೋನದರಿಗುಂಟೆ ಚೂಡಾರತ್ನಾ

ಪೊನ್ನ+ದಣವುಂ=ಚಿನ್ನದ ಪಲ್ಲಕ್ಕಿ; ಸತ್ತಿಗೆ=ಛತ್ರಿ; ರನ್ನದ ಹಾರಂಗಳೊರೆವ ಚಾಮರವು ಇದಿರೊಳು ಸುಂದರಿಯರು=ರತ್ನದ ಹಾರಗಳು, ಬೀಸುವ ಚಾಮರಗಳು,

ಎದುರಿನಲ್ಲಿ ಸುಂದರಿಯರು; ಇರುವ ಸುಖ; ಮುನ್ನಂ=ಹಿಂದೆ; ನೋನದ+ವರಿಗೆ+ ಉಂಟೆ=ಹಿಂದೆ ವ್ರತ ಮಾಡುವವರಿಗೆ ಇರುತ್ತದೆಯೇ?

ಚಿನ್ನದ ಪಲ್ಲಕ್ಕಿ, ಛತ್ರಿ ಚಾಮರ, ರನ್ನದ ಹಾರಗಳು, ಎದುರಿನಲ್ಲಿ ಸುಂದರಿಯರು ಇರುವ ಸುಖ-ಹಿಂದೆ ವ್ರತ ಮಾಡದವರಿಗೆ ಇರುತ್ತದೆಯೇ?

ಇಲ್ಲಿ ರಾಜ ವೈಭೋಗದ ಬಗೆಗೆ ಬಣ್ಣಿಸಲಾಗಿದೆ. ಹಿಂದೆ ವ್ರತ ಮಾಡಿ ಪಡೆದ ಪುಣ್ಯ ಫಲದಿಂದ ಮಾತ್ರ ರಾಜರಾಗಲು ಸಾಧ್ಯ. ವ್ರತ ಮಾಡದವರಿಗೆ ಅದು ಲಭ್ಯವಾಗುವುದಿಲ್ಲ ಎನ್ನಲಾಗಿದೆ.

೮೨

ಫಲಮಂ ಪುಷ್ಪಮನಂಬುಮ
ನೆಲರಂ ವೀಳೆಯಮನೆಸೆವ ಕಲಸೋಗರಮಂ
ನಲಿದಿದಿರಲೀಯಲರಿಯದೆ
ಸಲೆ ಭುಂಜಿಪನೆಗ್ಗನಿಳೆಗೆ ಚೂಡಾರತ್ನಾ

ಫಲಮಂ=ಹಣ್ಣನ್ನು; ಪುಷ್ಪಮಂ+ಅಂಬುಮನ್+ಎಲರಂ=ಹೂವು, ನೀರು, ಗಾಳಿಯನ್ನು; ವೀಳೆಯಮನ್+ಎಸೆವ ಕಲಸೋಗರಮಂ=ವೀಳೆಯವನ್ನೂ ಶೋಭಿಸುವ (ನೈವೇದ್ಯ) ಕಲಸನ್ನವನ್ನು; ನಲಿದು+ಇದಿರಲಿ+ಈಯಲು+ಅರಿಯದೆ= ಪ್ರೀತಿಯಿಂದ ಎದುರಿನಲ್ಲಿ ತಂದುಕೊಡಲು; ತಿಳಿಯದವರು ಸಲೆ=ಚೆನ್ನಾಗಿ; ಭುಂಜಿಪನ್ +ಎಗ್ಗನ್+ಇಳೆಗೆ=ತಿನ್ನುವವನು ಭೂಮಿಯಲ್ಲಿ ದಡ್ಡನು.

ಹಣ್ಣು ಹೂವು ನೀರು ಗಾಳಿ ವೀಳೆಯ ಹಾಗೂ ನೈವೇದ್ಯವನ್ನು ಪ್ರೀತಿಯಿಂದ ನೀಡಿದಾಗ ಎದುರಿನಲ್ಲಿದ್ದವರಿಗೆ ಕೊಟ್ಟು ತಿನ್ನಲು ಅರಿಯದವ ಭೂಮಿ ಯಲ್ಲಿ ದಡ್ಡನೇ ಸರಿ.

ಪದ್ಯದ ಮೊದಲ ಎರಡು ಸಾಲುಗಳು ಭಗವದ್ಗೀತೆಯ

'ಪತ್ರಂ ಪುಷ್ಪಂಫಲಂತೋಯಂ ಯೋ ಮೇ ಭಕ್ತ್ಯಾಪ್ರಯಚ್ಛತಿ
ತದಹಂ ಭಕ್ತ್ಯುಪಹೃತಮ...' (9-26)

ಶ್ಲೋಕವನ್ನು ನೆನಪಿಗೆ ತರುತ್ತದೆ. ಆದರೆ ಉಳಿದೆರಡು ಸಾಲುಗಳು ಬೇರೆಯದೇ ಅರ್ಥ ನೀಡುವುದರಿಂದ ಅನ್ವಯ ಕ್ಲಿಷ್ಟತೆ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಹಾಗಾಗಿ ಇದು ಪ್ರಕ್ಷಿಪ್ತವಾಗಿರಬಹುದು. ಎದುರಿಗಿದ್ದವರಿಗೆ ಕೊಟ್ಟು ತಿನ್ನಬೇಕೆಂದು ಅರಿಯದವ ದಡ್ಡ ಎಂದು ಹೇಳುತ್ತಲೇ ಹಂಚಿ ತಿನ್ನುವ ಸದಾಶಯವನ್ನು ವ್ಯಕ್ತಪಡಿಸಲಾಗಿದೆ.

೮೩

ಬರೆಯದ ಕೈ ಬಂಧುಗಳಂ
ಪೊರೆಯದ ಕೈ ಸುತರನೆತ್ತಿಕೊಂಡಾಡದಕೈ
ಕರೆದು ಬುಧರ್ಗೀಯದ ಕೈ
ಮರಗೈ ಮರುಳ್ಕೈಗಳಂತೆ ಚೂಡಾರತ್ನಾ

ಬರೆಯದ ಕೈ=ಬರೆಯದೆ ಇರುವ ಕೈ; ಬಂಧುಗಳಂ=ಬಂಧುಗಳನ್ನು; ಪೊರೆಯದ ಕೈ=ಕಾಪಾಡದ ಕೈ; ಸುತರನೆತ್ತಿ ಕೊಂಡಾಡದ ಕೈ=ಮಕ್ಕಳನ್ನು ಎತ್ತಿ ಮುದ್ದಾಡದ ಕೈ; ಕರೆದು=ಆಹ್ವಾನಿಸಿ; ಬುಧರ್ಗೆ ಈಯದ ಕೈ=ವಿದ್ವಾಂಸರಿಗೆ ನೀಡದ ಕೈ; ಮರಗೈ=ಮರದ ಕೈ; ಮರುಳ್+ಕೈಗಳಂತೆ=ದೈವದ ಕೈಗಳಂತೆ.

ಬರೆಯದೆ ಇರುವ ಕೈ, ಬಂಧುಗಳನ್ನು ಆದರಿಸದೆ ಇರುವ ಕಾಪಾಡದೆ ಇರುವ ಕೈ, ಮಕ್ಕಳನ್ನು ಎತ್ತಿಕೊಂಡು ಮುದ್ದಾಡದ ಕೈ, ವಿದ್ವಾಂಸರನ್ನು ಕರೆದು ಅವರನ್ನು ಪ್ರೋತ್ಸಾಹಿಸಿ ಏನನ್ನಾದರೂ ನೀಡದೆ ಇರುವ ಕೈ, ಮರದ ಕೈ, ದೆವ್ವಭೂತಗಳ ಕೈಗಳಿದ್ದಂತೆ.

ಮಾನವನ ಬದುಕಿನಲ್ಲಿ ಕೈಗೆ ಇರುವ ಮಹತ್ತ್ವ ಸತ್ಕಾರ್ಯಗಳನ್ನು ಮಾಡಲು ಮಾತ್ರ. ಬರೆಯದೆ ಇರುವ ಕೈ, ಮಕ್ಕಳನ್ನು ಎತ್ತಿ ಮುದ್ದಾಡದ ಕೈ, ಬಂಧುಗಳನ್ನು ಆದರಿಸದ ಕೈ, ಬುಧಜನರನ್ನು ಕರೆದು ಸತ್ಕರಿಸಿ, ಅವರನ್ನು ಪ್ರೋತ್ಸಾಹಿಸದ ಕೈ ಇಂತಹ ಕೈ ಇದ್ದೂ ಇಲ್ಲದಂತೆ. ಮರದಂತೆ ಇರುವ ಕೈ, ಭೂತ ಪ್ರೇತಗಳ ಕೈಗಳು ನಿಷ್ಪ್ರಯೋಜನವಾದಂಥವು ಎಂಬುದನ್ನು ಹೇಳಿದ್ದಾನೆ.

೮೪

ಬಲ್ಲಿದರುಳ್ಳೆಡೆ ವಿದ್ಯೆಗ
ಳೆಲ್ಲಂ ಪಲ್ಲವಿಸುತಿರ್ಕುವೆಂತೆನೆ ಪೇಳ್ವೆಂ
ಸಲ್ಲಲಿತ ಸೌಖ್ಯಲತೆಯುಂ
ಪಲ್ಲವಿಸುವ ತೆರದಿಂದಲೆ ಚೂಡಾರತ್ನಾ

ಬಲ್ಲಿದರು+ಉಳ್ಳ+ಎಡೆ=ತಿಳಿದವರು ಇರುವ ಕಡೆ; ವಿದ್ಯೆಗಳು+ಎಲ್ಲಂ= ವಿದ್ಯೆಗಳೆಲ್ಲವೂ; ಪಲ್ಲವಿಸುತ+ಇರ್ಕುವು+ ಎಂತು+ಎನೆ=ಪಲ್ಲವಿಸುವುವು, ಹೇಗೆಂದರೆ; ಪೇಳ್ವೆಂ=ಹೇಳುವೆನು; ಸಲ್ಲಲಿತ=ಕೋಮಲವಾದ; ಸೌಖ್ಯಲತೆಯುಂ=ಸೌಖ್ಯಲತೆಯೂ; ಪಲ್ಲವಿಸುವ=ಚಿಗುರುವ; ತೆರದಿಂದಲೆ=ರೀತಿಯಲ್ಲೆ.

ಜ್ಞಾನಿಗಳು ಇರುವ ಕಡೆ ವಿದ್ಯೆಗಳೆಲ್ಲವೂ ಪಲ್ಲವಿಸುವುವು. ಅದು ಹೇಗೆಂದರೆ, ಹೇಳುವೆನು ಕೇಳು. ಕೋಮಲವಾದ ಸೌಖ್ಯಲತೆಯೂ ಪಲ್ಲವಿಸುವ ರೀತಿಯಲ್ಲೇ (ವಿದ್ಯೆಗಳು ಪಲ್ಲವಿಸುತ್ತವೆ)

ತಿಳಿವಳಿಕೆ ಇರುವವರಲ್ಲಿ ಮಾತ್ರ ವಿದ್ಯೆಗಳು ಪಲ್ಲವಿಸುತ್ತವೆ. ಇಲ್ಲಿ ಸೌಖ್ಯವನ್ನು ಲತೆಗೆ ಹೋಲಿಸಲಾಗಿದೆ. ಸುಖವೆಂಬುದು ಸೂಕ್ಷ್ಮವೂ ಸುಕೋಮಲವೂ ಆಗಿರುತ್ತದೆಂಬ ಭಾವ. ಕೋಮಲವಾದ ಸೌಖ್ಯಲತೆ ಪಲ್ಲವಿಸುವಂತೆಯೇ ವಿದ್ಯೆಯೂ ಪಲ್ಲವಿಸುತ್ತದೆ.

೮೫

ಭಾವಿಸೆ ಚಂದ್ರಾನಲನಿಂ
ಬೇವುದರಿಂ ಪ್ರಿಯರಸಂಗದಿಂದಗಲ್ವುದರಿಂ
ಭಾವಕಿ ವಿಯೋಗದಿಂದಂ
ಸಾವು ಕರಸೌಖ್ಯ ಸುಕವಿ ಚೂಡಾರತ್ನಾ

ಸುಕವಿ! ಭಾವಿಸೆ=ಭಾವಿಸಲು; ಚಂದ್ರಾನಲನಿಂ=ಚಂದ್ರಕಿರಣ ಅಥವಾ ಬೆಳದಿಂಗಳಿನಿಂದಾದ; ಬೇವುದರಿಂ=ಬೇಯುವುದರಿಂದ; ಪ್ರಿಯರ=ಪ್ರೀತಿಪಾತ್ರ ರಾದವರ; ಸಂಗದಿಂದ+ಅಗಲ್ವುದರಿಂ=ಸಂಗದಿಂದ ಅಗಲುವುದರಿಂದ; ಭಾವಕಿ

ವಿಯೋಗದಿಂದಂ= ಸುಂದರಿಯ ವಿಯೋಗಕ್ಕಿಂತ, ಸಾವು ಕರಸೌಖ್ಯ =ಸಾವೇ ಸುಖವಾದುದು.

ತಮಗೆ ಪ್ರೀತಿಪಾತ್ರರಾದವರ ವಿಯೋಗ, ಅವರನ್ನು ಅಗಲುವುದು, ಬೆಳದಿಂಗಳಿನಿಂದ ಬೇಯುವುದು, ಸುಂದರಿಯ ಅಗಲುವಿಕೆ– ಇದಕ್ಕಿಂತ ಸಾವೇ ಸುಖ ಎಂದರ್ಥ.

ಪ್ರೀತಿಪಾತ್ರರಾದವರ ವಿಯೋಗ, ಅವರ ಅಗಲುವಿಕೆ, ಸುಂದರಿಯ ವಿಯೋಗ–ಇಂಥ ಸನ್ನಿವೇಶದಲ್ಲಿ ಬೆಳದಿಂಗಳು ಕೂಡ ಬಿಸಿಲಾಗಿ ಪರಿಣಮಿಸಿ ಅವರನ್ನು ಬೇಯುವಂತೆ ಮಾಡುತ್ತದೆ ಎಂದಿದ್ದಾನೆ ಕವಿ. ಇಂಥ ನೋವನ್ನು ಅನುಭವಿಸುವುದಕ್ಕಿಂತ ಪ್ರಾಣ ಬಿಡುವುದೇ ಮೇಲು ಎನ್ನಲಾಗಿದೆ.

೮೬

ಭೂತಿಯೊಳು ರಸವನೊಪ್ಪುವ
ಕೇತಕಿಯೊಳು ಫಲವನೋತ ಸತಿಯೊಳು ರೂಪಂ
ಗೀತದೊಳು ಮಾತನರಸುವ
ದೇತರ ಸಾಹಿತ್ಯ ಸುಜನ ಚೂಡಾರತ್ನಾ

ಭೂತಿಯೊಳು=ಬೂದಿಯಲ್ಲಿ; ರಸವನು+ಒಪ್ಪುವ=ರಸವಿದೆಯೆಂದು ಒಪ್ಪು ವುದು; ಕೇತಕಿಯೊಳು ಫಲವನು; ಕೇದಗೆಯೊಳು ಫಲವನ್ನು ಅಪೇಕ್ಷಿಸುವ; ಓತ= ಓದಿದ; ಸತಿಯೊಳು ರೂಪಂ= ವಿದ್ಯಾವಂತಳಾದ ಸತಿಯಲ್ಲಿ ರೂಪನ್ನು; ಗೀತದೊಳು ಮಾತನು+ಅರಸುವದು+ಏತರ=ಸಂಗೀತದಲ್ಲಿ ಮಾತನ್ನು ಹುಡುಕುವುದು ಯಾವ ಸಾಹಿತ್ಯ; ಸುಜನ!.

ವಿಬೂದಿಯಲ್ಲಿ ರಸವಿದೆಯೆಂದು ಒಪ್ಪುವುದು, ಕೇದಗೆಯಲ್ಲಿ ಫಲವನ್ನು ಅಪೇಕ್ಷಿಸುವುದು, ವಿದ್ಯಾವಂತಳಾದ ಸತಿಯಲ್ಲಿ ರೂಪನ್ನು ಅರಸುವುದು. ಸಂಗೀತದಲ್ಲಿ ಮಾತನ್ನು ಹುಡುಕುವುದು ಯಾವ ಸಾಹಿತ್ಯ.

ಸಾಹಿತ್ಯವೆಂಬುದು ಸಹಿತವಾಗಿರಬೇಕು. ಹಿತವನ್ನುಂಟು ಮಾಡುವುದೇ ಸಾಹಿತ್ಯವಾಗಬೇಕು. ಇದನ್ನು ಕೆಲವು ಉಪಮೆಗಳ ಮೂಲಕ ಹೇಳಿದ್ದಾನೆ ಕವಿ.

ಬೂದಿಯಲ್ಲಿ ರಸವನ್ನು, ಕೇದಗೆಯಲ್ಲಿ ಫಲವನ್ನು, ವಿದ್ಯಾವಂತಳಾದ ಸತಿಯಲ್ಲಿ ರೂಪವನ್ನು, ಸಂಗೀತದಲ್ಲಿ ಮಾತನ್ನು ನಿರೀಕ್ಷಿಸಬಾರದು. ಅಸಾಧ್ಯವಾದುದನ್ನು ಅಪೇಕ್ಷಿಸುವುದು ಸರಿಯಲ್ಲ ಎಂದು ಹೇಳಲಾಗಿದೆ. ವಿದ್ಯಾವಂತಳಾದ ಸತಿಯಲ್ಲಿ ಗುಣವನ್ನು ನೋಡಬೇಕೇ ಹೊರತು ರೂಪವನ್ನಲ್ಲ. ಸಂಗೀತದಲ್ಲಿ ಧಾತು ಮುಖ್ಯವೇ ಹೊರತು ಮಾತಲ್ಲ ಎಂದಿದ್ದಾನೆ ಕವಿ. ಸಂಗೀತ ನಾದ, ಲಯ, ಶ್ರುತಿಬದ್ಧವಾಗಿರಬೇಕು. ಧಾತು ಮಾತುಗಳೆರಡನ್ನೂ ಒಳಗೊಂಡಿರಬೇಕಲ್ಲವೇ? ಈ ಕವಿ ಮಾತು ಮುಖ್ಯವಲ್ಲ ಎಂದಿರುವುದು ಸಮಂಜಸವಲ್ಲ.

೮೭

ಮಕ್ಕಳಿಗೆ ತಂದೆ ಬಾಲ್ಯದೊ
ಳಕ್ಕರವಿದ್ಯೆಗಳನಜ಼ಿಪದಿರ್ದೊಡೆ ಕೊಂದಂ
ಲಕ್ಕ ಧನಮಿರಲು ಕೆಡುಗುಂ
ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನಾ

ಮಕ್ಕಳಿಗೆ ತಂದೆ ಬಾಲ್ಯದೊಳು=ಮಕ್ಕಳಿಗೆ ತಂದೆ ಬಾಲ್ಯದಲ್ಲಿ; ಅಕ್ಕರ ವಿದ್ಯೆಗಳನು+ಅಜ಼ಿಪದೆ+ಇರ್ದೊಡೆ=ಅಕ್ಷರದ ಮೂಲಕ ವಿದ್ಯೆಗಳನ್ನು ಅಥವಾ ನಾಶವಿಲ್ಲದ ವಿದ್ಯೆಗಳನ್ನು ಕಲಿಸದಿದ್ದರೆ; ಕೊಂದಂ=ಕೊಂದಂತೆ; ಲಕ್ಕ ಧನಮಿರಲು =ಲಕ್ಷ ಧನವಿದ್ದರೂ; ಕೆಡುಗುಂ=ವ್ಯರ್ಥ; ಚಿಕ್ಕಂದಿನ ವಿದ್ಯೆ=ಬಾಲ್ಯದಲ್ಲಿ ಕಲಿತ ವಿದ್ಯೆ; ಪೊರೆಗು=ಕಾಪಾಡುವುದು.

ಮಕ್ಕಳಿಗೆ ತಂದೆ ಬಾಲ್ಯದಲ್ಲಿ ಅಕ್ಷರಾಭ್ಯಾಸ ಮಾಡಿ ನಾಶವಾಗದ ವಿದ್ಯೆಗಳನ್ನು ಕಲಿಸದಿದ್ದರೆ ಮಕ್ಕಳನ್ನು ಕೊಂದಂತೆಯೇ ಸರಿ. ಇಂಥವನ ಬಳಿ ಲಕ್ಷ ಧನವಿದ್ದರೂ ಅದು ವ್ಯರ್ಥ. ಏಕೆಂದರೆ ಮಕ್ಕಳು ಬಾಲ್ಯದಲ್ಲಿ ಕಲಿತ ವಿದ್ಯೆ ಮುಂದೆಯೂ ಅವರನ್ನು ಕಾಪಾಡುವುದು.

'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು' ಎಂಬ ಮಾತು ಪ್ರಚಲಿತದಲ್ಲಿದೆ. ಪಿತೃಪ್ರಧಾನ ವ್ಯವಸ್ಥೆಯಿರುವ ಸಮಾಜದಲ್ಲಿ ತಂದೆಗೆ ಆದ್ಯತೆ. ಹಾಗಾಗಿ ತಂದೆ ಕೂಡ ಮಕ್ಕಳನ್ನು ತಿದ್ದಿತೀಡಿ ಬುದ್ಧಿ ಕಲಿಸಲೇ ಬೇಕು

ಎಂಬ ವಿಚಾರವನ್ನು ಶತಕಕಾರ ಪ್ರಸ್ತುತಪಡಿಸಿದ್ದಾನೆ. ಇದೆಲ್ಲ ಏನೇ ಇದ್ದರೂ ಮಕ್ಕಳಿಗೆ ತಾಯಿ ಕಲಿಸುವಷ್ಟು ಬೇರೆ ಯಾರೂ ಕಲಿಸಲು ಸಾಧ್ಯವಿಲ್ಲ. ಮಕ್ಕಳಿಗೆ ತಾಯಿಯ ಜತೆ ಇರುವ ಅನುಬಂಧವೇ ಬೇರೆ. ಅದನ್ನು ಅಕ್ಷರಗಳಲ್ಲಿ ಹಿಡಿದಿಡಲು ಕಷ್ಟಸಾಧ್ಯ.

ಮಗುವಿನ ತಂದೆ ಲಕ್ಷಲಕ್ಷವುಳ್ಳಧನಿಕನಾಗಿದ್ದರೂ ಅದೆಲ್ಲ ವ್ಯರ್ಥವೇ. ಆತನ ಮಗು ವಿದ್ಯೆಯನ್ನು ಕಲಿಯದಿದ್ದರೆ ಆ ಹಣದಿಂದ ಏನೂ ಪ್ರಯೋಜನ ವಿಲ್ಲ. ವಿದ್ಯಾವಂತ ಮಕ್ಕಳು ಜೀವನದಲ್ಲಿ ಏನನ್ನಾದರೂ ಸಾಧಿಸಬಲ್ಲರು. ಚಿಕ್ಕಂದಿನಲ್ಲಿ ಪಡೆದ ವಿದ್ಯೆ ಜೀವನದಲ್ಲಿನಿರಂತರವಾಗಿ ಒಂದಿಲ್ಲೊಂದು ಸಂದರ್ಭ ದಲ್ಲಿ ಪ್ರಯೋಜನಕ್ಕೆ ಬರುತ್ತದೆ ಎಂದು ವಿದ್ಯೆಯ ಮಹತ್ತ್ವವನ್ನುಕುರಿತು ಹೇಳಿರುವ ಪದ್ಯವಿದು.

೮೮

ಮಜ್ಜಿಗೆಯಿಲ್ಲದ ಊಟಂ
ಸಜ್ಜನ ಸತ್ಪಾತ್ರವರಿತು ಕೊಡದಿಹ ದಾನಂ
ದುರ್ಜನರೊಡನೆ ಸಮೇಳಂ
ಹೆಜ್ಜೆಗೆ ಹರಳೊತ್ತಿದಂತೆ ಚೂಡಾರತ್ನಾ

ಮಜ್ಜಿಗೆಯಿಲ್ಲದ ಊಟ; ಸಜ್ಜನ ಸತ್ಪಾತ್ರವ+ಅರಿದು=ಸಜ್ಜನವಾದ ಸತ್ಪಾತ್ರ ನನ್ನು ತಿಳಿದು; ಕೊಡದಿಹ ದಾನಂ=ಕೊಡದ ದಾನ; ದುರ್ಜನರೊಡನೆ ಸಮೇಳಂ= ದುರ್ಜನರ ಸಹವಾಸ; ಹೆಜ್ಜೆಗೆ ಹರಳು+ಒತ್ತಿದಂತೆ=ಪಾದಕ್ಕೆ ಹರಳು ಒತ್ತಿದಂತೆ.

ಮಜ್ಜಿಗೆಯಿಲ್ಲದ ಊಟ, ಸಜ್ಜನನಾದ ಸತ್ಪಾತ್ರ ಯಾರು ಎಂಬುದನ್ನು ಅರಿತು ಕೊಡದ ದಾನ, ದುರ್ಜನರ ಸಹವಾಸ- ಇವು ಪಾದಕ್ಕೆ ಹರಳು ಒತ್ತಿದಂತೆ.

ಭಾರತೀಯ ಆಹಾರ ಪದ್ಧತಿಯಲ್ಲಿ ಮಜ್ಜಿಗೆಗೆ ಮಹತ್ತ್ವದ ಪಾತ್ರವಿದೆ. ಊಟವಾದ ಮೇಲೆ ಮಜ್ಜಿಗೆ ಕುಡಿದರೆ ಹುಳಿತೇಗು, ಆಮ್ಲಪಿತ್ತ ದೋಷಗಳು ಪರಿಹಾರವಾಗುವುದು. ಇದು ವೈಜ್ಞಾನಿಕವಾಗಿಯೂ ಸಾಬೀತಾಗಿರುವ ವಿಚಾರ. ಮಜ್ಜಿಗೆಯಿಲ್ಲದ ಊಟ ಊಟವೇ ಅಲ್ಲ ಎಂಬುದು ನಮ್ಮವರೆಲ್ಲರ ಅಂಬೋಣ.

ದಾನ ಮಾಡಿದರೆ ಸಜ್ಜನನಾದ ಸತ್ಪಾತ್ರನಿಗೆ ಮಾಡಬೇಕು. ಅಪಾತ್ರದಾನ ಸರಿಯಲ್ಲ. ಕೊಟ್ಟದಾನ ಸದುಪಯೋಗವಾಗಬೇಕು. ದುರ್ಜನರ ಒಡನಾಟ ಅಥವಾ ಸಹವಾಸ ಸರಿಯಾದುದಲ್ಲ. 'ಸಹವಾಸದಿಂದ ಸನ್ಯಾಸಿ ಕೆಟ್ಟ' ಎಂಬುದೊಂದು ಹೇಳಿಕೆಯಿದೆ. ಸರಿಯಾದ ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ಎಂಬ ಮಾತೂ ಇದೆ. ದುರ್ಜನನಾದವನ ಸಂಗ, ಅಪಾತ್ರದಾನ, ಮಜ್ಜಿಗೆಯಿಲ್ಲದ ಊಟ ಇವು ಪಾದಕ್ಕೆ ಹರಳು ಒತ್ತಿದಂತೆ ತ್ರಾಸದಾಯಕ ಎನ್ನಲಾಗಿದೆ.

೮೯

ಮದ್ದಳೆಯ ಗತಿಗೆ ಜಘನಗ
ಳೆದ್ದಾಡಲು ನಗುತ ಕಂಡು ಲಾಲಿಪರಲ್ಲದೆ
ಪದ್ಯ ಪದ ಕಾವ್ಯದರ್ಥವ
ದೊಡ್ಡಗರೇಂ ಬಲ್ಲರೆಂದ ಚೂಡಾರತ್ನಾ

ಮದ್ದಳೆಯ ಗತಿಗೆ=ಮದ್ದಳೆಯ ಗತಿ ಅಥವಾ ಲಯಕ್ಕೆ; ಜಘನಗಳು+ಎದ್ದು+ಆಡಲು=ಜಘನಗಳು ಕುಣಿಯಲು, ನಗುತ, ಕಂಡು; ಲಾಲಿಪರು+ಅಲ್ಲದೆ=ಆನಂದಿಸುವುದಲ್ಲದೆ; ಪದ್ಯ ಪದ; ಕಾವ್ಯದ+ಅರ್ಥವ=ಕಾವ್ಯದ ಅರ್ಥವನ್ನು; ದೊಡ್ಡಗರು+ಏಂ= ಸಾಮಾನ್ಯ ಜನರು ಏನು; ಬಲ್ಲರು+ಎಂದ= ಬಲ್ಲರೆಂದುತಿಳಿದಿದ್ದಾರೆ ಎಂದ.

ಮದ್ದಳೆಯ ಗತಿಗೆ ಎದ್ದೆದ್ದು ಕುಣಿಯುವರು. ನಗುತ ನೋಡಿ ಆನಂದಿಸುವರಲ್ಲದೆ ಪದ್ಯ, ಪದ, ಕಾವ್ಯದ ಅರ್ಥವನ್ನು ಜನಸಾಮಾನ್ಯರು ಏನು ತಿಳಿದಾರು? ಎಂದು ಛೇಡಿಸಿದ್ದಾನೆ.

ವಾದ್ಯಗಳ ಸದ್ದಿಗೆ ಹುಚ್ಚೆದ್ದು ಕುಣಿಯುವವರನ್ನು ಕುರಿತು ಚಾಟಿ ಬೀಸಿದ್ದಾನೆ. ಅಂಥವರಿಗೆ ಪದ್ಯದ ಅರ್ಥವಾಗಲಿ, ಪದದ ಅರ್ಥವಾಗಲಿ, ಕಾವ್ಯದ ಧ್ವನಿಯಾಗಲಿ ಏನೂ ತಿಳಿದಿರುವುದಿಲ್ಲ. ಅವರಿಗೆ ಅದೆಲ್ಲ ಬೇಕಾಗಿಯೂ ಇಲ್ಲ. ಏಕೆಂದರೆ ಜೋರಾದ ಶಬ್ದ ಹೊರಹೊಮ್ಮುವ ವಾದ್ಯಗಳ ಗತ್ತಿಗನುಗುಣವಾಗಿ ಕುಣಿಯುವಂಥವರನ್ನು ಕಂಡು ಕವಿ ಹೀಗೆ ಅಭಿಪ್ರಾಯ ಪಟ್ಟಿರುವುದು

ಸಹಜವಾಗಿದೆ. ಆದರೆ ಪ್ರಸ್ತುತದಲ್ಲಿ ಯುವಜನತೆ ಕೂಡ ಇದೇ ಸಂಸ್ಕೃತಿಗೆ ಒಗ್ಗಿ ಹೋಗಿ ಕೇವಲ ದೊಡ್ಡದಾಗಿ ಕರ್ಕಶವಾದ ಶಬ್ದಗಳನ್ನು ಹೊರಡಿಸುವ ವಾದ್ಯಗಳ ಲಯಕ್ಕೆ ಕುಣಿದು ಕುಪ್ಪಳಿಸುವರು. ನಮಗೆ ಕರ್ಕಶವೆನಿಸುವುದು ಅವರಿಗೆ ಹಿತವಾಗಿ ಕೇಳಿಸಬಹುದು. ಹಾಡಿನ ಮಾರ್ದವತೆ, ವಾದ್ಯಗಳ ಸುನಾದಕ್ಕೆ ಮನಸೋಲುವವರು ಇಲ್ಲವೆಂದಲ್ಲ; ಹಿರಿಯ ತಲೆಮಾರಿನವರು ಇದ್ದಾರೆ.

೯೦

ಮಸಿ ಬಿಳಿದಹುದೇ ತೊಳೆದೊಡೆ
ವಿಷ ಬಿಡುವುದೆ ಹಾವಿಗೆಷ್ಟು ಹಾಲೂಡಿದೊಡಂ
ವಸುಧೆಯೊಳಂ ನಾಯಿಬಾಲ
ಸಸಿನಹುದೇ ಕಟ್ಟಿಬಿಡಲು ಚೂಡಾರತ್ನಾ

ಮಸಿ ಬಿಳಿಯಹುದೇ ತೊಳೆದೊಡೆ=ಮಸಿಯನ್ನು ತೊಳೆದರೆ ಬಿಳಿಯಾಗು ವುದೇ; ವಿಷ ಬಿಡುವುದೆ ಹಾವಿಗೆ+ಎಷ್ಟು ಹಾಲೂಡಿದೊಡಂ=ಹಾವಿಗೆ ಎಷ್ಟು ಹಾಲೂಡಿದರೂ ವಿಷ ಹೋಗಲು ಸಾಧ್ಯವೇ?; ವಸುಧೆಯೊಳುಂ= ಭೂಮಿಯಲ್ಲಿ; ನಾಯಿಬಾಲ; ಕಟ್ಟಿ ಬಿಡಲು=ಕಟ್ಟು ಕಟ್ಟಿ ಬಿಟ್ಟರೆ; ಸಸಿನಹುದೆ=ನೇರವಾಗುವುದೇ.

ಮಸಿಯನ್ನು ತೊಳೆದರೆ ಬಿಳಿಯಾಗಲು ಸಾಧ್ಯವೆ, ಹಾವಿಗೆ ಎಷ್ಟು ಹಾಲೂಡಿದರೆ ತಾನೆ ಅದು ತನ್ನಲ್ಲಿಯ ವಿಷ ಬಿಡುವುದೇ, ಭೂಮಿಯಲ್ಲಿ ನಾಯಿಯ ಬಾಲಕ್ಕೆ ಕಟ್ಟುಕಟ್ಟಿ ಬಿಟ್ಟರೆ ಅದು ನೇರವಾಗಲು ಸಾಧ್ಯವೇ?

ಯಾವ ಯಾವ ವಿಷಯಗಳು ಸರಿಪಡಿಸಲು ಸಾಧ್ಯವಿಲ್ಲವೊ ಅಂಥವನ್ನೆಲ್ಲ ಒಂದೆಡೆ ಹೇಳಿ ಇವುಗಳನ್ನೆಲ್ಲ ಮಾನವನ ಗುಣಸ್ವಭಾವಗಳಿಗೆ ಹೋಲಿಸಲಾಗಿದೆ. ಎಷ್ಟೇ ಪ್ರಯತ್ನಪಟ್ಟರೂ ಮಾನವ ತನ್ನ ಹುಟ್ಟುಗುಣವನ್ನು ಬಿಡಲು ಸಾಧ್ಯವಾಗದು ಎಂಬ ವಿಚಾರವನ್ನು ವಿಶದಪಡಿಸಲಾಗಿದೆ. ಹಾವು, ನಾಯಿಗಳ ಜೈವಿಕ ಗುಣ ಬದಲಿಸಲು ಸಾಧ್ಯವಿಲ್ಲ. ಆದರೆ ಮಾನವ ಮನಸ್ಸು ಮಾಡಿದರೆ ಸತ್ಸಂಗದಲ್ಲಿದ್ದರೆ ಖಂಡಿತ ಪರಿವರ್ತನೆ ಆಗಬಹುದು.

೯೧

ಮಾಡಿತ್ತರಿಯದೆ ಕೋಪದಿ
ಕಾಡಾನೆಯ ಕೋಪದಂತೆ ಕಾಣುತ ಮುರಿದೀ
ಡಾಡುವ ನೃಪನೋಲಗದಿಂ
ನಾಡೊಳಗಣ ತಿರಿಕೆ ಲೇಸು ಚೂಡಾರತ್ನಾ

ಮಾಡಿ+ಇತ್ತು+ಅರಿಯದೆ=ಕೆಲಸ ಮಾಡದೆ, ಬೇರೆಯವರಿಗೆ ಕೊಡ ಬೇಕೆಂದು ತಿಳಿಯದೆ; ಕೋಪದಿ=ಕೋಪದಿಂದ; ಕಾಡಾನೆಯ ಕೋಪದಂತೆ ಕಾಣುತ; ಮುರಿದು+ಈಡಾಡುವ ನೃಪನ+ಓಲಗದಿಂ=ಎಲ್ಲವನ್ನೂ ಮುರಿದು ಹಾಳು ಮಾಡುವ, ರಾಜನ ಆಸ್ಥಾನದಲ್ಲಿರುವುದಕ್ಕಿಂತ; ನಾಡ+ಒಳಗಣ ತಿರಿಕೆ ಲೇಸು=ಊರಿನ ಒಳಗೆ ತಿರುಪೆ ಬೇಡುವುದು ಉತ್ತಮ.

ರಾಜಕಾರ್ಯಗಳನ್ನು ನಿರ್ವಹಿಸದೆ, ಬೇರೆಯವರಿಗೆ ಕೊಡಬೇಕೆಂದು ತಿಳಿಯದೆ ಕೋಪದಿಂದ ಇರುವ ರಾಜ, ಕೋಪಗೊಂಡ ಕಾಡಾನೆ ಕಂಡದ್ದನ್ನೆಲ್ಲ ಮುರಿದು ಎಸೆಯುವಂತೆ. ಕೋಪಿಷ್ಠ ಒಳ್ಳೆಯದು. ರಾಜನ ಆಸ್ಥಾನದಲ್ಲಿ ಇರುವುದಕ್ಕಿಂತ ನಾಡಿನ ಒಳಗೆ ತಿರುಪೆ ಬೇಡುವುದು ಒಳ್ಳೆಯದು.

ರಾಜನಾದವನು ತನ್ನ ಪಾಲಿನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದರೆ ರಾಜ್ಯವೂ ಸುಭಿಕ್ಷವಾಗಿರುತ್ತದೆ. ಹಾಗಲ್ಲದೆ ಕೋಪಗೊಂಡ ಕಾಡಾನೆ ಕ್ರೌರ್ಯದಿಂದ ವರ್ತಿಸಿ ಆ ನಿರಂಕುಶಮತಿಯಾಗಿದ್ದರೆ ಎಲ್ಲವೂ ನಾಶವಾಗುತ್ತದೆ. ಕೋಪಿಷ್ಠ ರಾಜನ ಆಸ್ಥಾನದಲ್ಲಿರುವುದಕ್ಕಿಂತ ಊರೊಳಗೆ ಭಿಕ್ಷೆ ಬೇಡಿ ಜೀವನ ನಡೆಸುವುದು ಲೇಸು. ಇಲ್ಲಿ ರಾಜಪ್ರಭುತ್ವದ ಬಗೆಗಿನ ಪ್ರತಿಭಟನೆ ನಿಚ್ಚಳವಾಗಿ ಮೂಡಿಬಂದಿದೆ.

೯೨

ಮುತ್ತಜ್ಜಿಗೇಕೆ ಮೋಹನ
ಹೊತ್ತೊಯ್ವರಿಗೇಕೆ ಹರಿದಿಳೆ ಬೆಳ್ಗೊಡೆ
ತೊತ್ತಿಂಗೆ ಹಾಸುಮಂಚಂ
ಕತ್ತೆಗೆ ವೈಹಾಳಿಯೇಕೆ ಚೂಡಾರತ್ನಾ

ಮುತ್ತಜ್ಜಿಗೆ+ಏಕೆ ಮೋಹನ=ಮುತ್ತಜ್ಜಿಗೇಕೆ ಶೃಂಗಾರ; ಹೊತ್ತೊಯ್ವರಿಗೇಕೆ ಹರಿದ+ಇಳೆ ಬೆಳ್ಗೊಡೆ= ಸಾಯುವ ಸ್ಥಿತಿಯಲ್ಲಿ ಇರುವವರಿಗೇಕೆ ಹರಿದು ಹಂಚಿ ಹೋಗುವ ಭೂಮಿ, ಬೆಳ್ಳಿಯ ಕೊಡೆ; ತೊತ್ತಿಗೆ ಹಾಸುಮಂಚ=ಸೇವಕರಿಗೆ ಹಾಸುಮಂಚ; ಕತ್ತೆಗೆ ವೈಹಾಳಿ+ಏಕೆ=ಕುದುರೆ ಸವಾರಿ ಏಕೆ?

ಮುತ್ತಜ್ಜಿಗೆ ಶೃಂಗಾರವೇಕೆ? ಸಾಯುವ ಸ್ಥಿತಿಯಲ್ಲಿರುವವರಿಗೆ ಹರಿದು ಹಂಚಿ ಹೋಗುವ ಭೂಮಿ, ಬೆಳ್ಳಿಯ ಕೊಡೆಗಳೇಕೆ? ಸೇವಕರಿಗೆ ಹಾಸು ಮಂಚವೇಕೆ? ಕತ್ತೆಗೆ ಸವಾರಿ ಏಕೆ?

ಮುತ್ತಜ್ಜಿಯಾದವಳಿಗೆ ಶೃಂಗಾರ, ಅಲಂಕಾರಗಳು ಏಕೆ ಎಂದು ಪ್ರಶ್ನಿಸಿರುವುದು ಅಷ್ಟೇನೂ ಸಮಂಜಸವೆನಿಸುವುದಿಲ್ಲ. ವಯಸ್ಸಾದರೇನು ಅಥವಾ ಸಂಬಂಧದಿಂದ ಮುತ್ತಜ್ಜಿಯಾದ ಮಾತ್ರಕ್ಕೆ ಅಲಂಕಾರ ಮಾಡಿಕೊಳ್ಳಬಾರದೇ? ಇನ್ನೇನು ಸಾಯುತ್ತಾರೆ, ಹೊತ್ತೊಯ್ಯುವ ಸ್ಥಿತಿ ಬಂದಿದೆ ಎಂದಾಗ ಭೂಮಿ, ಬೆಳ್ಗೊಡೆಗಳ ಬಗೆಗೆ, ಅಂದರೆ ಅಧಿಕಾರದ ಬಗೆಗೆ ಆಲೋಚಿಸುವವರಿಗೆ ಈ ಮಾತು ಅನ್ವಯವಾಗುವುದು. ಸೇವಕರಾದವರು ಸುಖಪಡಬಾರದೆಂಬ ಭಾವ ಅಷ್ಟೇನು ಸರಿ ಕಾಣದು. ಕುದುರೆ ವೈಭವದ ಬದುಕಿಗೆ, ವೇಗಕ್ಕೆ ಸಂಕೇತ. ಆದರೆ ಕತ್ತೆ ಕೇವಲ ಭಾರ ಹೊರಲು ಮಾತ್ರ ಬಳಸುವ ಪ್ರಾಣಿ. ಅದು ಕುದುರೆಯಂತಿರಲು ಸಾಧ್ಯವಿಲ್ಲ.

೯೩

ಮೊದಲ ರತಿ ಮೊದಲ ನೇಹಂ
ಮೊದಲ ಸರಸಂ ಮೊದಲ ಯೌವನ ಮೇಣ್ ಕಾರ್ಯಂ
ಮೊದಲೊಳಗಲ್ಲದೆ ಕಬ್ಬಿನ
ತುದಿಯೊಳು ರಸವರಸಲುಂಟೆ ಚೂಡಾರತ್ನಾ

ಮೊದಲ ರತಿ ಮೊದಲ ನೇಹಂ=ಮೊದಲ ಸಂಗಮ, ಮೊದಲ ಸ್ನೇಹ; ಮೊದಲ ಸರಸಂ ಮೊದಲ ಯೌವನ; ಮೇಣ್ ಕಾರ್ಯಂ ಅಲ್ಲದೆ ಮೊದಲ ಕಾರ್ಯ; ಮೊದಲೊಳಗಲ್ಲದೆ; ಕಬ್ಬಿನ ತುದಿಯೊಳು ರಸವರಸಲು ಉಂಟೆ=ಕಬ್ಬಿನ ತುದಿಯಲ್ಲಿ ರಸವನ್ನು ಹುಡುಕಲಾದೀತೇ.

ಮೊದಲ ರತಿ ಅಥವಾ ಸಂಗಮ, ಮೊದಲ ಸ್ನೇಹ, ಮೊದಲ ಸರಸ, ಯೌವನದಲ್ಲಿ ಮಾಡುವ ಕೆಲಸಗಳು ಶ್ರೇಷ್ಠವಾಗಿರುತ್ತವೆ. ಕಬ್ಬಿನ ತುದಿಯಲ್ಲಿ ರಸವನ್ನು ಅರಸಿದರೆ ದೊರೆಯದು. ಕಾಂಡ ಭಾಗ (ಮೊದಲ ಭಾಗ)ದಲ್ಲಿ ಮಾತ್ರ ರಸವಿರುತ್ತದೆ.

ಯಾವುದೇ ಕೆಲಸವಾದರೂ ಆರಂಭಿಕ ಹಂತದಲ್ಲಿ ಮಾಡಿದರೆ ಒಳ್ಳೆಯದು ಎಂಬುದನ್ನು ಕವಿ ಇಲ್ಲಿ ಹೇಳಿದ್ದಾನೆ. ಮೊದಲ ರತಿ, ಮೊದಲ ಸ್ನೇಹ, ಮೊದಲ ಸರಸ, ಯೌವನದಲ್ಲಿ ಉತ್ಸಾಹವಿದ್ದಾಗ ಮಾಡುವ ಕೆಲಸಗಳು ಇವೆಲ್ಲವೂ ಉತ್ತಮವಾಗಿರುತ್ತವೆ ಎಂಬ ವಿಚಾರವನ್ನು ಕಬ್ಬಿನ ಉಪಮೆಯೊಂದಿಗೆ ಹೇಳಲಾಗಿದೆ. ಕಬ್ಬು ತುಂಬಾ ಬಲಿತರೆ ತುದಿಯಲ್ಲಿ ಸೂಲಂಗಿ (ಹೂವು) ಬಿಡುತ್ತದೆ. ಆಗ ಅದರ ಮಾಧುರ್ಯ, ಸವಿ ಹಾಳಾಗುತ್ತದೆ. ಅದಕ್ಕೂ ಮುಂಚೆ ಕಬ್ಬಿನ ಕಾಂಡ (ಮೊದಲ ಭಾಗ)ವನ್ನು ತಿಂದರೆ ಅದರ ರಸ ಸವಿಯಾಗುತ್ತದೆ. ಕಬ್ಬಿನ ಕಾಂಡದಲ್ಲಿ ರಸವನ್ನ ಅರಸಬೇಕೇ ಹೊರತು ತುದಿಯಲ್ಲಲ್ಲ ಎನ್ನಲಾಗಿದೆ.

೯೪

ಯತಿ ಸಿದ್ಧರ ಗತಿಕೆಡಿಸಿತು
ವ್ರತಿ ಮುನಿಗಳ ಭ್ರಾಂತುಗೊಳಿಸಿ ಕಾಡಿತ್ತು ಮಹಾ
ಧೃತಿಗೆಡಿಸಿತು ಗುರುಹಿರಿಯರ
ಸತಿಯರ ವೈಶಿಕದ ಬಲ್ಮೆ ಚೂಡಾರತ್ನಾ

ಯತಿ ಸಿದ್ಧರ ಗತಿ ಕೆಡಿಸಿತು; ವ್ರತಿಮುನಿಗಳ ಭ್ರಾಂತುಗೊಳಿಸಿ ಕಾಡಿತ್ತು; ಮಹಾ ಧೃತಗೆಡಿಸಿತು ಗುರುಹಿರಿಯರ; ಸತಿಯರ; ವೈಶಿಕದ ಬಲ್ಮೆ=ಸೋಗಿನ ಸಾಮರ್ಥ್ಯ.

ಯತಿಸಿದ್ಧರ ಗತಿಗೆಡಿಸಿ, ವ್ರತಿಮುನಿಗಳ ಭ್ರಾಂತಿಗೊಳಿಸಿ ಕಾಡಿ, ಗುರು ಹಿರಿಯರ ಧೈರ್ಯಗೆಡಿಸಿದ ಸ್ತ್ರೀಯರ ಸೋಗಿನ ಸಾಮರ್ಥ್ಯದ ಬಗೆಗೆ ಹೇಳಿದ್ದಾನೆ ಕವಿ.

ಸ್ತ್ರೀಯರ ಬಗೆಗೆ ಈ ರೀತಿಯ ಅನಿಸಿಕೆ, ಅಭಿಪ್ರಾಯಗಳು ಇತಿಹಾಸ ದುದ್ದಕ್ಕೂ ಇದ್ದೇ ಇವೆ. ಹಾಗೆಂದ ಮಾತ್ರಕ್ಕೆ ಎಲ್ಲ ಹೆಣ್ಣುಗಳಿಗೂ ಇದು

ಅನ್ವಯಿಸುವುದಿಲ್ಲ. ಕೆಲವರು ಮೋಸ ಮಾಡಿರಬಹುದು. ಅಂಥವರನ್ನು ಕಂಡು ಕವಿ ಈ ಅಭಿಪ್ರಾಯ ವ್ಯಕ್ತಪಡಿಸಿರಬಹುದು. ಇದನ್ನೇ ಇನ್ನೊಂದು ರೀತಿ ಅರ್ಥೈಸುವುದಾದರೆ ಇದು ಹೆಣ್ಣಿನ ಮೋಸವಲ್ಲ ಗಂಡಸಿನ ದೌರ್ಬಲ್ಯವೆಂದೇ ಹೇಳಬೇಕು.

೯೫

ಯಮನಾರ ನಂಟ ತನ್ನಯ
ಸಮಸುತನೆಂದೆನಿಪ ಧರ್ಮರಾಯನವೊಯ್ದಂ
ಭ್ರಮೆ ಬೇಡ ಬೇಡ ಮಾನವ
ನಿಮಿಷದಿ ಧರ್ಮವನೆ ಮಾಡು ಚೂಡಾರತ್ನಾ

ಯಮನು+ಆರ ನಂಟ=ಯಮನು ಯಾರಿಗೆ ನಂಟ; ತನ್ನಯ ಸಮ ಸುತನು+ಎಂದು+ಎನಿಪ=ತನ್ನ ಮಗ ಎಂದು ಹೇಳುವ; ಧರ್ಮರಾಯನ+ ಒಯ್ದಂ=ಧರ್ಮರಾಯನನ್ನೂ ಕರೆದೊಯ್ದ; ಭ್ರಮೆ ಬೇಡ ಬೇಡ ಮಾನವ=ಭ್ರಮೆ ಬೇಡ ಮಾನವ; ನಿಮಿಷದಿ ಧರ್ಮವನೆ ಮಾಡು=ತಕ್ಷಣ ದಾನಧರ್ಮವನ್ನು ಮಾಡು.

ಯಮನು ಯಾರಿಗೆ ನಂಟ, ತನ್ನ ಮಗನೆಂದೆನಿಸಿರುವ ಧರ್ಮರಾಯನನ್ನೂ ಬಿಡದೆ ಕರೆದೊಯ್ದ. ಮಾನವ, ಭ್ರಮೆಯ ಬಿಟ್ಟು ಕೂಡಲೇ ದಾನಧರ್ಮವನ್ನು ಮಾಡು.

ಕ್ಷಣಿಕವಾದ ಬದುಕಿಗೆ ಮಾನವ ಏನೆಲ್ಲವನ್ನು ಮಾಡುವನೋ ಅವನ್ನೆಲ್ಲ ಬಿಟ್ಟು ದಾನಧರ್ಮದಲ್ಲಿ ನಿರತನಾಗು, ಒಳ್ಳೆಯದರ ಕಡೆಗೆ ತೊಡಗಿಸಿಕೊ ಎಂದು ವಿವೇಕ ಹೇಳಲಾಗಿದೆ.

೯೬

ಯೌವನದೊಳಗಣ ಸಿರಿಯುಂ
ಯೌವನದೊಳಗಾದ ಮಕ್ಕಳುಂ ವಿದ್ಯೆಗಳುಂ
ಯೌವನದ ಸೊಬಗು ಪೌರುಷ
ಮವ್ವಳಿಸಿದರುಂಟೆ ಸುಕವಿ ಚೂಡಾರತ್ನಾ

ಯೌವನದ+ಒಳಗಣ ಸಿರಿಯುಂ=ಯೌವನದಲ್ಲಿ ಗಳಿಸಿದ ಹಣ; ಯೌವನದೊಳಗೆ+ಆದ ಮಕ್ಕಳುಂ+ವಿದ್ಯೆಗಳುಂ= ಯೌವನದಲ್ಲಿ ಆದ ಮಕ್ಕಳು, ವಿದ್ಯೆಗಳು; ಯೌವನದ ಸೊಬಗು ಪೌರುಷ+ಅವ್ವಳಿಸಿದರು+ಉಂಟೆ ಸುಕವಿ= ಯೌವನದ ಸೌಂದರ್ಯ, ಪೌರುಷ ಚಿಂತಿಸಿದರೆ ಉಂಟೆ?

ಯೌವನದಲ್ಲಿ ಗಳಿಸಿದ ಹಣ, ಯೌವನದಲ್ಲಿ ಪಡೆದ ಮಕ್ಕಳು, ವಿದ್ಯೆಗಳು, ಯೌವನದಲ್ಲಿಯ ಸೊಬಗು ಸೌಂದರ್ಯ, ಪೌರುಷಗಳು ಅನಂತರ ಕಾಲದಲ್ಲಿ ಚಿಂತಿಸಿದರೆ ಬರಲು ಸಾಧ್ಯವೇ?

ಮಾನವನ ಜೀವನದಲ್ಲಿ ಯೌವನಾವಸ್ಥೆ ಎಂಬುದು ಒಂದು ಪ್ರಮುಖ ಘಟ್ಟ. ಆ ಸಮಯದಲ್ಲಿ ಸಾಧನೆಯನ್ನು ಮಾಡದೆ ಅನಂತರ ಕಾಲದಲ್ಲಿ ಯೋಚಿಸಿದರೆ ಪ್ರಯೋಜನವಿಲ್ಲ. ಹಾಗಾಗಿ ಯೌವನದಲ್ಲಿ ಗಳಿಸಿದ ಹಣ, ಪಡೆದ ವಿದ್ಯೆ, ಮಕ್ಕಳು, ಯೌವನದಲ್ಲಿಯ ಸೊಬಗು ಸೌಂದರ್ಯಗಳನ್ನು ಅನಂತರದಲ್ಲಿ ಪಡೆಯಲು ಸಾಧ್ಯವಿಲ್ಲ. ಯೌವನದಲ್ಲಿ ಬದುಕಿಗೆ ಬೇಕಾದ್ದೆಲ್ಲವನ್ನು ಸಾಧಿಸಬೇಕು. ಮುಂದಿನ ಕಾಲಘಟ್ಟದಲ್ಲಿ ಅದರ ಫಲವನ್ನು ಅನುಭವಿಸಬೇಕು. ಹಾಗಾಗಿ ಯಾವ ಯಾವ ಸಂದರ್ಭದಲ್ಲಿ, ಸಮಯದಲ್ಲಿ ಏನೇನನ್ನು ಮಾಡಬೇಕೋ ಅದನ್ನು ಮಾಡಿ ಪೂರೈಸಿದರೆ ಒಳ್ಳೆಯದು.

೯೭

ರಕ್ಷಿಪನೆ ತಂದೆ ಹಸಿದರೆ
ಕುಕ್ಷಿಯ ತುಂಬುವಳೆ ತಾಯಿ ಕಡು ದುರ್ಜನರಂ
ಶಿಕ್ಷಿಪನೆ ನೃಪತಿ ಪುರುಷನ
ಪಕ್ಷದೊಳಿಪ್ಪವಳೆ ಸುದತಿ ಚೂಡಾರತ್ನಾ

ರಕ್ಷಿಪನೆ ತಂದೆ=ರಕ್ಷಿಸುವವನೆ ತಂದೆ; ಹಸಿದರೆ ಕುಕ್ಷಿಯ ತುಂಬುವಳೆ ತಾಯಿ=ಹಸಿದಾಗ ಹೊಟ್ಟೆ ತುಂಬಿಸುವವಳೆ ತಾಯಿ; ಕಡು ದುರ್ಜನರಂ ಶಿಕ್ಷಿಪನೆ ನೃಪತಿ=ತುಂಬ ಕೆಟ್ಟವ್ಯಕ್ತಿಗಳನ್ನು ಶಿಕ್ಷಿಸುವವನೆ ರಾಜ; ಪುರುಷನ ಪಕ್ಷದೊಳ್

+ಇಪ್ಪ+ಅವಳೆ ಸುದತಿ=ಗಂಡನಿಗೆ ಅನುಕೂಲವಾಗಿ ನಡೆದುಕೊಳ್ಳುವವಳೆ ಒಳ್ಳೆಯ ಸತಿ.

ರಕ್ಷಿಸುವವನೇ ತಂದೆ, ಹಸಿದಿದ್ದಾಗ ಹೊಟ್ಟೆ ತುಂಬಿಸುವವಳೆ ತಾಯಿ, ತುಂಬ ಕೆಟ್ಟ ವ್ಯಕ್ತಿಗಳನ್ನು ಶಿಕ್ಷಿಸುವವನೆ ರಾಜ. ಗಂಡನಿಗೆ ಅನುಕೂಲವಾಗಿ ನಡೆದುಕೊಳ್ಳುವವಳೆ ಒಳ್ಳೆಯ ಸತಿ.

ತೊಂದರೆಯಲ್ಲಿದ್ದಾಗ ರಕ್ಷಿಸುವಾತನೇ ತಂದೆ. ಹಸಿದಾಗ ಹೊಟ್ಟೆ ತುಂಬಿಸುವವಳೆ ತಾಯಿ. ಕಡುದುಷ್ಟನಾದ ವ್ಯಕ್ತಿಯನ್ನು ಶಿಕ್ಷಿಸಿ ರಾಜ್ಯವನ್ನು ಸುಭಿಕ್ಷವಾಗಿಡುವವನೆ ರಾಜ, ಪತಿಯನ್ನು ಅನುಸರಿಸಿಕೊಂಡು ಸಂಸಾರವನ್ನು ಸರಿದೂಗಿಸಿಕೊಂಡು ಹೋಗುವವಳೆ ನಿಜವಾದ ಹೆಂಡತಿ. ಅವರವರ ಜವಾಬ್ದಾರಿಗಳನ್ನು ಅರಿತು ನಡೆದರೆ ಸಮಾಜ ಸ್ವಸ್ಥವಾಗಿರುತ್ತದೆ. ಹಾಗಲ್ಲದಿದ್ದಾಗ ಎಲ್ಲವೂ ಅಲ್ಲೋಲಕಲ್ಲೋಲವಾಗುತ್ತದೆ.

೯೮

ವಾಣಿಜ್ಯವನತಿ ಕೃಷಿಯಿಂ
ಪ್ರಾಣವನೊಪ್ಪಿಸುವ ಸೇವೆಯಿಂ ಯಾತನೆಯಂ
ಮಾಣದೆ ಮಾಡಿಸುತಿಪ್ಪುದು
ಗೇಣುದ್ದದ ಹೊಟ್ಟೆಯು ಸಲೆ ಚೂಡಾರತ್ನಾ

ವಾಣಿಜ್ಯವನ್+ಅತಿ ಕೃಷಿಯಿಂ=ವ್ಯಾಪಾರ ಅತಿಯಾದ ಕೃಷಿಯಿಂದ; ಪ್ರಾಣವನು ಒಪ್ಪಿಸುವ ಸೇವೆಯಿಂ=ರಾಜರ ಬಳಿಯ ಸೇವೆ; ಯಾತನೆಯಂ= ಯಾತನೆಯನ್ನು; ಮಾಣದೆ=ತಪ್ಪದೆ; ಮಾಡಿಸುತ+ಇಪ್ಪುದು= ಮಾಡಿಸುತ್ತಿರುವುದು; ಗೇಣುದ್ದದ ಹೊಟ್ಟೆಯು ಸಲೆ=ಗೇಣುದ್ದದ ಅಳತೆಯ ಹೊಟ್ಟೆಯ ಸಲುವಾಗಿ.

ವ್ಯಾಪಾರ, ಕೃಷಿ, ರಾಜರ ಬಳಿ ಸೇವೆಗೈವುದು- ಇವು ನೋವನ್ನು, ಯಾತನೆಯನ್ನು ಉಂಟುಮಾಡುವ ವಿಚಾರ, ಇಷ್ಟೆಲ್ಲ ಮಾಡುವುದು ಗೇಣುದ್ದವಿರುವ ಹೊಟ್ಟೆಗಾಗಿ.

ವ್ಯಾಪಾರ ಮಾಡುವುದು ಕಷ್ಟಕರವಾದುದು. ಲಾಭ, ನಷ್ಟಗಳು ಕಟ್ಟಿಟ್ಟದ್ದು. ಇನ್ನು ಕೃಷಿಯಂತೂ ಹೇಳುವ ಹಾಗೇ ಇಲ್ಲ. ಒಮ್ಮೆ ಫಲಿಸಲು ಸಮೃದ್ಧವಾಗಿ ಬಂದರೆ ಮತ್ತೊಮ್ಮೆ ಪ್ರಾಕೃತಿಕ ವಿಕೋಪಗಳಿಂದ ಅಪಾರ ಹಾನಿಯುಂಟಾಗುತ್ತದೆ. ರಾಜರ ಬಳಿ ಸೇವೆ ಜೀವ ಕೈಯಲ್ಲಿ ಹಿಡಿದುಕೊಂಡು ಮಾಡಬೇಕಿತ್ತು. ಯಾವ ಸಂದರ್ಭದಲ್ಲಿ ಏನಾಗುವುದೋ ತಿಳಿಯದಂತಹ ಸೇವೆ ಇದು. ಇಷ್ಟೆಲ್ಲ ಕಷ್ಟಪಟ್ಟು, ನೋವುಂಡು ಮಾಡುವ ಈ ಕೆಲಸಗಳೆಲ್ಲ ಗೇಣುದ್ದದ ಹೊಟ್ಟೆಗಾಗಿ. ಮಾನವನ ಹಸಿವು ಯಾವ ಕಠಿಣ ಕೆಲಸವನ್ನಾದರೂ ಮಾಡಿಸುತ್ತದೆ. ಹಾಗಾಗಿ ಮಾನವ ಕಷ್ಟಪಟ್ಟು ದುಡಿಯ ಲೇಬೇಕು ಎಂದಿದ್ದಾನೆ ಕವಿ.

'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'- ಎಂಬ ಹರಿ ದಾಸರ ವಾಣಿ ಇಲ್ಲಿ ನೆನಪಿಗೆ ಬರುತ್ತದೆ.

೯೯

ವಿತರಣೆಯಿಲ್ಲದೆ ತನ್ನಾ
ಶ್ರಿತರಂ ಪಾಲಿಸದ ವಿನಯಪರನಲ್ಲದವಂ
ಸ್ತುತಿಸುವಡವನೇಂ ಕುಲದೇ
ವತೆಯೇ ಧಾರಿಣಿಗೆ ನೋಡು ಚೂಡಾರತ್ನಾ

ವಿತರಣೆಯಿಲ್ಲದೆ=ಬಳಕೆಯಿಲ್ಲದೆ ಅಥವಾ ಹಂಚಿಕೆಯಿಲ್ಲದೆ; ತನ್ನ+ಆಶ್ರಿತರ ಪಾಲಿಸದ=ತನ್ನ ಆಶ್ರಿತರನ್ನು ಪಾಲಿಸದಿರುವ; ವಿನಯಪರನ್+ಅಲ್ಲದವಂ= ವಿನಯ ವಂತನಲ್ಲದವನು; ಸ್ತುತಿಸುವಡೆ=ಸ್ತುತಿಸಿದರೆ; ಅವನು+ಏಂ=ಅವನೇನು; ಕುಲ ದೇವತೆಯೇ ಧಾರಿಣಿಗೆ ನೋಡು=ಭೂಮಿಗೆ ಕುಲದೇವತೆಯೇ?

ತಾನು ಬಳಸದೆ ಇತರರಿಗೆ ಹಂಚದಿರುವ, ತನ್ನ ಆಶ್ರಿತರನ್ನು ಪಾಲಿಸ ದಿರುವ, ವಿನಯಶೀಲನಾದವನನ್ನು ಸ್ತುತಿಸಿದರೆ ಧಾರಿಣಿಯಲ್ಲಿ ಅವನೇನು ಕುಲ ದೇವತೆಯೇ ನೋಡು.

ಈ ಪದ್ಯದಲ್ಲಿ ರಾಜನನ್ನು ನಿಂದಿಸುತ್ತಿದ್ದಾನೆ ಕವಿ. ಬಳಕೆಯಿಲ್ಲದೆ, ತಾನು ಅನುಭವಿಸದೆ, ಇತರರಿಗೂ ನೀಡದೆ, ತನ್ನ ಆಶ್ರಿತ ಜನರನ್ನು ಪಾಲಿಸದೆ,

ವಿನಯಶೀಲನಲ್ಲದೆ ಇರುವವನನ್ನು ಸ್ತುತಿಸಲೇಬಾರದು. ಏಕೆಂದರೆ ರಾಜನನ್ನು ಸ್ತುತಿಸುವ ರೂಢಿ ಇರುವುದರಿಂದ ಕವಿ ಈ ರೀತಿ ಹೇಳಿರಬಹುದು. ಭೂಮಿಗೆ ಅವನೇನು ಕುಲದೇವತೆಯೇ ಎಂದು ಪ್ರಶ್ನಿಸಿದ್ದಾನೆ. ರಾಜರನ್ನು ನಿಂದಿಸುವ, ಆಡಳಿತ ವೈಖರಿಯನ್ನು ಟೀಕಿಸುವ ಅನೇಕ ಪದ್ಯಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇಲ್ಲದೇನಿಲ್ಲ.

೧೦೦

ವಿತ್ತಾನುಂ ಸತ್ಪುರುಷ
ರ್ಗಿತ್ತೊಡೆ ಫಲ ತಪ್ಪದಕ್ಕುದೆಂತೆನೆ ತೆಂಗಂ
ಬಿತ್ತಿಯೆ ನೀರೆರೆಯಮೃತವ
ಹೊತ್ತಿರದೇ ನೆತ್ತಿಯಲ್ಲಿ ಚೂಡಾರತ್ನಾ

ವಿತ್ತಾನುಂ=ವಿತ್ತವನ್ನು ಅಥವಾ ಹಣವನ್ನು; ಸತ್ಪುರುಷರ್ಗೆ+ಇತ್ತೊಡೆ= ಸತ್ಪುರುಷರಿಗೆ ನೀಡಿದರೆ; ಫಲ ತಪ್ಪದು+ಅಕ್ಕುದು+ ಎಂತೆನೆ= ಸತ್ಪರಿಣಾಮ ಉಂಟಾಗುತ್ತದೆ, ಅದು ಹೇಗೆಂದರೆ; ತೆಂಗಂ=ತೆಂಗನ್ನು; ಬಿತ್ತಿಯೆ=ಬಿತ್ತಿ; ನೀರೆರೆದು+ಅಮೃತವ=ನೀರೆರೆದರೆ ಅಮೃತವನ್ನು; ಹೊತ್ತಿರದೆ=ತಾನು ಹೊತ್ತುಕೊಂಡಿ ರುವುದಿಲ್ಲವೇ ನೆತ್ತಿಯಲ್ಲಿ.

ಹಣವನ್ನು ಸತ್ಪುರುಷರಿಗೆ ನೀಡಿದರೆ ಸತ್ಫಲ ಉಂಟಾಗುತ್ತದೆ. ಅದು ಹೇಗೆಂದರೆ ತೆಂಗನ್ನು ಬಿತ್ತಿ ನೀರೆರೆದರೆ ಅದು ತನ್ನ ನೆತ್ತಿಯಲ್ಲಿ ಅಮೃತವನ್ನೇ ಹೊತ್ತು ನಿಂತಿರುವುದಿಲ್ಲವೇ?

ಸತ್ಪಾತ್ರರಿಗೆ ದಾನ ಮಾಡಬೇಕು. ಹಾಗೆ ಮಾಡಿದ ದಾನ ಮುಂದೊಂದು ದಿನ ಸತ್ಪರಿಣಾಮವನ್ನು ಉಂಟುಮಾಡುವುದು ಎಂಬ ವಿಷಯವನ್ನು ಒಳ್ಳೆಯ ಉಪಮೆಯ ಮೂಲಕ ತಿಳಿಸಿಹೇಳಲಾಗಿದೆ.

೧೦೧

ವಿದ್ಯೆಯೆ ಮಾತಾಪಿತರುಂ
ಬುದ್ಧಿಯೆ ಸೋದರರು ವಿನಯವಚನವೆ ನಂಟಂ
ಅಧ್ವಾನ ಹಿಂಗಿ ಸುಖದಿಂ
ದಿದ್ದುದೆ ತನ್ನೂರು ಕೇಳು ಚೂಡಾರತ್ನಾ

ವಿದ್ಯೆಯೆ ಮಾತಾಪಿತರುಂ=ವಿದ್ಯೆಯೆಂಬುದೇ ತಂದೆ ತಾಯಿಗಳು; ಬುದ್ಧಿಯೇ ಸೋದರರು=ಬುದ್ಧಿ ಎಂಬುದು ಸೋದರರು; ವಿನಯ ವಚನವೆ ನಂಟರು= ವಿನಯದಿಂದ ಮಾತನಾಡುವ ಗುಣವೇ ನಂಟರು; ಅಧ್ವಾನ ಹಿಂಗಿ=ಕೆಟ್ಟದು ನಿವಾರಣೆಯಾಗಿ; ಸುಖದಿಂದ+ಇದ್ದುದೆ=ಸುಖದಿಂದ ಇರುವುದೇ; ತನ್ನ+ಊರು=ತನ್ನ ಊರು ಕೇಳು.

ವಿದ್ಯೆಯೆಂಬುದು ತಂದೆ-ತಾಯಿಗಳಿದ್ದಂತೆ. ಬುದ್ಧಿಯೇ ಸಹೋದರರು ವಿನಯವಚನವೇ ನಂಟರು. ಕಷ್ಟಗಳೆಲ್ಲ ನಿವಾರಣೆಯಾಗಿ ಸುಖದಿಂದ ಇರುವಂತೆ ಮಾಡುವ ಸ್ಥಳವೇ ತನ್ನ ಊರು.

ವಿದ್ಯೆ ಎಂಬುದು ಪೋಷಕರಿದ್ದಂತೆ. ಅದು ಜೀವನಕ್ಕೆ ದಾರಿ ತೋರುವ, ಬದುಕನ್ನು ರೂಪಿಸುವ ತಂದೆ-ತಾಯಿಗಳಿದ್ದಂತೆ. ಬುದ್ಧಿಯೇ ಸಹೋದರರು. ಬುದ್ಧಿವಂತಿಕೆಯಿಂದ ಬಾಳು ನಡೆಸುತ್ತಿದ್ದರೆ ಆ ಬುದ್ಧಿ ಎಚ್ಚರಿಕೆ ನೀಡುವ ಸಾಹಚರ್ಯ ನೀಡುವ ಸಹೋದರರನಿದ್ದಂತೆ. ವಿನಯದ ಮಾತುಗಳೇ ನಂಟರಿದ್ದಂತೆ. ವಿನಯವಂತನಾಗಿ, ಸಹನಶೀಲನಾಗಿ ಮಾತನಾಡಿದರೆ ಎಲ್ಲರೂ ನಂಟರಾಗುವರು. 'ಮಾತು ಮನೆ ಕೆಡಿಸಿತು' ಎಂಬಂತಾದರೆ ಬದುಕು ದುರ್ಭರವಾಗುವುದು. ಹಾಗಲ್ಲದೆ 'ಮಾತಿನಿಂದ ಸಕಲ ಸಂಪದವು, ಮಾತೇ ಮಾಣಿಕ್ಯ' ಎಂಬುದನ್ನು ಅಳವಡಿಸಿಕೊಂಡರೆ ಬಾಳು ಸಹ್ಯವಾಗುವುದು. ಯಾವ ಊರು ಎಲ್ಲ ಸೌಕರ್ಯಗಳನ್ನು ಒದಗಿಸಿ ಕಷ್ಟಗಳನ್ನು ನಿವಾರಿಸಿ ಸುಖದಿಂದ ಇರುವ ಹಾಗೆ ಮಾಡುವುದೋ ಅದೇ ಅವರ ಸ್ವಸ್ಥಳವಾಗುವುದು.

೧೦೨

ವಿನಯದೊಳಿತ್ತಾ ದಾನಂ
ಕನಕಾದ್ರಿಗೆ ತತ್ಸಮಾನ ಕನಲುತ ಮುನಿಯುತ
ಜಿನುಗುತ್ತಿತ್ತಾ ದಾನಂ
ಮೊನೆಯಿಲ್ಲದ ಗಾಯದಂತೆ ಚೂಡಾರತ್ನಾ

ವಿನಯದೊಳು+ಇತ್ತ=ವಿನಯದಿಂದ ನೀಡಿದ; ದಾನಂ=ದಾನವು; ಕನಕಾದ್ರಿಗೆ= ಹೊನ್ನಿನ ಬೆಟ್ಟಕ್ಕೆ; ತತ್ಸಮಾನ= ಸರಿಸಮಾನ; ಕನಲುತ=ಸಂಕಟಪಟ್ಟು ಕೊಂಡು; ಮುನಿಯುತ=ಮುನಿಸಿಕೊಂಡು; ಜಿನುಗುತ್ತ+ಇತ್ತ+ಆ+ದಾನಂ= ಗೊಣಗುತ್ತ ಕೊಟ್ಟ ಆ ದಾನ; ಮೊನೆಯಿಲ್ಲದ=ಅಂತ್ಯವಿಲ್ಲದ, ವಾಸಿಯಾಗದ ಗಾಯದಂತೆ ನೋವುಂಟು ಮಾಡುತ್ತದೆ.

ವಿನಯದಲಿ ನೀಡಿದ ದಾನ ಸುವರ್ಣ ಪರ್ವತಕ್ಕೆ ಸರಿಸಮಾನವಾಗಿರುತ್ತದೆ. ಸಂಕಟಪಟ್ಟುಕೊಂಡು, ಮುನಿಸಿಕೊಂಡು, ಗೊಣಗುತ್ತ ಕೊಟ್ಟ ದಾನ ಗುಣವಾಗದ ಗಾಯದಂತೆ ಯಾವಾಗಲೂ ಬಾಧಿಸುತ್ತಿರುತ್ತದೆ.

ಯಾರಿಗಾದರೂ ಏನನ್ನಾದರೂ ದಾನ ನೀಡಬೇಕೆಂದಾಗ ಪ್ರಾಂಜಲ ಮನಸ್ಸಿನಿಂದ ನೀಡಬೇಕು. ಹೀಗೆ ನೀಡಿದರೆ ಅದು ಕನಕಾದ್ರಿಗೆ ಸರಿಸಮವಾಗಿರುತ್ತದೆ. ಅತ್ಯಂತ ಮೌಲ್ಯಯುತವಾಗಿರುತ್ತದೆ. ಗೊಣಗುತ್ತ, ಸಂಕಟಪಡುತ್ತ ಸಿಟ್ಟಿನಿಂದ ನೀಡುವ ದಾನ ಗುಣವಾಗದ ವ್ರಣದಂತೆ ಸದಾಕಾಲ ಬಾಧಿಸುತ್ತಿರುತ್ತದೆ, ದಾನಪಡೆದವನಿಗೆ.

೧೦೩

ವಿನಯ ವಿರಹಿತನ ತಪಮುಂ
ಧನಮುಂ ಸತ್ಪಾತ್ರವರಿದು ಕೊಡದನ ಸಿರಿಯುಂ
ಮನವರಿದೊಲಿಸದ ಸತಿಯುಂ
ತೆನೆಯಾಗದ ಶಾಲಿಯಂತೆ ಚೂಡಾರತ್ನಾ

ವಿನಯ ವಿರಹಿತನ ತಪಮುಂ=ವಿನಯವಿಲ್ಲದವನ ತಪಸ್ಸು; ಧನಮುಂ= ಧನವು; ಸತ್ಪಾತ್ರವ+ಅರಿದು=ಸತ್ಪಾತ್ರರು ಯಾರೆಂಬುದನ್ನು ತಿಳಿದು; ಕೊಡದನ= ಕೊಡದವನ; ಸಿರಿಯುಂ=ಸಿರಿಯು; ಮನವ+ಅರಿದು+ಒಲಿಸದ ಸತಿಯುಂ= ಮನಸ್ಸನ್ನು ಅರಿತು ಪ್ರೀತಿಸದ ಸತಿಯು; ತೆನೆಯಾಗದ ಶಾಲಿಯಂತೆ=ಕಾಳು ಕಟ್ಟದ ಸತ್ತ್ವವಿಲ್ಲದ ಜೊಳ್ಳು ಬತ್ತವಿದ್ದಂತೆ.

ವಿನಯವಿಲ್ಲದವನ ತಪಸ್ಸು ಹಾಗೂ ಧನ, ಸತ್ಪಾತ್ರರು ಯಾರೆಂದು ತಿಳಿದು ದಾನ ಕೊಡದವನ ಐಶ್ವರ್ಯ, ಮನಸ್ಸನ್ನು ಅರಿತು ಪ್ರೀತಿಸದ ಸತಿ- ಇವು ಸತ್ತ್ವಹೀನ ಬತ್ತದ ತೆನೆಯಂತೆ.

ವ್ಯರ್ಥವಾದವನ್ನು ಕುರಿತು ಹೇಳುವಾಗ ಅನೇಕ ದೃಷ್ಟಾಂತಗಳನ್ನು ತರುವುದು ನೀತಿಶತಕಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

೧೦೪

ಶ್ರೀಗುರುವಂ ನೆನೆಯಲ್ಕೆಡ
ರಾಗದು ಕಂಡಡೆ ಭವಂಗಳೋಡುವುವಲ್ತನು
ರಾಗದಿ ಚರಣಾಶ್ರಯ ಕೊಂ
ಡಾಗಳಿಹಪರಕೆ ಸೌಖ್ಯ ಚೂಡಾರತ್ನಾ

ಶ್ರೀಗುರುವಂ=ಶ್ರೇಷ್ಠಗುರುವನ್ನು; ನೆನೆಯಯಲ್ಕೆ+ಎಡರಾಗದು=ನೆನೆಯಲು ಯಾವುದೇ ತೊಂದರೆಯಾಗದು; ಕಂಡಡೆ= ನೋಡಿದ ಕೂಡಲೆ; ಭವಂಗಳು+ ಓಡುವುವು+ಅಲ್ತೆ=ಹುಟ್ಟು-ಸಾವುಗಳು ದೂರವಾಗುವುವಲ್ಲವೇ; ಅನುರಾಗದಿಂ= ಪ್ರೀತಿ ಯಿಂದ; ಚರಣ+ಆಶ್ರಯಕೊಂಡಾಗಳ್=ಪಾದಗಳನ್ನು ಆಶ್ರಯಿಸಿದಾಗ; ಇಹಪರಕೆ= ಇಹಪರಕೆ; ಸೌಖ್ಯ=ಸೌಖ್ಯ.

ಶ್ರೇಷ್ಠ ಗುರುವನ್ನು ನೆನೆಯಲು ಯಾವುದೇ ಎಡರುತೊಡರುಗಳು ಉಂಟಾ ಗುವುದಿಲ್ಲ. ಅವರನ್ನು ನೋಡಿದ ಕೂಡಲೇ ಹುಟ್ಟು-ಸಾವುಗಳು ದೂರವಾಗು

ವುವಲ್ಲವೇ. ಪ್ರೀತಿಯಿಂದ ಗುರುಗಳ ಪಾದಗಳನ್ನು ಆಶ್ರಯಿಸಿದರೆ ಇಹಕ್ಕೂ ಪರಕ್ಕೂ ಸೌಖ್ಯವುಂಟಾಗುತ್ತದೆ.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಹರಿದಾಸರ ವಾಣಿಗೆ ಅನುಗುಣವಾದ ಪದ್ಯವಿದು. ಶ್ರೇಷ್ಠ ಗುರುವಿನ ಪಾದಗಳನ್ನು ಅನುರಾಗದಿಂದ ಆಶ್ರಯಿಸಿದರೆ ಇಹಪರಗಳೆರಡಕ್ಕೂ ಸೌಖ್ಯವುಂಟಾಗುತ್ತದೆ. ಶಿಷ್ಯರನ್ನು ಸರಿದಾರಿಗೆ ತಂದು ಅವರ ಬದುಕು ಹಸನಾಗುವಂತೆ ಮಾಡುವವರು ಗುರುಗಳು. ಇದು ಸಾರ್ವಕಾಲಿಕವಾದ ಸತ್ಯ.

೧೦೫

ಶ್ರೀಗೆ ನೆಲೆಯಾವುದಧಿಕೋ
ದ್ಯೋಗಂ ಧರ್ಮಕ್ಕೆ ನೆಲೆಯಾವುದು ಸತ್ಯಂ
ತ್ಯಾಗಕ್ಕೆ ನೆಲೆಯಾವುದು ದಯೆ
ಬೇಗದೊಳೀವುದು ವಿವೇಕ ಚೂಡಾರತ್ನಾ

ಶ್ರೀಗೆ=ಲಕ್ಷ್ಮಿಗೆ, ಸಂಪತ್ತಿಗೆ; ನೆಲೆ ಯಾವುದು+ಅಧಿಕ+ಉದ್ಯೋಗಂ= ನೆಲೆ ಯಾವುದು, ಉನ್ನತವಾದ ಕೆಲಸ; ಧರ್ಮಕ್ಕೆ ನೆಲೆ ಯಾವುದು; ಸತ್ಯಂ=ಸತ್ಯ; ತ್ಯಾಗಕ್ಕೆ ನೆಲೆ ಯಾವುದು; ದಯೆ; ಬೇಗದೊಳ್+ಈವುದು= ಬೇಗನೆ ಕೊಡುವುದು; ವಿವೇಕ.

ಉನ್ನತವಾದ ಕೆಲಸದಿಂದ ಸಂಪತ್ತು ವೃದ್ಧಿಯಾಗುತ್ತದೆ. ಧರ್ಮಕ್ಕೆ ನೆಲೆ ಸತ್ಯ. ತ್ಯಾಗಕ್ಕೆ ನೆಲೆ ಯಾವುದೆಂದರೆ ದಯೆ. ಬೇಗನೆ ಒಳ್ಳೆಯದನ್ನು ಉಂಟು ಮಾಡುವುದು ವಿವೇಕ.

ಪರಿಶ್ರಮಪಟ್ಟು ದುಡಿದರೆ ಮಾತ್ರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಧ್ಯ. ಧರ್ಮಕ್ಕೆ ಸತ್ಯವೂ ತ್ಯಾಗಕ್ಕೆ ದಯೆಯೂ ನೆಲೆಯಾಗಿರುವಂತೆ ಸಿರಿಗೆ ಉನ್ನತ ಉದ್ಯೋಗವೇ ನೆಲೆ. ಶ್ರಮದಿಂದ ಗಳಿಸಿದ ಸಂಪತ್ತನ್ನು ಬೇಗನೆ ಕೊಟ್ಟುಬಿಡುವುದು ಒಳ್ಳೆಯದು ಎಂದು ಹೇಳುತ್ತ ಮನುಷ್ಯಜೀವನದ ನಶ್ವರತೆಯನ್ನು ಧ್ವನಿಸುತ್ತದೆ ಈ ಪದ್ಯ.

೧೦೬

ಶ್ರೀಯಿಲ್ಲದವನ ರೂಪುಂ
ತಾಯಿಲ್ಲದ ಸುತನು ಸತಿಯುಮಿಲ್ಲದ ನರನುಂ
ಪ್ರಾಯದೊಳಿಲ್ಲದ ಪದಪುಂ
ಮಾಯಾವಿಯ ತೆರನದಲ್ತೆ ಚೂಡಾರತ್ನಾ

ಶ್ರೀಯಿಲ್ಲದವನ ರೂಪುಂ=ಸಂಪತ್ತು ಅಥವಾ ಹಣವಿಲ್ಲದವನ ರೂಪು; ತಾಯಿಯಿಲ್ಲದ ಸುತನು=ತಾಯಿಯಿಲ್ಲದ ಮಗ; ಸತಿಯುಂ+ಇಲ್ಲದ ನರನುಂ= ಸತಿಯಿಲ್ಲದ ಮನುಷ್ಯನು; ಪ್ರಾಯದೊಳು+ಇಲ್ಲದ ಪದಪುಂ=ಪ್ರಾಯದಲ್ಲಿಲ್ಲದ ಸೊಬಗು, ಪ್ರೀತಿ; ಮಾಯಾವಿಯ ತೆರನದಲ್ತೆ=ಮೋಸಗಾರನ ರೀತಿಯಲ್ಲವೆ?

ಧನವಿಲ್ಲದ ಅಥವಾ ಸಂಪತ್ತಿಲ್ಲದವನ ರೂಪು, ತಾಯಿಯಿಲ್ಲದ ಮಗ, ಸತಿಯಿಲ್ಲದ ನರ, ಪ್ರಾಯದಲ್ಲಿಲ್ಲದ ಸೊಬಗು ಮೋಸಗಾರನ ರೀತಿಯಲ್ಲವೇ?

ಹಣ ಅಥವಾ ಸಂಪತ್ತು ಇಲ್ಲದವನ ಮುಖ ಕಳಾಹೀನವಾಗಿರುತ್ತದೆ. ಹಾಗೆಯೇ ತಾಯಿಯಿಲ್ಲದ ಮಗನನ್ನು ಬೇರೆಯವರು ಹೀನಾಯವಾಗಿ ಕಾಣುವರು. ಪ್ರಾಯದಲ್ಲಿ ಎಲ್ಲರೂ ಸುಂದರವಾಗಿ ಕಾಣುವುದು ಸಾಮಾನ್ಯ ಸಂಗತಿ. ಅದು ಪ್ರಕೃತಿದತ್ತವಾದುದು. ಸತಿಯಿಲ್ಲದ ನರನ ಪಾಡು ನಾಯಿಪಾಡು. ಮನೆಯಲ್ಲಿ ಹೆಣ್ಣೊಬ್ಬಳು ಇಲ್ಲದಿದ್ದರೆ ಗೃಹಸ್ಥನ ಜೀವನ ಅಸ್ತವ್ಯಸ್ತವಾಗಿರುತ್ತದೆ. ಗಂಡನಿಲ್ಲದ ಹೆಂಡತಿಯ ಬಗೆಗೆ ಯಾರೂ ಹೇಳುವುದಿಲ್ಲ. ಪುರುಷನಿಗಿಂತ ಸ್ತ್ರೀ ಸಂಸಾರ ನಿರ್ವಹಣೆಯಲ್ಲಿ ಜಾಣೆ. ಗಂಡನಿಲ್ಲದಿದ್ದರೂ ಸಂಸಾರ, ಮಕ್ಕಳು ಮೊದಲಾದ ಜವಾಬ್ದಾರಿಯನ್ನು ಕಷ್ಟಪಟ್ಟು ನಿಭಾಯಿಸಬಲ್ಲಳು. ಆದರೆ ಇದು ಗಂಡಸಿಗೆ ಕಷ್ಟಸಾಧ್ಯ.

೧೦೭

ಸಂಗೀತದ ಸಾಹಿತ್ಯದ
ಅಂಗನೆಯರನಂಗಸುಖವನರಿಯದ ಮನುಜಗೆ
ಭಂಗವು ಬೇರಿಲ್ಲ ಅವರವ
ರಂಗವನರಿಯದುದೆ ಭಂಗ ಚೂಡಾರತ್ನಾ

ಸಂಗೀತದ, ಸಾಹಿತ್ಯದ; ಅಂಗನೆಯರ+ಅನಂಗ+ಸುಖವನು+ಅರಿಯದ ಮನಜಗೆ=ಅಂಗನೆಯರ ಕಾಮಸುಖವನ್ನು ತಿಳಿಯದವನಿಗೆ; ಭಂಗವು=ಅವಮಾನ, ಬೇರೆ+ಇಲ್ಲ=ಬೇರೆ ಇಲ್ಲ; ಅವರವರ+ಅಂಗವನು+ಅರಿಯದುದೆ=ಅವರವರ ರೀತಿಯನ್ನು ತಿಳಿಯದೆ ಇರುವುದೆ; ಭಂಗ=ಅವಮಾನ.

ಸಂಗೀತ, ಸಾಹಿತ್ಯ, ಅಂಗನೆಯರ ಕಾಮದ ಸುಖ ತಿಳಿಯದವನಿಗೆ ಅವಮಾನ ಎಂಬುದು ಬೇರೆ ಇಲ್ಲ. ಅವರವರ ರೀತಿಯನ್ನು ತಿಳಿಯದಿರುವುದೇ ಮನುಜನಿಗೆ ಅವಮಾನ.

ವಿದ್ಯಾವಂತರಾದವರು ಸಂಗೀತ, ಸಾಹಿತ್ಯ, ಕಾಮಸುಖ ಇತ್ಯಾದಿಗಳನ್ನೆಲ್ಲ ತಿಳಿದಿರಬೇಕು. ಇವುಗಳನ್ನು ತಿಳಿಯದೆ ಇರುವುದೇ ಅವಮಾನ. ಇದಕ್ಕಿಂತ ಬೇರೆ ಅವಮಾನವಿಲ್ಲ ಎಂದಿದ್ದಾನೆ ಕವಿ. ಸಂಗೀತ, ಸಾಹಿತ್ಯ ಮತ್ತು ಮನ್ಮಥ ಸುಖ ಎಲ್ಲರಿಗೂ ತಿಳಿದಿರಬೇಕೆಂದೇನಿಲ್ಲ. ಆದರೆ ಸಮಯ ಬಂದಾಗ ಈ ವಿಷಯಗಳು ತಿಳಿಯದಿದ್ದರೆ ಅವಮಾನವಾಗುವುದೆಂದು ಕವಿಯ ಭಾವನೆ.

೧೦೪

ಸತ್ಯದಲಿ ಸಹಜ ಧರ್ಮದ
ಲುತ್ತ ವ್ಯವಸಾಯದಿಂದ ಲೇಸಿಂ ದಯದಿಂ
ಪತ್ತಧನಂ ಗುರುಹಿರಿಯರಿ
ಗಿತ್ತ ಧನಂ ತನ್ನ ಧನವು ಚೂಡಾರತ್ನಾ

ಸತ್ಯದಲಿ; ಸಹಜ ಧರ್ಮದಲಿ+ಉತ್ತ=ಸಹಜವಾಗಿ ಭೂಮಿಯನ್ನು ಹಸನುಗೊಳಿಸಿ ವ್ಯವಸಾಯದಿಂದ; ಲೇಸಿಂ=ಒಳ್ಳೆಯತನದಿಂದ; ದಯದಿಂ=ದಯದಿಂದ; ಪೆತ್ತ ಧನಂ=ಸಂಪಾದಿಸಿದ ಹಣ; ಗುರುಹಿರಿಯರಿಗೆ+ಇತ್ತ ಧನಂ= ಗುರುಹಿರಿಯರಿಗೆ ಕೊಟ್ಟ ಧನ; ತನ್ನಧನಂ=ತನ್ನ ಹಣ.

ಸತ್ಯದಲಿ, ಸಹಜ ಧರ್ಮದಲಿ ಉತ್ತು ವ್ಯವಸಾಯ ಮಾಡಿದರೆ ಒಳ್ಳೆಯದು, ತಾನು ಸಂಪಾದಿಸಿದ ಹಣ, ಗುರುಹಿರಿಯರಿಗೆ ಕೊಟ್ಟ ಹಣ ತನ್ನದು.

ಸತ್ಯ, ಧರ್ಮ, ದಯೆ ಇತ್ಯಾದಿಗಳಿಂದ ಕೂಡಿ ಶ್ರಮಪಟ್ಟ ಉತ್ತು ವ್ಯವಸಾಯ ಮಾಡುವುದು ಒಳ್ಳೆಯದು. ಸ್ವಂತ ದುಡಿಮೆಯಿಂದ ಹಣವನ್ನು ಗುರುಹಿರಿಯರಿಗೆ ನೀಡಿದರೆ ಒಳ್ಳೆಯದು. ಹಾಗಲ್ಲದೆ ಯಾರೋ ಗಳಿಸಿಟ್ಟದ್ದನ್ನು ದಾನ ಧರ್ಮಕ್ಕೆ ಉಪಯೋಗಿಸಿದರೇನು ಫಲ? ತಾನೇ ಸಂಪಾದಿಸಿದ ಹಣವನ್ನು ಗುರುಹಿರಿಯರಿಗೆ ನೀಡಿದರೆ ಒಳ್ಳೆಯದಲ್ಲವೇ?

೧೦೯

ಸಲಿಲದಿ ವನರುಹಮಿರಲದ
ನಲರಿಸುವಂ ದಿನಪ ತನ್ನ ನಿಜಕರ ಕಿರಣದಿ
ಜಲ ತಪ್ಪಿದರೊಣಗಿಸುವಂ
ನೆಲೆಗೆಟ್ಟರ್ಗಿಷ್ಟರುಂಟೆ ಚೂಡಾರತ್ನಾ

ಸಲಿಲದಿ=ನೀರಿನಲ್ಲಿ,ವನರುಹಂ+ಇರಲ್+ಅದನು+ಅಲರಿಸುವಂ ದಿನಪ= ಕಮಲ ಇದ್ದರೆ, ಅದನ್ನು ಅರಳಿಸುವವನು ಸೂರ್ಯ; ತನ್ನ ನಿಜಕರ ಕಿರಣದಿ=ತನ್ನ ಕಿರಣದಿಂದ; ಜಲ ತಪ್ಪಿದರೆ ಒಣಗಿಸುವಂ=ಜಲದಿಂದ ಹೊರಬಿದ್ದರೆ ಅದನ್ನು ಒಣಗಿಸುವ, ನೆಲೆಗೆಟ್ಟರ್ಗೆ+ಇಷ್ಟರುಂಟೆ=ನೆಲೆಗೆಟ್ಟವರಿಗೆ ಇಷ್ಟರಿರುವರೇ?

ನೀರಿನಲ್ಲಿ ಕಮಲ ಇದ್ದರೆ ಅದನ್ನು ಅರಳಿಸುವವನು ಸೂರ್ಯ ತನ್ನ ಕಿರಣಗಳಿಂದ. ಹಾಗೆಯೇ ನೀರಿನಿಂದ ಹೊರಬಿದ್ದ ಕಮಲವನ್ನು ಅದೇ ಸೂರ್ಯನ ಕಿರಣ ಒಣಗಿಸುತ್ತದೆ. ನೆಲೆ ತಪ್ಪಿದವರಿಗೆ ಇಷ್ಟರಿರುವುದುಂಟೇ?

'ಪರಸ್ಥಳವೊ ಪರದಾಟವೋ' ಎಂಬಂತೆ ತಮ್ಮದಲ್ಲದ ಸ್ಥಳದಲ್ಲಿದ್ದರೆ ಪಾಡು ಪಡುವುದು ಅಥವಾ ಕಷ್ಟಪಡುವುದು ಖಚಿತ. ಇದನ್ನು ಮಾನವನಿಗೆ ಅನ್ವಯಿಸಿ ಹೇಳಲಾಗಿದೆ. ಯಾವುದೇ ಆದರೂ ಎಲ್ಲೆಲ್ಲಿ ಇರಬೇಕೊ ಅಲ್ಲಿದ್ದರೆ ಚೆನ್ನು. ನೆಲೆ ತಪ್ಪಿದರೆ ಮಿತ್ರರೂ ಶತ್ರುಗಳಾಗುವ ಸಂಭವವಿರುತ್ತದೆ. ಅದನ್ನು ಕಮಲದ ಹೂವಿನ ಉದಾಹರಣೆ ಮೂಲಕ ಕವಿ ತಿಳಿಸಿದ್ದಾನೆ.

೧೧೦

ಸಾರಾಸಾರ ವಿವೇಕ ವಿ
ಚಾರವನರಿಯದರ ಕೂಡೆ ಸುಜನರು ನುಡಿಯ
ಲ್ಕಾರಯ್ಯದೆ ಹೊನ್ನಂಬಂ
ನೀರೊಳಗೆಚ್ಚಂತೆ ನೋಡು ಚೂಡಾರತ್ನಾ

ಸಾರಾಸಾರ ವಿವೇಕ=ಒಳ್ಳೆಯದು ಕೆಟ್ಟದ್ದರ ವಿವೇಕವನ್ನು; ವಿಚಾರವನು+ ಅರಿಯದರ=ವಿಚಾರವನ್ನು ಅರಿಯದವರ; ಕೂಡೆ=ಜತೆಯಾದರೆ; ಸುಜನರು; ನುಡಿಯಲ್ಕೆ+ಆರಯ್ಯದೆ=ನುಡಿಯಲು ವಿಚಾರಿಸದೆ ಪ್ರಯತ್ನಿಸುವುದು; ಹೊನ್ನ+ ಅಂಬಂ= ಚಿನ್ನದ ಬಾಣವನು; ನೀರೊಳಗೆ+ಎಚ್ಚಂತೆ=ನೀರೊಳಗೆ ಬಿಟ್ಟಂತೆ ನೋಡು.

ಒಳ್ಳೆಯದು ಕೆಟ್ಟದ್ದೆಂಬ ವಿವೇಕವಿಲ್ಲದೆ ವಿಚಾರ ಮಾಡಿ ತಿಳಿಯದವರ ಜೊತೆ ಸುಜನರು ನುಡಿಯಬಾರದು. ಒಂದು ವೇಳೆ ನುಡಿದರೆ ನೀರೊಳಗೆ ಚಿನ್ನದ ಬಾಣವನ್ನು ಬಿಟ್ಟಂತೆ ವ್ಯರ್ಥ.

'ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು' ಎಂಬ ಮಾತೊಂದಿದೆ. ಸಮಯ ಸಂದರ್ಭಕ್ಕೆ ಅನುಗುಣವಾಗಿ, ಒಳ್ಳೆಯದೊ ಕೆಟ್ಟದ್ದೊ ಎಂದು ವಿವೇಕಪೂರ್ಣವಾಗಿ ವಿಚಾರಿಸಿ ಮಾತನಾಡುವುದು ಒಳ್ಳೆಯದು. ವಿವೇಕವಿಲ್ಲದವರ ಮುಂದೆ ಜಾಣರಾದ ಸುಜನರು ವ್ಯರ್ಥವಾದ ಮಾತುಗಳನ್ನು ಆಡಿ ಪ್ರಯೋಜನವಿಲ್ಲ. ಅವಿವೇಕಿಗಳ ಮುಂದೆ ಸುಮ್ಮನೆ ಮಾತನಾಡಬಾರದೆಂದು ಎಚ್ಚರಿಕೆ ನೀಡಲಾಗಿದೆ.

೧೧೧

ಸಾವಿನ ಬಾಧೆಗೆ ಸಿಲುಕದ
ನಾವಂ ದಿಕ್ಪಾಲರನಾಳುಗೆಲಸಂಬೊಗಿಸಿದ
ರಾವಣನನೊಯ್ದನೆನೆ ಮನು
ಜಾವಳಿಗಂಜುವನೆ ಯಮನು ಚೂಡಾರತ್ನಾ

ಸಾವಿನ ಬಾಧೆಗೆ ಸಿಲುಕದವನ್+ಆವಂ=ಸಾವಿನ ಬಾಧೆಗೆ ಸಿಲುಕದಿರುವವನು ಯಾರು; ದಿಕ್ಪಾಲರನ್+ಆಳು+ ಕೆಲಸಂಬೊಗಿಸಿದ=ದಿಕ್ಪಾಲರನ್ನು ಆಳುಗಳಾಗಿ ಮಾಡಿಕೊಂಡ; ರಾವಣನನ್+ಒಯ್ದನೆನೆ=ರಾವಣನನ್ನು ಕೊಂಡೊಯ್ದನು ಎಂದರೆ; ಮನುಜಾವಳಿಗೆ+ಅಂಜುವನೆ=ಮಾನವ ಸಮೂಹಕ್ಕೆ ಹೆದರುವನೆ; ಯಮನು.

ಸಾವಿನ ಬಾಧೆಗೆ ಸಿಲುಕದಿರುವವನು ಯಾರು; ದಿಕ್ಪಾಲಕರನ್ನೇ ತನ್ನ ಆಳುಗಳನ್ನಾಗಿಸಿಕೊಂಡಿದ್ದ ರಾವಣನನ್ನೇ ಯಮನು ಕೊಂಡೊಯ್ದ. ಇನ್ನು ಮಾನವ ಸಮೂಹಕ್ಕೆ ಹೆದರುವನೆ ಯಮ ಎಂದು ಕವಿ ಪ್ರಶ್ನಿಸಿದ್ದಾನೆ.

'ಹುಟ್ಟು ಅನಿರೀಕ್ಷಿತ, ಸಾವು ಖಚಿತ' ಎಂಬ ಹೇಳಿಕೆಗೆ ಅನುಗುಣವಾಗಿ ಹುಟ್ಟಿದ ಜೀವಿ ಒಂದಿಲ್ಲೊಂದು ದಿನ ಸಾಯಲೇಬೇಕು. ಯಮ ಯಾರನ್ನೂ ಬಿಡುವುದಿಲ್ಲ. ಯಾವ ರಾಜ ಮಹಾರಾಜರಾದರೇನು? ಅಷ್ಟದಿಕ್ಪಾಲಕರನ್ನೇ ತನ್ನ ಆಳುಗಳನ್ನಾಗಿಸಿಕೊಂಡು ದುಡಿಸಿದಂತಹ ರಾವಣನನ್ನೇ ಯಮ ಬಿಡದೆ ಎಳೆದೊಯ್ದ. ಇನ್ನು ಮಾನವರನ್ನು ಬಿಡಲು ಸಾಧ್ಯವೇ? ಸಾವು ಎಂಬುದು ಎಲ್ಲರಿಗೂ ಕಟ್ಟಿಟ್ಟದ್ದೇ.

೧೧೨

ಸಿರಿ–ಬಡತನ ಸುಖ–ದುಃಖಂ
ಪರಿಣಾಮಂ ಶೋಕ–ಮೋಹ ಜನನಂ–ಮರಣಂ
ಕರುಣವು ಮನ್ನಣೆಯೆಂಬಿವು
ಸರಿಸರಿ ನರರಿಂಗೆ ಸುಕವಿ ಚೂಡಾರತ್ನಾ

ಸಿರಿ ಬಡತನ=ಸಿರಿ, ಬಡತನ; ಸುಖ ದುಃಖಂ=ಸುಖದುಃಖಗಳು; ಪರಿಣಾಮ=ಇವುಗಳ ಪರಿಣಾಮ; ಶೋಕ, ಮೋಹ, ಜನನ, ಮರಣ, ಕರುಣೆ, ಮನ್ನಣೆ ಎಂಬಿವು; ಸರಿಸರಿ ನರರಿಂಗೆ=ಮನುಷ್ಯರಿಗೆ ಸಹಜವಾದುವು; ಸುಕವಿ ಚೂಡಾರತ್ನಾ=ಸುಕವಿಯಾದ ಚೂಡಾರತ್ನನೇ.

ಸುಕವಿಯಾದ ಚೂಡಾರತ್ನನೇ! ಸಿರಿತನ, ಬಡತನ, ಸುಖದುಃಖಗಳು, ಇವುಗಳ ಪರಿಣಾಮ, ಶೋಕ, ಮೋಹ, ಜನನ, ಮರಣ, ಕರುಣೆ, ಮನ್ನಣೆ ಎಂಬಿವು ಮನುಷ್ಯರಿಗೆ ಸಹಜವಾದುವು.

ಸುಖವಿದ್ದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಸಮಚಿತ್ತದಿಂದ ಬಾಳುವಂತೆ ಸಲಹೆ ನೀಡಲಾಗಿದೆ.

೧೧೩

ಸಿರಿಯೊಳು ದಾನಂ ವಿದ್ಯಾ
ಪರಿಣತಿಯೊಳ್ ನಯಮಧಿಕ ಪದದೊಳು ಪರಹಿತ
ಪುರುಷಂಗಿಂತಿವು ಸರ್ವಾ
ಭರಣಂಗಳ್ ಬೇರೆ ತೊಡವೆ ಚೂಡಾರತ್ನಾ

ಸಿರಿಯೊಳು=ಸಿರಿಯಲ್ಲಿ; ದಾನಂ=ದಾನ;ವಿದ್ಯಾ=ವಿದ್ಯೆಯ; ಪರಿಣತಿಯೊಳ್ +ನಯಂ+ಅಧಿಕ=ಪರಿಣತಿಯಲ್ಲಿ ವಿನಯ ಹೆಚ್ಚು; ಪದದೊಳು=ಮಾತಿನಲ್ಲಿ; ಹಿತುವುಂ=ಹಿತವೂ; ಪುರುಷಂಗೆ+ಇಂತಿವು=ಪುರುಷನಿಗೆ ಇವು, ಸರ್ವಾಭರಣಂಗಳ್ = ಸರ್ವಾಭರಣಗಳು; ಬೇರೆ ತೊಡವೆ=ಬೇರೆ ಒಡವೆ ಇವೆಯೇ.

ಸಿರಿಯಿದ್ದಲ್ಲಿ ದಾನ, ವಿದ್ಯೆಯ ಪರಿಣತಿಯಿದ್ದಲ್ಲಿ ವಿನಯ, ಮಾತಿನಲ್ಲಿ ಬೇರೆಯವರಿಗೆ ಹಿತವನ್ನುಂಟು ಮಾಡುವುದು- ಇವು ಪುರುಷನಾದವನಿಗೆ ಸರ್ವಾ ಭರಣಗಳು. ಇದಕ್ಕಿಂತ ಬೇರೆ ಒಡವೆಗಳು ಇವೆಯೇ?

ಮಾನವನಿಗೆ ಸದ್ಗುಣಗಳೇ ಆಭರಣ. ದಾನಧರ್ಮ, ಸನ್ನಡತೆ, ನಯ ವಿನಯ, ಹಿತೋಕ್ತಿಗಳಿಂದ ಶೋಭಿಸುವವನಿಗೆ ಬೇರೆ ಆಭರಣಗಳ ಅಗತ್ಯವಾದರೂ ಏನು?

೧೧೪

ಸುತರಿಲ್ಲದ ಧನ ಶೂನ್ಯಂ
ಅತಿಪ್ರಿಯದ ಬಂಧುವಿಲ್ಲದಾ ಪುರ ಶೂನ್ಯಂ

ಸತಿಯಿಲ್ಲದ ಗೃಹ ಶೂನ್ಯಂ
ಅತಿ ಮೂರ್ಖನ ಹೃದಯಶೂನ್ಯ ಚೂಡಾರತ್ನಾ

ಸುತರಿಲ್ಲದ ಧನ ಶೂನ್ಯಂ=ಗಂಡು ಮಕ್ಕಳಿಲ್ಲದ ಹಣ ಶೂನ್ಯ; ಅತಿಪ್ರಿಯದ ಬಂಧುವಿಲ್ಲದ ಆ ಪುರ ಶೂನ್ಯಂ=ಪ್ರೀತಿಪಾತ್ರರಾದ ಬಂಧುಗಳಿಲ್ಲದ ಆ ಊರು ಶೂನ್ಯ ಅಥವಾ ಪ್ರಯೋಜನಕ್ಕಿಲ್ಲ; ಸತಿಯಿಲ್ಲದ ಗೃಹ ಶೂನ್ಯಂ= ಹೆಂಡತಿಯಿಲ್ಲದ ಮನೆ ಶೂನ್ಯ; ಆ ಮನೆ ಶೂನ್ಯ; ಆ ಮನೆ ಕೆಲಸಕ್ಕೆ ಬಾರದು; ಅತಿ ಮೂರ್ಖನ ಹೃದಯ ಶೂನ್ಯ.

ಸುತರಿಲ್ಲದ ಧನ, ಅತಿಪ್ರಿಯದ ಬಂಧುಗಳಿಲ್ಲದ ಊರು, ಸತಿಯಿಲ್ಲದ ಮನೆ, ಮೂರ್ಖನ ಹೃದಯ ಶೂನ್ಯ.

ಲೋಕದಲ್ಲಿ ಪ್ರಯೋಜನವಿಲ್ಲದ ವಿಷಯಗಳನ್ನು ಕವಿ ಹೆಸರಿಸಿದ್ದಾನೆ

. ೧೧೫

ಸುರತರುವದಾವುದೀವನ
ಕರತಳಮರೇಂದ್ರವಾಸವಾವುದು ಪುಣ್ಯಾ
ತ್ಮರ ಸಂಗಮಮರನಾವಂ
ಪರಹಿತ ಚರಿತಂ ವಿವೇಕ ಚೂಡಾರತ್ನಾ

ಸುರತರುವು+ಅದು+ಆವುದು=ದೇವಲೋಕದ ಮರ ಯಾವುದು?; ನೀಡುವವನ ಕರತಳಂ=ದಾನಿಯಾದವನ ಅಂಗೈ; ಇಂದ್ರನ ವಾಸ+ಆವುದು=ಇಂದ್ರನ ಆವಾಸಸ್ಥಾನ ಯಾವುದು; ಪುಣ್ಯಾತ್ಮರ ಸಂಗಮಂ=ಪುಣ್ಯಾತ್ಮರ ಸಹವಾಸ; ಅಮರನ+ ಆವಂ=ಅಮರನು ಯಾರು; ಪರಹಿತ ಚರಿತಂ=ಇತರರ ಹಿತವನ್ನು ಕೋರುವ ಚರಿತ್ರೆ ಇರುವವನು; ವಿವೇಕಿ= ವಿವೇಕಿಯಾಗಿರುತ್ತಾನೆ.

ದೇವಲೋಕದ ಮರ ಯಾವುದು, ದಾನಿಯಾದವನ ಅಂಗೈ ತುಂಬಿರುವುದು, ಇಂದ್ರನ ಆವಾಸಸ್ಥಾನ ಯಾವುದು, ಪುಣ್ಯಾತ್ಮರ ಸಹವಾಸ, ಅಮರನು ಯಾರು ಪರಹಿತವನ್ನು ಬಯಸುವ ಗುಣವುಳ್ಳವನು ವಿವೇಕಿ.

ಕಲ್ಪವೃಕ್ಷಗಳಂಥವನ್ನು ಉದಾಹರಣೆಯಾಗಿ ಕೊಟ್ಟು ಪರಿಹಿತವನ್ನು ಕೋರುವವನೇ ವಿವೇಕಿ ಎಂಬುದನ್ನೂ ಕವಿ ಸ್ಪಷ್ಟಪಡಿಸಿದ್ದಾನೆ.

೧೧೬

ಸುರರಾಕರ್ಷಣ ಮಂತ್ರಂ
ವರಮುಕ್ತ್ಯಂಗನೆಗೆ ತಾನೆ ಮೋಹನ ಮಂತ್ರಂ
ದುರಿತೋಚ್ಚಾಟನ ಮಂತ್ರಂ
ಗುರುನಾಮದ ಮಹಿಮೆಯಲ್ತೆ ಚೂಡಾರತ್ನಾ

ಸುರರಾಕರ್ಷಣ ಮಂತ್ರಂ=ದೇವತೆಗಳನ್ನು ಆಕರ್ಷಿಸುವ ಮಂತ್ರ; ವರಮುಕ್ತ್ಯಂಗನೆಗೆ=ಶ್ರೇಷ್ಠಳಾದ ಮುಕ್ತಿಯೆಂಬ ಅಂಗನೆಗೆ; ತಾನೆ ಮೋಹನ ಮಂತ್ರಂ= ಅದು ಮೋಹನ ಮಂತ್ರ; ದುರಿತ+ಉಚ್ಚಾಟನ ಮಂತ್ರಂ=ಪಾಪಗಳನ್ನು ಹೋಗ ಲಾಡಿಸುವ ಮಂತ್ರ; ಗುರುನಾಮದ ಮಹಿಮೆ+ಅಲ್ತೆ=ಗುರುನಾಮದ ಮಹಿಮೆ ಅಲ್ಲವೇ.

ಸುರರನ್ನು ಆಕರ್ಷಿಸುವ ಮಂತ್ರ, ಶ್ರೇಷ್ಠಳಾದ ಮುಕ್ತಿಯೆಂಬ ಅಂಗನೆಗೆ ಮೋಹನ ಮಂತ್ರ, ಪಾಪಗಳನ್ನು ಪರಿಹರಿಸುವ ಮಂತ್ರ, ಗುರುನಾಮದ ಮಹಿಮೆ ಅಲ್ಲವೇ?

ಗುರುವಿನ ಮಹತ್ತ್ವವನ್ನು ತಿಳಿಸಿ ಗುರುನಾಮದ ಮಹಿಮೆ ಎಂಥದೆಂಬುದನ್ನು ಸಾರುತ್ತದೆ. ಗುರುನಾಮ ಅಥವಾ ಗುರುಸ್ತುತಿ ಎಂಬುದು ಸುರರನ್ನು ಆಕರ್ಷಿಸುವ ಮಂತ್ರ, ಶ್ರೇಷ್ಠಳಾದ ಮುಕ್ತ್ಯಂಗನೆಗೆ ಮೋಹನ ಮಂತ್ರ, ದುರಿತಗಳನ್ನು ಉಚ್ಚಾಟಿಸುವ ಮಂತ್ರವಾಗಿದೆ.

ಮಂತ್ರವೆಂದರೆ ದೇವರನ್ನು ಜಪಿಸುವಂತಹ ಉಕ್ತಿಗಳು. ಇಲ್ಲಿ ಕವಿ ಗುರುವಿನ ಸ್ತುತಿಯನ್ನೇ ಅಥವಾ ಗುರುವಿನ ನಾಮದ ಮಹಿಮೆಯನ್ನೇ ಮಂತ್ರಕ್ಕೆ ಹೋಲಿಸಿದ್ದಾನೆ. ಗುರು ಹಾಗೂ ದೇವರು ಸಮಾನರು. ಇಲ್ಲಿ ಗುರುವನ್ನು ದೇವರ ಸ್ಥಾನದಲ್ಲಿಟ್ಟು ನೋಡಿರುವುದು ವಿಶಿಷ್ಟವಾದ ವಿಚಾರ. “ಗುರುಃ ಬ್ರಹ್ಮ, ಗುರುಃ

ವಿಷ್ಣುಃ, ಗುರುಃ ದೇವಃ ಮಹೇಶ್ವರಃ'' ಎಂಬ ಹೇಳಿಕೆಯನ್ನು ಈ ಪದ್ಯ ಸೂಚಿಸುತ್ತದೆ.

೧೧೭

ಸುಳಿಗಡಲೊಳಗುದಿಸಿದ ಸಿರಿ
ಸುಳಿಸುಳಿದಾಡುವಳು ನಿಲ್ಲಳೆಲ್ಲಿಯುಮತ್ತಾ
ಸುಳಿಯುಳ್ಳಲ್ಲಿಯೆ ಕೂಡದಿರೆ
ಸುಳಿಯಳು ತನ್ನತ್ತ ಲಕ್ಷ್ಮಿ ಚೂಡಾರತ್ನಾ

ಸುಳಿ+ಕಡಲು+ಒಳಗೆ+ಉದಿಸಿದ=ಸುಳಿಗಡಲ ಒಳಗೆ ಹುಟ್ಟಿದ; ಸಿರಿ=ಲಕ್ಷ್ಮಿ; ಸುಳಿಸುಳಿದು+ಆಡುವಳು=ಸುಳಿಸುಳಿದು ಆಡುವಳು; ನಿಲ್ಲಳು+ಎಲ್ಲಿಯುಂ= ಎಲ್ಲಿಯೂ ನಿಲ್ಲುವುದಿಲ್ಲ, ಅತ್ತ ಆ; ಸುಳಿ+ಉಳ್ಳ+ಲ್ಲಿಯೆ=ಸುಳಿಯಿರುವ ಅದೇ ಸ್ಥಳದಲ್ಲಿ; ಕೂಡ ದಿರೆ = ಕೂಡದೆ ಇರಲು; ಸುಳಿಯಳು=ಸುಳಿಯುವುದಿಲ್ಲ; ತನ್ನತ್ತ= ಕಡೆಗೆ; ಲಕ್ಷ್ಮಿ.

ಸುಳಿಗಡಲಿನ ಒಡಲಿಂದ ಜನಿಸಿದ ಲಕ್ಷ್ಮಿ, ಸುಳಿಸುಳಿದಾಡುವಳು, ಎಲ್ಲಿಯೂ ನಿಲ್ಲುವುದಿಲ್ಲ, ಅತ್ತ ಆ ಸುಳಿಯಿರುವ ಅದೇ ಸ್ಥಳದಲ್ಲಿ ತನಗೆ ಬೇಡ ಎನಿಸಿದರೆ ಅಥವಾ ಸರಿ ಕಾಣದಿದ್ದರೆ ಆ ಕಡೆಗೆ ಲಕ್ಷ್ಮಿ ಸುಳಿಯುವುದಿಲ್ಲ.

ಲಕ್ಷ್ಮಿ ಚಂಚಲೆ, ಐಶ್ವರ್ಯ ಸ್ಥಿರವಲ್ಲ, ಸಿರಿಯನ್ನು ನಂಬಿ ಕೂರಬೇಡ ಎಂದು ತಿಳಿವಳಿಕೆ ನೀಡುವ ಪದ್ಯವಿದು.

೧೧೮

ಸ್ಶೈರಣೆಯೆಂಬುದು ಮೈಸಿರಿ
ಸ್ಶೈರಣೆಯುಂ ಜಪತಪವು ದಾನವು ಧರ್ಮಂ
ಸ್ಶೈರಣೆಯೆ ಶಾಶ್ವತ ಸುಖಂ
ಸ್ಶೈರಣೆಯೆ ಸಕಲರಿಗೆ ಹಿತ ಚೂಡಾರತ್ನಾ

ಸೈರಣೆ+ಎಂಬುದು ಮೈಸಿರಿ=ಸಹನೆ ಎಂಬುದು ಸೌಂದರ್ಯ; ಸೈರಣೆ ಯುಂ= ಸೈರಣೆಯು ಜಪತಪವು; ದಾನವು ಧರ್ಮವು; ಸೈರಣೆಯ ಶಾಶ್ವತ ಸುಖಂ=ಸಹನೆಯೆಂಬುದು ಶಾಶ್ವತವಾದ ಸುಖ; ಸೈರಣೆಯೆ ಸಕಲರಿಗೆ ಹಿತ= ಸಹನೆಯೇ ಎಲ್ಲರಿಗೂ ಹಿತವಾದುದು.

ಸಹನೆಯೇ ಸೌಂದರ್ಯ, ಸಹನೆಯೇ ಜಪ, ತಪ, ದಾನ, ಧರ್ಮ, ಸಹನೆಯೇ ಶಾಶ್ವತ ಸುಖ, ಸಹನೆಯೇ ಎಲ್ಲರಿಗೂ ಹಿತವಾದುದು.

'ಸಹನಾವವತು, ಸಹನೌಭುನಕ್ತು' ಮೊದಲಾದ ಉಪನಿಷದ್ವಾಕ್ಯಗಳು ಭಾರತೀಯರಲ್ಲಿ ಬೇರೂರಿವೆ. ಸರ್ವೇಪಲ್ಲಿ ರಾಧಾಕೃಷ್ಣನ್ ಸಹನೆಯೇ ಸಂಸ್ಕೃತಿ ಎನ್ನುತ್ತಾರೆ. ಅಂಥ ಸಹನೆಯನ್ನು ಕವಿ ವೈಭವೀಕರಿಸಿದ್ದಾನೆ.

೧೧೯

ಸ್ತ್ರೀಯರನೊಲಿಸುವೊಡಂ ಕವಿ
ನಾಯಕನೆನಿಸುವೊಡೆ ತನ್ನ ಕೃತಿ ಚಂದ್ರಾರ್ಕ
ಸ್ಥಾಯಿಯೆನಿಸುವೊಡೆ ಬಲ್ಲರ
ಬಾಯಂ ಪೊಕ್ಕೋದಿ ಕಲಿಕೆ ಚೂಡಾರತ್ನಾ

ಸ್ತ್ರೀಯರನ್+ಒಲಿಸುವೊಡಂ=ಸ್ತ್ರೀಯರನ್ನು ಒಲಿಸಿಕೊಳ್ಳಬೇಕಾದರೆ; ಕವಿ ನಾಯಕನ್+ಎನಿಸುವೊಡೆ= ಕವಿ ಉನ್ನತ ಸ್ಥಾನ ಪಡೆಯಬೇಕಾದರೆ; ತನ್ನ ಕೃತಿ; ಚಂದ್ರ+ಅರ್ಕ=ಚಂದ್ರ ಸೂರ್ಯ; ಸ್ಥಾಯಿ+ಎನಿಸುವೊಡೆ=ಶಾಶ್ವತವಾಗಿ ಇರಬೇಕೆನ್ನುವುದಾದರೆ; ಬಲ್ಲರ ಬಾಯಂ=ಬಲ್ಲವರ ಅಥವಾ ವಿದ್ವಾಂಸರ ಬಾಯಿಯನ್ನು; ಪೊಕ್ಕು+ಓದಿ=ಹೊಕ್ಕುಓದಿ; ಕಲಿಗೆ=ಕಲಿಯುವಂತಾಗಲಿ.

ಸ್ತ್ರೀಯರನ್ನು ಒಲಿಸಿಕೊಳ್ಳಬೇಕಾದರೆ, ಕವಿ ನಾಯಕ ಎನಿಸಿಕೊಳ್ಳಬೇಕಾದರೆ ತನ್ನ ಕೃತಿ ಸೂರ್ಯ ಚಂದ್ರರಿರುವ ತನಕ ಶಾಶ್ವತವಾಗಿ ಇರಬೇಕೆನ್ನುವುದಾದರೆ ವಿದ್ವಾಂಸರ ಬಳಿ ಚೆನ್ನಾಗಿ ಓದಿ ಕಲಿತು ತಿಳಿದುಕೊಳ್ಳಬೇಕು.

ಈ ಪದ್ಯ ವಿದ್ಯೆಯ ಮಹತ್ತ್ವವನ್ನು ಕುರಿತು ಹೇಳುತ್ತಿದೆ. ಸಂಸಾರದಲ್ಲಿ ಸ್ತ್ರೀಯೊಡನೆ ಚೆನ್ನಾಗಿರಬೇಕಾದರೆ, ಕವಿ ಉನ್ನತ ಸ್ಥಾನ ಪಡೆಯಬೇಕಾದರೆ, ತಾನು

ರಚಿಸಿದ ಗ್ರಂಥ ಆ ಚಂದ್ರಾರ್ಕ ಸ್ಥಾಯಿಯಾಗಿರಬೇಕಾದರೆ ಒಳ್ಳೆಯ ಗುರುವಿನ ಬಳಿ ಚೆನ್ನಾಗಿ ಅಭ್ಯಾಸಮಾಡಿ ವಿವೇಕವಂತನಾದಾಗ ಮಾತ್ರ ಸಾಧ್ಯ. ಹಾಗಲ್ಲದಿದ್ದರೆ ವಿವೇಚನಾರಹಿತ ನಡೆವಳಿಕೆಯಿಂದ ಬದುಕೇ ಹಾಳಾಗುವಂತೆ ಮಾಡಿಕೊಳ್ಳುವುದು ಸರಿಯಲ್ಲ ಎಂಬ ತಿಳಿವನ್ನು ನೀಡುತ್ತಿದ್ದಾನೆ ಶತಕಕಾರ.

೧೨೦

ಸ್ಮರಭಯಮಂ ಮಾಣಿಪ ವಧು
ದರಿದ್ರಭಯಮಂ ನಿವಾರಿಪಾಳ್ದಂ ಯಮಕಿಂ
ಕರಭಯಮಂ ಮಾಣಿಪ ಗುರು
ದೊರಕೊಂಬುದು ಪುಣ್ಯಮೊದವು ಚೂಡಾರತ್ನಾ

ಸ್ಮರಭಯಮಂ ಮಾಣಿಪ ವಧು=ಮನ್ಮಥನ ಬಾಧೆಯನ್ನು ಹೋಗಲಾಡಿಸುವ ಹೆಂಡತಿ; ದರಿದ್ರ ಭಯಮಂ ನಿವಾರಿಪ+ಆಳ್ದಂ=ದಾರಿದ್ರ್ಯವನ್ನು ನಿವಾರಿಸುವ ರಾಜ; ಯಮಕಿಂಕರ ಭಯಮಂ ಮಾಣಿಪ ಗುರು=ಯಮನ ಆಳುಗಳ ಭಯವನ್ನು ಶಮನಗೊಳಿಸಿದ ಗುರು; ದೊರಕೊಂಬುದು=ದೊರೆಯುವುದು; ಪುಣ್ಯಂ+ ಒದವು= ಪುಣ್ಯ ಪ್ರಾಪ್ತಿಯಾದಂತೆ.

ಮನ್ಮಥ ಬಾಧೆಯನ್ನು ಹೋಗಲಾಡಿಸುವ ಹೆಂಡತಿ, ದಾರಿದ್ರ್ಯವನ್ನು ನಿವಾರಿಸುವ ರಾಜ, ಸಾವಿನ ಭಯವನ್ನು ಶಮನಗೊಳಿಸುವ ಗುರು ದೊರೆಯುವುದು ಪುಣ್ಯಪ್ರಾಪ್ತಿಯಾದಂತೆಯೇ ಸರಿ.

ಕಾಮ, ಅರ್ಥ, ಮೋಕ್ಷಗಳನ್ನು ಪಡೆಯುವಲ್ಲಿ ಸಹಕಾರಿಯಾಗುವ ಒಳ್ಳೆಯ ಹೆಂಡತಿ, ರಾಜ, ಗುರುಗಳು ಲಭಿಸಿದರೆ ಅಂಥವರ ಬಾಳು ಸಾರ್ಥಕವಾಗುವುದು. ಗುರು ಮೋಕ್ಷಗಾಮಿಗೆ ಮಾರ್ಗದರ್ಶಕ, ಹಾಗಾಗಿ ಯಮನ ಭಟರ (ಭವ ಬಂಧನದ) ಭಯವನ್ನು ಹೋಗಲಾಡಿಸುವವನು.

೧೨೧

ಹಡೆದೊಡವೆ ಹೋದ ಬಳಿಕಂ
ಉಡದೋದೆನು ಉಣ್ಣದೋದೆನಾರ್ಗೊಂದೆಡರಿಗೆ

ಕೊಡದೋದೆನೆಂದು ಮರುಗುವ
ಜಡಮತಿಗಳ ಕೇಡ ನೋಡು ಚೂಡಾರತ್ನಾ

ಹಡೆದೊಡವೆ=ಪಡೆದ ಒಡವೆ; ಹೋದ ಬಳಿಕ; ಉಡದೆ+ ಹೋದೆನು= ಉಟ್ಟುಕೊಳ್ಳದೆ ಹೋದೆನು; ಉಣ್ಣದೆ+ಹೋದೆನು+ಆರ್ಗೆ+ ಒಂದೆಡರಿಗೆ= ಉಣ್ಣದೆ ಹೋದೆನು, ಬಂದ ಕಷ್ಟಕ್ಕೆ; ಕೊಡದೆ+ಹೋದೆನು+ಎಂದು= ಕೊಡದೆ ಹೋದೆನು ಎಂದು; ಮರುಗುವ=ಪಶ್ಚಾತ್ತಾಪ ಪಡುವ; ಜಡಮತಿಗಳ= ಜಡಬುದ್ಧಿಯುಳ್ಳವರ; ಕೇಡ ನೋಡು=ಕೇಡನ್ನು ನೋಡು

ಪಡೆದ ಒಡವೆ ಕಳೆದುಹೋದ ಬಳಿಕ ಪಶ್ಚಾತ್ತಾಪ ಪಟ್ಟು ಫಲವೇನು? ಉಡದೆ, ಉಣ್ಣದೆ, ಕಷ್ಟದಲ್ಲಿರುವವರಿಗೆ ಕೊಡದೆ ಹೋದೆನಲ್ಲ ಎಂದು ಮರುಗಿದರೆ ಪ್ರಯೋಜನವಿಲ್ಲ. ಹೀಗೆ ಜಡಮತಿಗಳಾದವರು ಮಾಡುವ ಕೇಡನ್ನು ನೋಡು.

ತನ್ನ ಬಳಿ ಇದ್ದಾಗ ಕಷ್ಟದಲ್ಲಿರುವವರಿಗೆ ಕೈಲಾದಷ್ಟು ಸಹಾಯ ಮಾಡಬೇಕು. ಅಥವಾ ತಾನು ಉಂಡು, ಉಟ್ಟು, ಸಂತೋಷ ಪಡಬೇಕು. ಹಾಗಲ್ಲದಿದ್ದರೆ ತನ್ನಲ್ಲಿರುವ ಸಂಪತ್ತು ಅಥವಾ ಒಡವೆ ಕಳೆದು ಹೋದಾಗ ಪಶ್ಚಾತ್ತಾಪ ಪಡುವವರ ಕೇಡನ್ನು ನೋಡು ಎಂದು ಕವಿ ಹೇಳಿದ್ದಾನೆ.

೧೨೨

ಹರಿ ಹದ್ದಂ ಹರನೆತ್ತಂ
ಸರಸಿಜಭವನಂಚೆಯಂ ಕುಮಾರಂನವಿಲಂ
ಪರಶುಧರನಿಲಿಯನೇರಲು
ಅರಸಂಗೇಕಾನೆ ಕುದುರೆ ಚೂಡಾರತ್ನಾ

ಹರಿಹದ್ದಂ=ಹರಿ ಹದ್ದನ್ನು; ಹರನು+ಎತ್ತಂ=ಶಿವನು ಎತ್ತನ್ನು; ಸರಸಿಜ ಭವನ್+ಅಂಚೆಯಂ=ಕಮಲ ಜಾತನಾದ ಬ್ರಹ್ಮನು ಹಂಸವನ್ನು; ಕುಮಾರಂ ನವಿಲಂ=ಷಣ್ಮುಖನು ನವಿಲನ್ನು; ಪರಶುಧರನ್+ಇಲಿಯನ್+ಏರಲು=ಕೊಡಲಿಯ ಧರಿಸಿದ ಗಣಪತಿ; ಇಲಿಯನ್ನು ಹತ್ತಲು; ಅರಸರಿಗೇಕೆ ಆನೆ ಕುದುರೆ=ರಾಜರಿಗೇಕೆ ಆನೆ ಕುದುರೆ?

ಹರಿ ಅಥವಾ ವಿಷ್ಣುವಿಗೆ ಹದ್ದನ್ನು ಅಥವಾ ಗರುಡವನ್ನು, ಶಿವನು ಎತ್ತನ್ನು, ಬ್ರಹ್ಮನು ಹಂಸವನ್ನು, ಷಣ್ಮುಖನು ನವಿಲನ್ನು, ಗಣಪತಿ ಇಲಿಯನ್ನು ವಾಹನವಾಗಿಸಿಕೊಂಡಿರಲು ರಾಜರಿಗೇಕೆ ಆನೆ ಕುದುರೆ ಎಂದು ಪ್ರಶ್ನಿಸಿದ್ದಾನೆ ಕವಿ.

ಅರಸರ, ಅರಸೊತ್ತಿಗೆಯ ಬಗೆಗೆ ತಣ್ಣನೆಯ ಪ್ರತಿಭಟನೆ ಇಲ್ಲಿ ವ್ಯಕ್ತವಾಗಿದೆ. ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣೀಭೂತರಾದವರು ಬ್ರಹ್ಮ, ವಿಷ್ಣು, ಶಿವ ಮೊದಲಾದವರು. ಶಿವನ ಮಕ್ಕಳಾದ ಷಣ್ಮುಖ, ಗಣಪರು ಚಿಕ್ಕ ಚಿಕ್ಕ ಪ್ರಾಣಿಗಳನ್ನು ತಮ್ಮ ವಾಹನಗಳನ್ನಾಗಿಸಿಕೊಂಡಿರುವಾಗ ಈ ರಾಜರಿಗೇಕೆ ಆನೆ ಕುದುರೆಗಳು ಎಂದು ಲೇವಡಿ ಮಾಡಿದ್ದಾನೆ.

೧೨೩

ಹಲ್ಲು ವಿಷಂ ಫಣಿಪತಿಗಂ
ಎಲ್ಲ ವಿಷಂ ದುರ್ಜನಂಗದೆಂತೆನೆ ಪೇಳ್ವೆಂ
ಹಲ್ಲಿಂ ಹದುರಿಂ ಸೊಲ್ಲಿಂ
ಕೊಲ್ಲದೆ ಮಾಣ್ದಪನೆ ಸುಜನ ಚೂಡಾರತ್ನಾ

ಹಲ್ಲು ವಿಷಂ ಫಣಿಪತಿಗಂ=ನಾಗರಾಜನಿಗೆ ಅಥವಾ ಹಾವಿಗೆ ಹಲ್ಲಿನಲ್ಲಿ ಮಾತ್ರ ವಿಷವಿರುತ್ತದೆ; ಎಲ್ಲ ವಿಷಂ ದುರ್ಜನಂಗೆ ಅದು+ಎಂತು+ಎನೆ ಪೇಳ್ವೆಂ=ದೇಹವೆಲ್ಲ ವಿಷ ದುರ್ಜನನಾದವನಿಗೆ; ಅದು ಹೇಗೆಂದರೆ ಹೇಳುವನೆ; ಹಲ್ಲಿಂ ಹದುರಿಂ (?)=ಹಲ್ಲಿನಿಂದ; ಸೊಲ್ಲಿಂ=ಚಮತ್ಕಾರದ ಮಾತಿನಿಂದ; ಕೊಲ್ಲದೆ ಪೂಣ್ದಪನೆ ಸುಜನ=ಕೊಲ್ಲದೆ ಬಿಡುವನೆ ಸುಜನನಾದವನು.

ನಾಗರಾಜನಿಗೆ ಹಲ್ಲಿನಲ್ಲಿ ಮಾತ್ರ ವಿಷ, ದುರ್ಜನನಾದವನ ಶರೀರವೆಲ್ಲ ವಿಷ. ಅದು ಹೇಗೆಂದು ಹೇಳುವೆನು ಕೇಳು. ಚಮತ್ಕಾರಪೂರಿತ ಮಾತಿನಿಂದ ಕೊಲ್ಲದೆ ಬಿಡುವನೆ ಸುಜನನಾದವನು.

ದುರ್ಜನನಾದವನ ಬಗೆಗೆ ತಿಳಿಸುವ ಪದ್ಯವಿದು. ನಾಗರಾಜನಿಗೆ ಕೇವಲ ಹಲ್ಲಿನಲ್ಲಿ ವಿಷವಿದ್ದರೆ, ದುರ್ಜನನಾದವನಿಗೆ ಮೈಯೆಲ್ಲ ವಿಷ. ಯಾವ ಸಂದರ್ಭದಲ್ಲಿ ಏನನ್ನೂ ಕಕ್ಕುವನೊ ತಿಳಿಯದು. ಮೂರು ಮತ್ತು ನಾಲ್ಕನೆಯ ಸಾಲುಗಳು

ಸರಿಯಾಗಿ ಅನ್ವಯವಾಗುತ್ತಿಲ್ಲ. ದುರ್ಜನನಾದವನ ಬಗೆಗೆ ಹೇಳಿ, ಸಜ್ಜನನಾದವನು ಚಮತ್ಕಾರಿಕ ಮಾತುಗಳಿಂದ ಕೊಲ್ಲದೇ ಬಿಡುವನೆ ಎನ್ನಲಾಗಿದೆ. ದುರ್ಜನನಿಗೆ ಪ್ರತಿ ಸವಾಲೆಂಬಂತೆ ಸಜ್ಜನ ತನ್ನ ಮಾತುಗಳಿಂದಲೇ ಎಲ್ಲವನ್ನೂ ಸಾಧಿಸುವನು.

೧೨೪

ಹಸಿದುಂಬುದೊಸೆದು ನಲಿವುದಂ
ಬೆಸಗೊಂಡಡೆ ಪೇಳ್ವುದುಚಿತಮಂತಲ್ಲದೆಯುಂ
ಹಸಿದುಣ್ಣದೊಸೆದು ನಲಿಯದೆ
ಬೆಸಗೊಳ್ಳದೆ ಪೇಳ್ವನೆಗ್ಗ ಚೂಡಾರತ್ನಾ

ಹಸಿದು+ಉಂಬುದು+ಒಸೆದು+ನಲಿವುದು=ಹಸಿದು ಊಟ ಮಾಡುವುದು; ಸಂತೋಷದಿಂದ ನಲಿಯುವುದು; ಬೆಸಗೊಂಡಡೆ ಪೇಳ್ವುದು+ಉಚಿತಂ+ಅಂತು+ಅಲ್ಲದೆಯುಂ=ಕೇಳಿದರೆ ಹೇಳುವುದು ಒಳ್ಳೆಯದು; ಹಾಗಲ್ಲದೆ; ಹಸಿದು+ಉಣ್ಣದೆ+ಒಸೆದು ನಲಿಯದೆ ಬೆಸಗೊಳ್ಳದೆ ಪೇಳ್ವನ್+ಎಗ್ಗ=ಹಸಿವೆಯಾದಾಗ ಊಟ ಮಾಡದೆ, ಸಂತೋಷದಿಂದ ನಲಿದಾಡದೆ, ಕೇಳದಿದ್ದರೂ ಹೇಳುವವನು ದಡ್ಡ.

ಹಸಿವಾದಾಗ ಉಣ್ಣುವುದು, ಸಂತೋಷವಾದಾಗ ನಲಿಯುವುದು, ಯಾರಾದರೂ ಏನನ್ನಾದರೂ ಕೇಳಿದರೆ ಹೇಳುವುದು ಸಹಜಕ್ರಿಯೆಗಳು. ಹಾಗಲ್ಲದೆ ಹಸಿವಾದಾಗ ಉಣ್ಣದೆ, ಸಂತೋಷವಾದಾಗ ನಲಿಯದೆ, ಕೇಳದಿದ್ದರೂ ಹೇಳುವಂಥವನು ದಡ್ಡನೇ ಸರಿ.

ಮಾನವನ ಜೈವಿಕ ಪ್ರಕ್ರಿಯೆಗಳಲ್ಲಿ ಹಸಿವು, ತೃಷೆ, ಸಂತೋಷ, ಪರಸ್ಪರರ ಭಾವನೆಗಳನ್ನು ಹಂಚಿಕೊಳ್ಳುವುದು ಸಹಜ. ಹಾಗಲ್ಲದೆ ಸಾಂದರ್ಭಿಕವಾಗಿ ನಡೆದುಕೊಳ್ಳದೆ ವಿರುದ್ಧವಾಗಿ ನಡೆದುಕೊಂಡವನು ದಡ್ಡನೇ ಸರಿ. ಸುಮ್ಮನೆ ಗಳಹುವವನನ್ನು ಹುಚ್ಚನೆಂದು ಪರಿಗಣಿಸಲಾಗುತ್ತದೆ. ಸಂತೋಷವಾದಾಗ ಮನಸ್ಸು ಪ್ರಫುಲ್ಲವಾಗುತ್ತದೆ. ಹಾಗಲ್ಲದೆ ಬಿಗುಮಾನದಿಂದ ಇರುವವರನ್ನು ಏನೆನ್ನಬೇಕು. ಸಮಾಜದಲ್ಲಿ ಅಂತಹ ವ್ಯಕ್ತಿಗಳಿಲ್ಲದಿಲ್ಲ. ಅಂಥವರನ್ನು ಗಮನಿಸಿ ಕವಿ ಈ ರೀತಿ ಹೇಳಿದ್ದಾನೆನಿಸುತ್ತದೆ.

೧೨೫

ಹಾವಸೆಗೆ ಜಲವ ತೊರೆವರೆ
ದೇವಾಂಗನ ನೊಣವಿಗಂಜಿ ತೊರೆದವರುಂಟೇ
ಗಾವಿಲರ ಮಾತ ಕೇಳಿಯೆ
ಸೇವಕರ ತೊರೆದರುಂಟೆ ಚೂಡಾರತ್ನಾ

ಹಾವಸೆಗೆ=ಪಾಚಿಗೆ, ಜಲವ ತೊರೆವರೆ=ನೀರನ್ನು ಬಿಟ್ಟು ಬಿಡುವುದೇ? ದೇವಾಂಗ=ರೇಷ್ಮೆ ವಸ್ತ್ರ ನೊಣವಿಂಗಂಜಿ=ನೊಣಕ್ಕೆ ಹೆದರಿ ಪಟ್ಟಾವಳಿಯ (ರೇಷ್ಮೆವಸ್ತ್ರ) ತೊರೆದವರುಂಟೆ; ಗಾವಿಲರ ಮಾತ ಕೇಳಿಯೆ=ದಡ್ಡರ ಮಾತನ್ನು ಕೇಳಿ ಸೇವಕರ ತೊರೆವರುಂಟೆ=ಸೇವಕರನ್ನು ತೊರೆವವರಿರುವರೇ?

ಪಾಚಿಗೆ ಹೆದರಿ ನೀರನ್ನು ತೊರೆವ, ಪಟ್ಟಾವಳಿಯನ್ನು (ರೇಷ್ಮೆ ವಸ್ತ್ರ) ನೊಣಕ್ಕೆ ಹೆದರಿ ತೊರೆದವರುಂಟೆ, ದಡ್ಡರ ಮಾತನ್ನು ಕೇಳಿ ಸೇವಕರನ್ನು ತೊರೆವರುಂಟೆ?

ಮಹತ್ತ್ವವಾದ ವಿಷಯಗಳಿಗೆ ಬೆಲೆ ಕೊಡಬೇಕೇ ಹೊರತು ಅಲ್ಪ ವಿಚಾರಗಳಿಗೆ ಕಿವಿಗೊಡಬಾರದು ಎಂಬ ನೀತಿ ಮಾತು ಇಲ್ಲಿದೆ. ನೀರು ಪ್ರಮುಖವೇ ಹೊರತು ಪಾಚಿಯಲ್ಲ. ಹಾಗಾಗಿ ಪಾಚಿಗೆ ಹೆದರಿ ನೀರನ್ನು ತೊರೆಯಲು ಸಾಧ್ಯವೇ? ನೊಣ ಬಂದು ಕುಳಿತುಕೊಂಡಿತೆಂದು ಬೆಲೆ ಬಾಳುವ ರೇಷ್ಮೆ ಬಟ್ಟೆ ಬಿಡಲಾಗುವುದೇ? ದಡ್ಡರ ಮಾತನ್ನು ಕೇಳಿ ಸೇವಕರನ್ನು ತೊರೆಯುವವರು ಇರುವರೇ? ಸಾಮಾಜಿಕ ವ್ಯವಸ್ಥೆಯಲ್ಲಿ ಆಡಳಿತಗಾರರು ಮತ್ತಿತರರು ಎಷ್ಟು ಮುಖ್ಯವೋ ಸೇವಕರೂ ಅಷ್ಟೇ ಮುಖ್ಯ. ಅವರನ್ನು ತೊರೆಯಲು ಸಾಧ್ಯವೇ ಇಲ್ಲ.

೧೨೬

ಹಿಂದಂ ನೆನೆದವನೇ ಸುಖಿ
ಮುಂದಂ ನೆನೆದವನೆ ದುಃಖಿಯಿಂತೆರಡರೊಳಂ
ಬಂದುದನನುಭವಿಪನೇ ಬುಧ
ನೆಂದುಂ ಸಾಯದನೆ ದೇವ ಚೂಡಾರತ್ನಾ

ಹಿಂದಂ ನೆನೆದವನೆ ಸುಖಿ=ಹಿಂದಿನದನ್ನು ನೆನೆಯುವವನೇ ಸುಖಿ; ಮುಂದಂ ನೆನೆದವನೆ ದುಃಖಿ; ಇಂತು+ಎರಡರೊಳಂ=ಹೀಗೆ ಎರಡರಲ್ಲಿ; ಬಂದುದನ್ + ಅನುಭವಿಪನೇ = ಬಂದುದನ್ನುಅನುಭವಿಸುವವನೇ; ಬುಧನು+ ಎಂದುಂ ಸಾರುವನೆ ದೇವಂ=ಬುದ್ಧಿವಂತನೆಂದು, ಸಾರುವವನೆ ದೇವ.

ಹಿಂದಿನದನ್ನು ನೆನೆಯುವವನೇ ಸುಖಿ. ಮುಂದಿನದನ್ನು ನೆನೆಯುವವನೇ ದುಃಖಿ. ಹೀಗೆ ಈ ಎರಡರಲ್ಲಿ ಬಂದುದನ್ನು ಅನುಭವಿಸುವವನೆ ಬುದ್ಧಿವಂತ.

'ಹಿಂದಿನ ಪಾಡು ನೆನೆದುಕೊ, ಹಿಮ್ಮಡಿ ಕೊಳೆ ತೊಳೆದುಕೊ' ಎಂಬ ಮಾತೊಂದಿದೆ. ಹಿಂದಿನ ಸ್ಥಿತಿ ನೆನೆದು ಸಮಾಧಾನಿಯಾಗಿರಬೇಕೆ. ಬಂದದ್ದೆಲ್ಲ ಬರಲಿ ಎಂಬ ಭಾವನೆಯಿದ್ದರೆ ಇನ್ನೂ ಒಳ್ಳೆಯದು. ಮುಂದಿನದನ್ನು ನೆನೆದು ಚಿಂತಿಸಿ ಚಿಂತೆಯಲ್ಲಿ ಬೇಯುವುದಕ್ಕಿಂತ ಸದ್ಯದ ಪರಿಸ್ಥಿತಿ ಏನಿದೆಯೋ ಅದಕ್ಕೆ ತಕ್ಕಂತೆ ಜೀವನ ನಿರ್ವಹಿಸುವುದು ಬುದ್ಧಿವಂತನ ಗುಣ.

❑ ❑ ❑